ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಜುಲೈ 26, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 73 RNI : 27369/75

janathavani@mac.com
www.janathavani.com
☎ 08192 254736 91642 99999

## ಜಿಲ್ಲೆಯಾದ್ಯಂತ ಮುಂದುವರೆದ ಮಳೆ ಅಬ್ಬರ

### ಕುಂಬಳೂರಿನಲ್ಲಿ ಮನೆ ಗೋಡೆ ಕುಸಿದು ಮಗು ಸಾವು, ಶಾಸಕ-ಡಿಸಿ ಭೇಟಿ, 5 ಲಕ್ಷ ರೂ. ಪರಿಹಾರ

ಮಲೇಬೆನ್ನೂರು, ಜು.25- ಜಿಲ್ಲಾದ್ಯಂತ ವರುಣನ ಆರ್ಭಟ ಮಂಗಳವಾರವೂ ಮುಂದುವರೆದಿದೆ. ದಿನ ಪೂರ್ತಿ ಸುರಿಯುತ್ತಿರುವ ಮಳೆಯು ರಾಜ್ಯದ ನಡುನಾಡು ದಾವಣಗೆರೆಯಲ್ಲಿ ಮಲೆನಾಡಿನ ಅನುಭವ ಉಂಟು ಮಾಡಿದೆ.

ಸೋಮವಾರ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಶಾಲೆಗಳಿಗೆ ರಜೆ ನೀಡಲಾಗಿತ್ತಾದ್ದರಿಂದ ಮಕ್ಕಳು ತುಸು ನಿರಾಳರಾಗಿದ್ದರು. ಆದರೆ ಮಂಗಳವಾರ ಬಿಡದ ಮಳೆಯ ನಡುವೆಯೂ ಶಾಲೆಗಳಿಗೆ ಹೋಗಬೇಕಾಗಿತ್ತು. ಇನ್ನು ಕಚೇರಿ ಕಾರ್ಯಗಳಿಗೆ ಹೋಗಬೇಕಾದವರಿಗೆ ರೇನ್ ಕೋಟ್ ಹಾಗೂ ಛತ್ರಿ ಬಳಕೆ ಅನಿವಾರ್ಯವಾಗಿತ್ತು. ಬಿಡುವಿಲ್ಲದ ಮಳೆಯಿಂದಾಗಿ ನಗರದಲ್ಲಿ ವ್ಯಾಪಾರ, ವಹಿವಾಟು ಮಂದಗತಿಯಲ್ಲಿತ್ತು.



**ಗೋಡೆ ಕುಸಿದು ಮಗು ಸಾವು:** ಮಳೆಯಿಂದಾಗಿ ಮನೆ ಗೋಡೆ ಕುಸಿದು ಬಿದ್ದ ಪರಿಣಾಮ ಒಂದೂವರೆ ವರ್ಷದ ಹೆಣ್ಣು ಮಗು ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ಸೋಮವಾರ ತಡರಾತ್ರಿ ಕುಂಬಳೂರಿನಲ್ಲಿ ನಡೆದಿದೆ

ಗ್ರಾಮದ ರಾಮಜ್ಜರ ರಾಮಚಂದ್ರಪ್ಪನವರ ಮೊಮ್ಮಗಳು ಹಾಗೂ ಕೆಂಚಪ್ಪ ಮತ್ತು ಲಕ್ಷ್ಮಿದೇವಿ ಅವರ ಪುತ್ರಿ ಸ್ಫೂರ್ತಿ (16 ತಿಂಗಳು) ಮೃತಪಟ್ಟ ಮಗು.

ಘಟನೆಯಲ್ಲಿ ಮಗುವಿನ ತಂದೆ ಕೆಂಚಪ್ಪ ಅವರ ಕಾಲಿಗೆ ತೀವ್ರ ಪೆಟ್ಟಾಗಿದೆ. ತಾಯಿ ಲಕ್ಷ್ಮಿದೇವಿಗೂ ಗಾಯಗಳಾಗಿದ್ದು ತಮ್ಮ ಕಣ್ಮುಂದೆಯೇ ಮಗಳು ಸಾವನ್ನಪ್ಪಿರುವ ಆಘಾತದಲ್ಲಿದ್ದಾರೆ. ಹೆತ್ತವರು ಹಾಗೂ ಸಂಬಂಧಿಗಳ ಆಕ್ರಂದನ ಮುಗಿಲು ಮುಟ್ಟಿತ್ತು. ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಕೆಂಚಪ್ಪನವರ ತುಂಬು ಕುಟುಂಬ ಹಳೆಯ ಹಂಚಿನ ಸಣ್ಣ ಮನೆಯಲ್ಲಿ ವಾಸಿಸುತ್ತಿತ್ತು.

**ಘಟನೆ ವಿವರ :** ಸೋಮವಾರ ರಾತ್ರಿ ಎಂದಿನಂತೆ ಮನೆಯಲ್ಲಿ ಎಲ್ಲರೂ ಊಟ ಮಾಡಿ ಮಲಗಿದ್ದರು. ಕೆಂಚಪ್ಪ, ಲಕ್ಷ್ಮಿದೇವಿ ಅವರು ಪುತ್ರಿ ಸ್ಫೂರ್ತಿಯೊಂದಿಗೆ ಪ್ರತ್ಯೇಕವಾಗಿ ಮಲಗಿದ್ದರು. ರಾತ್ರಿ 12 ಗಂಟೆ ಸುಮಾರಿಗೆ ಇದ್ದಕ್ಕಿದ್ದಂತೆ ಗೋಡೆ ಕುಸಿದಿದೆ. ತಕ್ಷಣ ಸಮೀಪದಲ್ಲೇ ಮಲಗಿದ್ದ ಕುಟುಂಬದವರು ಎದ್ದು ಬಂದು ಕೆಂಚಪ್ಪ, ಲಕ್ಷ್ಮಿದೇವಿ ಮತ್ತು ಸ್ಫೂರ್ತಿ ಮೇಲೆ ಬಿದ್ದಿದ್ದ ಗೋಡೆ ಇಟ್ಟಿಗೆ-ಮಣ್ಣು ತೆರವು ಮಾಡಿ ಹೊರಗೆ ತೆಗೆಯುವಷ್ಟರಲ್ಲಿ ಸ್ಫೂರ್ತಿ ಮೃತಪಟ್ಟಿದ್ದಳು ಎನ್ನಲಾಗಿದೆ.



ಮೃತಪಟ್ಟ ಮಗು ಸ್ಫೂರ್ತಿ

ಆದರೂ ಸಮೀಪದ ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಫೂರ್ತಿ ಜೊತೆಗೆ ತಂದೆ-ತಾಯಿಯನ್ನು ಕರೆದುಕೊಂಡು ಹೋದಾಗ ವೈದ್ಯರು ಸ್ಫೂರ್ತಿಯನ್ನು ಪರೀಕ್ಷೆ ಮಾಡಿ ಮೃತಪಟ್ಟಿರುವುದನ್ನು ಖಚಿತಪಡಿಸಿದರು.

ವಿಷಯ ತಿಳಿದ ತಕ್ಷಣ ಮಧ್ಯರಾತ್ರಿಯೇ ತಹಶೀಲ್ದಾರ್ ಪೃಥ್ವಿ ಸಾನಿಕಂ, ಕಂದಾಯ ನಿರೀಕ್ಷಕ ಸಮೀರ್, ಗ್ರಾಮ ಲೆಕ್ಕಾಧಿಕಾರಿ ಶ್ರೀಧರ್ ಅವರು ಘಟನೆ ನಡೆದ ಸ್ಥಳಕ್ಕೆ ಆಗಮಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಬೆಳಿಗ್ಗೆ ವಿಷಯ ಗೊತ್ತಾಗುತ್ತಿದ್ದಂತೆಯೇ ಮೃತ ಮಗುವಿನ ಮನೆಯ ಬಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು ಆಗಮಿಸಿ ಗೋಡೆ ಬಿದ್ದಿರುವುದನ್ನು ಹಾಗೂ ಮಗುವನ್ನು ನೋಡಿ ಕಂಬನಿ ಮಿಡಿದರು.

ಶಾಸಕ ಬಿ.ಪಿ. ಹರೀಶ್ ಅವರು ಸ್ಥಳಕ್ಕೆ ಆಗಮಿಸಿ ಕುಟುಂಬದವರಿಗೆ ಸಾಂತ್ವನ ಹೇಳಿ, ಪ್ರಕೃತಿ ವಿಕೋಪದಡಿ 5 ಲಕ್ಷ ರೂ. ಪರಿಹಾರದ ಹಣ ಮೃತ ಮಗುವಿನ ಪೋಷಕರ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿರುವುದನ್ನು ತೋರಿಸಿ, ಆಶ್ರಯ ಮನೆ ಕಟ್ಟಿಸಿಕೊಡುವ ಭರವಸೆ ನೀಡಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರು ಪ್ರತ್ಯೇಕವಾಗಿ ಸ್ಥಳಕ್ಕೆ ಆಗಮಿಸಿ ಮೃತ ಮಗುವಿನ ಕುಟುಂಬದವರಿಗೆ ಧೈರ್ಯ ಹೇಳಿ ವೈಯಕ್ತಿಕ ನೆರವು ನೀಡಿದರು. ಸಂಜೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರೂ (3ನೇ ಪುಟಕ್ಕೆ)

### ಭದ್ರಾ, ಒಳಹರಿವು ಹೆಚ್ಚಳ

**ಭದ್ರಾ ಜಲಾಶಯಕ್ಕೆ ಸೋಮವಾರ 39,348 ಕ್ಯೂಸೆಕ್ಸ್ ಇದ್ದ ಒಳಹರಿವು ಮಂಗಳವಾರ ಬೆಳಿಗ್ಗೆ 31,425 ಕ್ಯೂಸೆಕ್ಸ್‌ಗೆ ಇಳಿಕೆ ಕಂಡಿತ್ತು. ಭದ್ರಾ ಜಲಾನಯನ ಪ್ರದೇಶದಲ್ಲಿ ಮಳೆ ಮತ್ತೆ ಹೆಚ್ಚಾಗಿರುವುದರಿಂದ ಮೂಲಗಳ ಪ್ರಕಾರ ಮಂಗಳವಾರ ಸಂಜೆ ಜಲಾಶಯಕ್ಕೆ 40 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ರಾತ್ರಿ ವೇಳೆಗೆ ಜಲಾಶಯದ ನೀರಿನ ಮಟ್ಟ 154 ಅಡಿ ದಾಟಿತ್ತು ಎನ್ನಲಾಗಿದೆ. ಇತ್ತ ಅಚ್ಚುಕಟ್ಟಿನ ರೈತರು ನಿತ್ಯ ಮಳೆ ಬರುತ್ತಿರುವುದರಿಂದ ಮತ್ತು ಜಲಾಶಯದ ನೀರಿನ ಮಟ್ಟ ಏರಿಕೆ ಆಗುತ್ತಿರುವುದನ್ನು ಗಮನಿಸಿ ಭತ್ತದ ಸಸಿ ಮಡಿ ಬೆಳೆಸಲು ಬೀಜ ಚೆಲ್ಲುತ್ತಿರುವುದು ಎಲ್ಲೆಡೆ ಕಂಡುಬಂತು.**

### ಉಕ್ಕಡಗಾತ್ರಿಗೆ ಡಿಸಿ, ಎಸಿ ಭೇಟಿ

ಮಲೇಬೆನ್ನೂರು, ಜು.25- ಭಾನುವಾರ ಮತ್ತು ಸೋಮವಾರ ಮಳೆ ಪ್ರಮಾಣ ಕಡಿಮೆಯಾಗಿದ್ದರೂ ನದಿಗಳಲ್ಲಿ ನೀರಿನ ಹರಿವು ಮಾತ್ರ ಕಡಿಮೆ ಆಗಿಲ್ಲ.

ಗಾಜನೂರಿನ ತುಂಗಾ ಜಲಾಶಯಕ್ಕೆ ಮಂಗಳವಾರ 60 ಸಾವಿರ ಕ್ಯೂಸೆಕ್ಸ್ ನೀರಿನ ಒಳಹರಿವು ಇದ್ದು, 62 ಸಾವಿರ ಕ್ಯೂಸೆಕ್ಸ್ ನೀರನ್ನು ಜಲಾಶಯದ 21 ಕ್ರೆಸ್ಟ್ ಗೇಟ್‌ಗಳ ಮೂಲಕ ನದಿಗೆ ಬಿಡಲಾಗುತ್ತಿದೆ.

ಜೊತೆಗೆ ನದಿ ಪಾತ್ರದ ಹಳ್ಳ-ಕಾಲುವೆಗಳಲ್ಲಿ ಹರಿಯುತ್ತಿರುವ ಮಳೆ ನೀರೂ ಬಂದು ನದಿಗೆ ಸೇರುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ಮಂಗಳವಾರವೂ ನೀರಿನ ಹರಿವು ಹೆಚ್ಚಾಗಿತ್ತು.

ತುಂಗಭದ್ರಾ ನದಿ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಉಕ್ಕಡಗಾತ್ರಿ-ಪತ್ತೇಪುರ ಸಂಪರ್ಕ ಸೇತುವೆ ಹಾಗೂ ಜಲಾವೃತಗೊಂಡಿರುವ ತೋಟ-ಗದ್ದೆಗಳನ್ನು ಮಂಗಳವಾರ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮತ್ತು ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಅವರು ಪ್ರತ್ಯೇಕವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇದಕ್ಕೂ ಮುನ್ನ ಡಿಸಿ ಶಿವಾನಂದ ಕಾಪಶಿ ಅವರು ಸುಕ್ಷೇತ್ರ ಉಕ್ಕಡಗಾತ್ರಿಗೆ ತೆರಳಿ ತುಂಗಭದ್ರಾ ನದಿ ನೀರು ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನವನ್ನು ಸುತ್ತುವರಿದಿರುವುದನ್ನು ವೀಕ್ಷಿಸಿ, ದೇವಸ್ಥಾನದಿಂದ ಕೈಗೊಂಡಿರುವ (3ನೇ ಪುಟಕ್ಕೆ)

## ಧಾರಾಕಾರ ಮಳೆಗೆ ಉಕ್ಕಿ ಹರಿಯುತ್ತಿರುವ ನದಿಗಳು

ಬೆಂಗಳೂರು, ಜು. 25 - ರಾಜ್ಯದಲ್ಲಿ ಧಾರಾಕಾರ ಮಳೆ ಮುಂದುವರೆದಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿಗಳಲ್ಲಿ ವ್ಯಾಪಕ ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಇಂದು ಜಿಲ್ಲಾಧಿಕಾರಿಗಳ ಜೊತೆ ಸಿಎಂ ಸಭೆ**

ಕಳೆದ ಜೂನ್ 1ರಿಂದ ಜುಲೈ 24ರವರೆಗೆ ಸಂಭವಿಸಿದ ಮಳೆ ಅನಾಹುತಗಳಲ್ಲಿ 27 ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ಬಹುತೇಕರು ಸಿಡಿಲಿಗೆ ಸಿಲುಕಿ ಮೃತಪಟ್ಟವರು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದ್ದಾರೆ.

ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕಿನಲ್ಲಿ ಸುರಿದ ಭಾರೀ ಮಳೆಗೆ ಸಿಲುಕಿ ಲಿಂಗೊಟ್ಟುವಿನಲ್ಲಿರುವ ಅಣೆಕಟ್ಟೆಯ ಒಂದು ಭಾಗ ಕೊಚ್ಚಿ ಹೋಗಿದೆ.

ಚಿಕ್ಕಮಗಳೂರಿನಲ್ಲಿ ಭದ್ರಾ ಹಾಗೂ ಶಿವಮೊಗ್ಗದಲ್ಲಿ ತುಂಗಾ ನದಿಗಳು ಉಕ್ಕಿ ಹರಿಯುತ್ತಿವೆ. ಕೃಷ್ಣಾ ನದಿ ಹಾಗೂ ಉಪ ನದಿಗಳಾದ ಮಲಪ್ರಭ ಹಾಗೂ ಘಟಪ್ರಭಗಳು ಉಕ್ಕಿ ಹರಿಯುತ್ತಿದ್ದು, ಬೆಳಗಾವಿಯ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಮತ್ತು (4ನೇ ಪುಟಕ್ಕೆ)

## ವಿಪಕ್ಷಗಳಿಂದ ಅವಿಶ್ವಾಸ ನಿಲುವಳಿ ಸಾಧ್ಯತೆ

ನವದೆಹಲಿ, ಜು. 25 - ಮಣಿಪುರ ವಿಷಯದ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಮಾತನಾಡುವಂತೆ ಮಾಡಲು ಕೆಲ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಅವಿಶ್ವಾಸ ನಿಲುವಳಿ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪ್ರತಿಪಕ್ಷಗಳ ಒಕ್ಕೂಟವಾದ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (ಐ.ಎನ್.ಡಿ.ಐ.ಎ.) ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ. ಮಣಿಪುರ ವಿಷಯದ ಬಗ್ಗೆ ರಾಜ್ಯಸಭೆಯಲ್ಲೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಕುರಿತು ಚರ್ಚೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ 2018ರ ಜುಲೈನಲ್ಲಿ ಪ್ರತಿಪಕ್ಷಗಳು ಅವಿಶ್ವಾಸ ನಿಲುವಳಿ ಮಂಡಿಸಿದ್ದವು. ಆದರೆ, ಅವಿಶ್ವಾಸ ನಿಲುವಳಿ ಬಿದ್ದು ಹೋಗಿತ್ತು. ಈ ಬಾರಿಯೂ ಸಂಖ್ಯಾಬಲ ಇಲ್ಲ. ಆದರೂ, ಮಣಿಪುರ ವಿಷಯವನ್ನು ಪ್ರಬಲವಾಗಿ ಪ್ರಸ್ತಾಪಿಸಲು ವಿಪಕ್ಷಗಳು ಅವಿಶ್ವಾಸ ನಿಲುವಳಿಗೆ ಮುಂದಾಗಬಹುದಾಗಿದೆ.

ಪ್ರಸಕ್ತ ಲೋಕಸಭೆಯಲ್ಲಿ 543 ಸ್ಥಾನಗಳ ಪೈಕಿ ಐದು ಖಾಲಿ ಇವೆ. ಬಿಜೆಪಿ ನೇತೃತ್ವದ ಎನ್.ಡಿ.ಎ. 330 ಸದಸ್ಯರನ್ನು ಹೊಂದಿದೆ. ವಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಎ.ಐ. 140 ಹಾಗೂ ಇತರೆ ಪಕ್ಷಗಳು 60 ಸ್ಥಾನಗಳನ್ನು ಹೊಂದಿವೆ.

## ಅಂಬಾಭವಾನಿ ಬ್ಯಾಂಕ್‌ಗೆ ಗೋಪಾಲರಾವ್ ಮಾನೆ ಅಧ್ಯಕ್ಷ

### ಉಪಾಧ್ಯಕ್ಷರಾಗಿ ಗಿರಿಧರ್ ಡಿ.ಮೆಹರ್‌ವಾಡೆ





ದಾವಣಗೆರೆ, ಜು. 25- ಸ್ಥಳೀಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಶ್ರೀ ಅಂಬಾಭವಾನಿ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಮರಾಠ ಸಮಾಜದ ಹಿರಿಯ ಮುಖಂಡ ಗೋಪಾಲರಾವ್ ಮಾನೆ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎಸ್.ಎಸ್.ಕೆ. ಸಮಾಜದ ಮುಖಂಡರೂ, ಶ್ರೀ ಭವಾನಿ ಗ್ಲಾಸ್ ಅಂಡ್ ಪ್ಲೈವುಡ್ಸ್ ಮಾಲೀಕರೂ ಆದ ಗಿರಿಧರ್ ಡಿ. ಮೆಹರ್‌ವಾಡೆ ಚುನಾಯಿತಗೊಂಡಿದ್ದಾರೆ.

ಕಳೆದ ವಾರ ಜರುಗಿದ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯ ನಂತರ ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ನೂತನ ಆಡಳಿತ ಮಂಡಳಿ ಸಭೆಯಲ್ಲಿ ಹೊಸ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ಅವಿರೋಧವಾಗಿ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಗೋಪಾಲರಾವ್ ಮಾನೆ ಅವರ ಹೆಸರನ್ನು ನಿರ್ದೇಶಕ ಬಾಬುರಾವ್ ಎಸ್. ಸಾಳಂಕಿ ಸೂಚಿಸಿದಾಗ, ಅದನ್ನು (4ನೇ ಪುಟಕ್ಕೆ)

## ಸಹಕಾರಿ ತಿದ್ದುಪಡಿ ಕಾಯ್ದೆ ಅಂಗೀಕಾರ

ನವದೆಹಲಿ, ಜು. 25 - ಬಹು ರಾಜ್ಯಗಳ ಸಹಕಾರಿ ಸಂಸ್ಥೆಗಳಲ್ಲಿ ಪಾರದರ್ಶಕತೆ ತರುವ ಸಲುವಾಗಿ ಹಾಗೂ ಚುನಾವಣೆಗಳಿಗಾಗಿ ನಿಯಂತ್ರಕ ವ್ಯವಸ್ಥೆ ರೂಪಿಸುವ ಉದ್ದೇಶದ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಕೇಂದ್ರ ಸಹಕಾರಿ ಸಚಿವ ಅಮಿತ್ ಷಾ ಅವರು ಬಹು ರಾಜ್ಯಗಳ ಸಹಕಾರಿ ಸೊಸೈಟಿಗಳ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಈ ಮಸೂದೆಯಿಂದ ಸಹಕಾರಿ ವಲಯದಲ್ಲಿ ಹೊಸ ಯುಗ ಆರಂಭವಾಗಲಿದೆ ಎಂದವರು ಹೇಳಿದರು.

ಮಣಿಪುರ ವಿಷಯ ಕುರಿತು ಗದ್ದಲ ನಡೆಯುತ್ತಿದ್ದ ಮಧ್ಯೆಯೇ ಮಸೂದೆ ಮಂಡಿಸಲಾಯಿತು. ಕೇವಲ ಮೂವರು ಸದಸ್ಯರು ಮಾತ್ರ ಮಸೂದೆ ಕುರಿತ ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು.

## ಗೃಹಲಕ್ಷ್ಮಿ: ಜಿಲ್ಲೆಯಲ್ಲಿ 1.62 ಲಕ್ಷ ಫಲಾನುಭವಿಗಳ ನೋಂದಣಿ ಪೂರ್ಣ

ದಾವಣಗೆರೆ, ಜು. 25- ಜಿಲ್ಲೆಯಲ್ಲಿ ಗೃಹ ಲಕ್ಷ್ಮಿ ಯೋಜನೆಯಡಿ 1.62 ಲಕ್ಷ ಫಲಾನುಭವಿಗಳ ನೋಂದಣಿ ಕಾರ್ಯ ಪೂರ್ಣಗೊಂಡಿರುವುದಾಗಿ ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

**ಜಿಲ್ಲಾದ್ಯಂತ 411 ನೋಂದಣಿ ಕೇಂದ್ರಗಳು**

**ಅರ್ಜಿ ಸಲ್ಲಿಕೆಗೆ ಕಾಲ ಮಿತಿ ಇಲ್ಲ**

ಈ ಯೋಜನೆಯಡಿ ಪಡಿತರ ಕಾರ್ಡ್ ಹೊಂದಿದ ಕುಟುಂಬದ ಯಜಮಾನಿಗೆ ಮಾಸಿಕ 2 ಸಾವಿರ ರೂ.ಗಳನ್ನು ಡಿ.ಬಿ.ಟಿ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

ಜಿಲ್ಲೆಯಲ್ಲಿ ಅಂದಾಜು 4.50 ಲಕ್ಷ ಫಲಾನುಭವಿಗಳಿದ್ದು, ಇಲ್ಲಿಯವರೆಗೆ 1,62,504 ಫಲಾನುಭವಿಗಳ ನೋಂದಣಿ ಕಾರ್ಯ ಪೂರ್ಣಗೊಂಡಿದೆ. ಉಳಿದ ಫಲಾನುಭವಿಗಳ ಅರ್ಜಿಗಳನ್ನು ಒಂದು ವಾರದೊಳಗೆ ನೋಂದಣಿ ಮಾಡಲು ಸಾಧ್ಯವಿದೆ. ಜಿಲ್ಲೆಯಾದ್ಯಂತ ಒಟ್ಟು 411 ನೋಂದಣಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅರ್ಜಿ ಸಲ್ಲಿಸಲು ಯಾವುದೇ ಕಾಲಮಿತಿ ಇರುವುದಿಲ್ಲ. ಆದ್ದರಿಂದ ಜನರು ನೂಕುನುಗ್ಗಲು ಅಥವಾ ಜನ ಸಂದಣಿ ಆಗದಂತೆ ಸಹಕರಿಸಿ ಸಾವಧಾನವಾಗಿ ಅರ್ಜಿ (4ನೇ ಪುಟಕ್ಕೆ)

## ದಾವಣಗೆರೆ ಡಿಸಿ ಆಗಿ ಡಾ. ವೆಂಕಟೇಶ್



ಬೆಂಗಳೂರು, ಜು. 25 - ದಾವಣಗೆರೆ ಜಿಲ್ಲಾಧಿಕಾರಿಯನ್ನಾಗಿ ಡಾ. ಎಂ.ವಿ. ವೆಂಕಟೇಶ್ ಅವರನ್ನು ನೇಮಿಸಿ, ರಾಜ್ಯ ಸರ್ಕಾರ ಇಂದು ಆದೇಶಿಸಿದೆ.

ಜಿಲ್ಲಾಧಿಕಾರಿಯಾಗಿದ್ದ ಶಿವಾನಂದ ಕಾಪಶಿ ಅವರನ್ನು ವರ್ಗಾವಣೆ ಮಾಡಿರುವ ಸರ್ಕಾರ, ಅವರ ಸ್ಥಾನಕ್ಕೆ ವೆಂಕಟೇಶ್ ಅವರನ್ನು ನೇಮಿಸಿದೆ.

ಕಳೆದ ಒಂದು ವರ್ಷದಿಂದ ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದ ಶಿವಾನಂದ ಕಾಪಶಿ ಅವರಿಗೆ ಯಾವುದೇ ಸ್ಥಳ ತೋರಿಸದೇ ವರ್ಗಾವಣೆ ಮಾಡಲಾಗಿದೆ.

2009ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಡಾ. ವೆಂಕಟೇಶ್, ಈ ಮೊದಲು ಪಶು ಸಂಗೋಪನೆ ಇಲಾಖೆ ಆಯುಕ್ತರಾಗಿದ್ದರು. ಅದಕ್ಕೂ ಮುನ್ನ ಜಲನಯನ ಅಭಿವೃದ್ಧಿ ಇಲಾಖೆ ಆಯುಕ್ತರಾಗಿ ಹಾಗೂ ಮಂಡ್ಯ ಜಿಲ್ಲೆ ಜಿಲ್ಲಾಧಿಕಾರಿಯಾಗಿದ್ದರು.

## ದೂಡಾ ಭೂಸ್ವಾಧೀನಾಧಿಕಾರಿ ಆಗಿ ಎಸ್. ರವಿ ನೇಮಕ

ಬೆಂಗಳೂರು, ಜು.25- ಸ್ಥಳ ನಿರೀಕ್ಷಣೆಯಲ್ಲಿದ್ದ 16 ಕೆಎಎಸ್ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ, ವರ್ಗಾಯಿಸಿ, ಸರ್ಕಾರ ಇಂದು ಆದೇಶವನ್ನು ಜಾರಿಗೊಳಿಸಿದೆ.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಇಲಾಖೆಯ ವಿಶೇಷ ಭೂ ಸ್ವಾಧಿನಾಧಿಕಾರಿಯನ್ನಾಗಿ ಎಸ್.ರವಿ, ದಾವಣಗೆರೆ ಮಹಾನಗರ ಪಾಲಿಕೆಯ ಉಪ ಆಯುಕ್ತರನ್ನಾಗಿ (ಆಡಳಿತ) ಜಿ.ನಳಿನ ಅವರುಗಳನ್ನು ಸರ್ಕಾರ ನೇಮಕ ಮಾಡಿದೆ.

## ಜೈವಿಕ ವೈವಿಧ್ಯತೆ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ನವದೆಹಲಿ, ಜು. 25 - ಮಣಿಪುರ ಹಿಂಸಾಚಾರ ಕುರಿತು ಪ್ರತಿಪಕ್ಷಗಳು ಪ್ರತಿಭಟನೆ ನಡೆಸುತ್ತಿರುವುದರ ಮಧ್ಯೆ ಜೈವಿಕ ವೈವಿಧ್ಯತೆ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿದೆ.

2002ರ ಜೈವಿಕ ವೈವಿಧ್ಯತೆ ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಮಂಡಿಸಲಾಗಿದೆ.

## 'ನನ್ನ ಲೈಫ್ - ನನ್ನ ಸ್ವಚ್ಛ ನಗರ' ಪ್ರಶಸ್ತಿಗೆ ದಾವಣಗೆರೆ ನಗರ ಪಾಲಿಕೆ ಆಯ್ಕೆ

ದಾವಣಗೆರೆ, ಜು.25- ಸ್ವಚ್ಛ ನಗರಕ್ಕೆ ಕರ್ನಾಟಕ ಸರ್ಕಾರ ಕೊಡಮಾಡುವ 'ನನ್ನ ಲೈಫ್ - ನನ್ನ ಸ್ವಚ್ಛ ನಗರ' ಪ್ರಶಸ್ತಿಗೆ ದಾವಣಗೆರೆ ಮಹಾ ನಗರ ಪಾಲಿಕೆ ಆಯ್ಕೆಯಾಗಿದೆ ಎಂದು ಸರ್ಕಾ ರದ ಪೌರಾಡಳಿತ ನಿರ್ದೇಶನಾಲಯ ತಿಳಿಸಿದೆ.



ಈ ಪ್ರಶಸ್ತಿಗೆ ಆಯ್ಕೆಯಾಗಿರುವ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿದಂತೆ 6 ನಗರಗಳು ಆಯ್ಕೆಯಾಗಿದ್ದು, ಈ ಪೈಕಿ ದಾವಣಗೆರೆ ಮಹಾನಗರ ಪಾಲಿಕೆಯೂ ಒಂದು.

ಬಿಬಿಎಂಪಿ ಅಲ್ಲದೇ, ಮೈಸೂರು ಮಹಾನಗರ ಪಾಲಿಕೆ, ಮಂಗಳೂರು ಮಹಾನಗರ ಪಾಲಿಕೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ದಾವಣಗೆರೆ ಮಹಾನಗರ ಪಾಲಿಕೆ ಮತ್ತು ಹಾಸನ ನಗರಸಭೆ ಈ ಪ್ರಶಸ್ತಿಗೆ ಭಾಜನವಾಗಿವೆ.

ಈ ಸಂಬಂಧ ನಾಡಿದ್ದು ದಿನಾಂಕ 27 ರಂದು ಬೆಂಗಳೂರಿನಲ್ಲಿ ಆಯೋಜನೆಗೊಂಡಿರುವ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರ ಕಚೇರಿ ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.



ಚಿತ್ರ: ರಫೀಕ್, ಜನತಾವಾಣಿ

**ಬಿಸಿ ಬಿಸಿ ಮಿರ್ಚಿ ..**

**ದಾವಣಗೆರೆಯಲ್ಲಿ ಸತತವಾಗಿ ಸುರಿಯುತ್ತಿರುವ ಮಳೆ ಹಾಗೂ ತಂಡಿ ವಾತಾವರಣದಿಂದಾಗಿ ಸಂಜೆ ತಿಂಡಿ ಹೋಟೆಲ್‌ಗಳಲ್ಲಿ ಅದರಲ್ಲೂ ಮಂಡಕ್ಕಿ, ಮೆಣಸಿನಕಾಯಿಗೆ ಹೆಚ್ಚಿನ ಬೇಡಿಕೆ ಉಂಟಾಗಿತ್ತು. ಜಯದೇವ ವೃತ್ತ ಸೇರಿದಂತೆ ಕಾರಾ-ಮಂಡಕ್ಕಿ ಅಂಗಡಿಗಳಲ್ಲಿ ಬಿಸಿ ಬಿಸಿ ಮಿರ್ಚಿಗಳು ಬಾಣಲೆಯಿಂದ ಹೊರ ಬರುತ್ತಿದ್ದಂತೆ ಖಾಲಿಯಾಗುತ್ತಿದ್ದವು.**

## ಈಸ್ಟ್ ಇಂಡಿಯಾ, ಮುಜಾಹಿದ್ದೀನ್‌ಗಳೂ ಇಂಡಿಯಾ ಎಂದು ಹೆಸರಿಟ್ಟುಕೊಂಡಿವೆ

ನವದೆಹಲಿ, ಜು. 25 - ಪ್ರತಿಪಕ್ಷಗಳ ಒಕ್ಕೂಟ ಐ.ಎನ್.ಡಿ.ಐ.ಎ. (ಇಂಡಿಯಾ) ಎಂಬ ಹೆಸರಿಟ್ಟುಕೊಂಡಿರುವುದನ್ನು ಲೇವಡಿ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ತೀವ್ರವಾದಿ ಸಂಘಟನೆಗಳಾದ ಇಂಡಿಯನ್ ಮುಜಾಹಿದ್ದೀನ್ ಹಾಗೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗಳೂ ಸಹ ತಮ್ಮ ಹೆಸರಿನಲ್ಲಿ ಇಂಡಿಯಾ ಹೊಂದಿವೆ ಎಂದಿದ್ದಾರೆ.

**ಪ್ರತಿಪಕ್ಷಗಳ ಒಕ್ಕೂಟದ 'ಇಂಡಿಯಾ' ಹೆಸರಿಗೆ ಪ್ರಧಾನಿ ಮೋದಿ ಲೇವಡಿ**

ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಪ್ರತಿಪಕ್ಷಗಳು ತಮ್ಮನ್ನು ತಾವು ಐ.ಎನ್.ಡಿ.ಐ.ಎ. ಹೆಸರಿನಿಂದ ಬಣ್ಣಿಸಿಕೊಳ್ಳುತ್ತಿವೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಈಸ್ಟ್ ಇಂಡಿಯಾ ಕಂಪನಿ, ಇಂಡಿಯನ್ ಮುಜಾಹಿದ್ದೀನ್, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗಳೂ ಸಹ ತಮ್ಮ ಹೆಸರಿನಲ್ಲಿ ಇಂಡಿಯಾ ಹೊಂದಿವೆ. ಕೇವಲ ಇಂಡಿಯಾ ಹೆಸರು ಬಳಸುವುದರಿಂದ ಏನೂ ಆಗುವುದಿಲ್ಲ ಎಂದಿದ್ದಾರೆ.

ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಬಿಜೆಪಿ ನಾಯಕ ರವಿ ಶಂಕರ್ ಪ್ರಸಾದ್ ಅವರು ಪ್ರಧಾನಿ (3ನೇ ಪುಟಕ್ಕೆ)

### ಖರ್ಗೆ ತೀವ್ರ ತರಾಟೆ

**ನವದೆಹಲಿ, ಜು. 25 - ಪ್ರತಿಪಕ್ಷಗಳ ಒಕ್ಕೂಟವನ್ನು ಟೀಕಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ನೀವೇನೇ ಕರೆದರೂ ನಾವು ಇಂಡಿಯಾ ಆಗಿದ್ದೇವೆ. ಮಣಿಪುರದಲ್ಲಿ ಭಾರತದ ವಿಚಾರ ಬೆಳೆಸುತ್ತೇವೆ ಎಂದಿದ್ದಾರೆ. ರಾಜ್ಯಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾವು ಮಣಿಪುರದ ಬಗ್ಗೆ ಮಾತನಾಡುತ್ತಿದ್ದೇವೆ. ಮಣಿಪುರ ಉರಿಯುತ್ತಿದೆ. ಪ್ರಧಾನ ಮಂತ್ರಿ** (3ನೇ ಪುಟಕ್ಕೆ)

## ಕೇದಾರನಾಥದಲ್ಲಿ ಗಾಜಿನ ಕೋಣೆ ನಿರ್ಮಾಣ

ಡೆಹರಾಡೂನ್, ಜು. 25 - ಭಕ್ತರ ದೇಣಿಗೆ ಹಾಗೂ ಕೊಡುಗೆಗಳನ್ನು ಎಣಿಸಲು ಕೇದಾರನಾಥ ದೇವಾಲಯದಲ್ಲಿ ಪಾರದರ್ಶಕ ಗಾಜಿನ ಕೋಣೆಯೊಂದನ್ನು ನಿರ್ಮಿಸಲಾಗಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಬದರೀನಾಥ ಕೇದಾರನಾಥ ದೇವಾಲಯ ಸಮಿತಿ ಅಧ್ಯಕ್ಷ ಅಜೇಂದ್ರ ಅಜಯ್, ಸೋಮವಾರದಿಂದ ಪಾರದರ್ಶಕ ಕೋಣೆ ಕಾರ್ಯಾರಂಭ ಮಾಡಿದೆ ಎಂದು ತಿಳಿಸಿದ್ದಾರೆ.

ಗಾಜಿನ ಕೋಣೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

## ಐದನೇ ಬಾರಿ ಕಕ್ಷೆ ಏರಿಕೆ

ಬೆಂಗಳೂರು, ಜು. 25 - ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಮಂಗಳವಾರದಂದು ಚಂದ್ರಯಾನ - 3ರ ಕಕ್ಷೆಯನ್ನು ಐದನೇ ಬಾರಿ ಏರಿಸಿದೆ. ಇದರಿಂದಾಗಿ ಉಪ ಗ್ರಹವು 236 - 1,27,609 ಕಿ.ಮೀ.ಗಳ ಕಕ್ಷೆ ತಲುಪಿದೆ. ಆಗಸ್ಟ್ 1ರಂದು ಮಧ್ಯರಾತ್ರಿ 12 ಗಂಟೆಗೆ ಕಕ್ಷೆಯನ್ನು ಇನ್ನಷ್ಟು ಏರಿಸಲಾಗುವುದು ಎಂದು ಇಸ್ರೋ ಹೇಳಿದೆ.

# ಮಹಿಳೆಯರ ರಕ್ಷಣೆಯಲ್ಲಿ ಮೋದಿ ಸರ್ಕಾರ ವಿಫಲ

## ಹೊನ್ನಾಳಿಯಲ್ಲಿನ ಪ್ರತಿಭಟನೆಯಲ್ಲಿ ಪ್ರಜಾ ಪರಿವರ್ತನ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಡಿ. ಈಶ್ವರಪ್ಪ

ಹೊನ್ನಾಳಿ, ಜು. 25 - ಮಣಿಪುರದಲ್ಲಿ ಜನಾಂಗೀಯ ಘರ್ಷಣೆ ಸೇರಿದಂತೆ ದೇಶದಲ್ಲಿ ದಲಿತರು, ಆದಿವಾಸಿಗಳು, ಹಿಂದುಳಿದ ಸಮುದಾಯಗಳ ಬೆತ್ತಲೆ ಮೆರವಣಿಗೆ, ಅತ್ಯಾಚಾರಗಳು ನಡೆಯುತ್ತಿದ್ದರೂ ಕೂಡ ಮಹಿಳೆಯರ ರಕ್ಷಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ವಿಫಲವಾಗಿದೆ ಎಂದು ಪ್ರಜಾ ಪರಿವರ್ತನ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಡಿ. ಈಶ್ವರಪ್ಪ ಹೇಳಿದರು.

ಮಂಗಳವಾರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ತಾಲ್ಲೂಕು ಕಛೇರಿವರೆಗೆ ಪ್ರಜಾ ಪರಿವರ್ತನ ವೇದಿಕೆ ತಾಲ್ಲೂಕು ಘಟಕದ ವತಿಯಿಂದ ಮಣಿಪುರದಲ್ಲಿ ಜನಾಂಗೀಯ ಘರ್ಷಣೆ ಮಹಿಳೆಯರ ಬೆತ್ತಲೆ ಮೆರವಣಿಗೆ, ಶಿವಮೊಗ್ಗದಲ್ಲಿ ಅಪ್ರಾಪ್ತೆ ಬಾಲಕಿಯ ಮೇಲೆ ಅತ್ಯಾಚಾರ ಧರ್ಮಸ್ಥಳ ಮತ್ತು ಗುಲ್ಬರ್ಗದಲ್ಲಿ ಬಾಲಕಿಯರ ಅತ್ಯಾಚಾರ ಮತ್ತು ಕೊಲೆ ಮಾಡಿರುವುದನ್ನು ಖಂಡಿಸಿ, ಪ್ರತಿಭಟನೆ ನಡೆಸಿ, ರಾಷ್ಟ್ರಪತಿವರಿಗೆ ತಲುಪುವಂತೆ ಹೊನ್ನಾಳಿ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ ಅವರಿಗೆ ಮನವಿ ಸಲ್ಲಿಸಿದರು.



ಮಣಿಪುರದ ಕುಕಿ ಸಮುದಾಯದ ಮಹಿಳೆಯರನ್ನು ಸಾರ್ವಜನಿಕವಾಗಿ ಬೆತ್ತಲೆಗೊಳಿಸಿ ಅತ್ಯಾಚಾರವೆಸಗಿರುವುದು ಅತ್ಯಂತ ಖಂಡನೀಯ ಹಾಗೂ ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಾಗಿದೆ ಎಂದರು.

ಅಲ್ಲಿನ ರಾಜ್ಯ ಸರ್ಕಾರ ಘಟನೆ ತಡೆದು ನಿಯಂತ್ರಿಸಲು ಸಂಪೂರ್ಣ ವಿಫಲವಾಗಿದೆ, ಸರ್ಕಾರ ಗುಲಾಮ ಕೊರರ ಪರವಾಗಿ ಮೃದುಧೋರಣೆ ತೋರುತ್ತಿದ್ದು ಕೂಡಲೇ ಮಣಿಪುರದ ಸರ್ಕಾರವನ್ನು ವಜಾಗೊಳಿಸಬೇಕು ಎಂದು ರಾಜ್ಯ ಮತ್ತು ತಾಲ್ಲೂಕು ಘಟಕ ಒತ್ತಾಯಿಸುತ್ತದೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬೇಟಿ ಬಚಾವೋ, ಬೇಟಿ ಪಡಾವೋ ಘೋಷಣೆ ಕೇವಲ ಘೋಷಣೆಗಳಾಗಿವೆ ಅನುಷ್ಠಾನಗೊಂಡಿಲ್ಲ. ಮಣಿಪುರದಲ್ಲಿ ಸುಮಾರು 75 ದಿನಗಳು ಕಳೆದರೂ ಪ್ರಧಾನಿ ನರೇಂದ್ರ ಮೋದಿ ಸ್ಥಳಕ್ಕೆ ಭೇಟಿ ನೀಡುವ ಸೌಜನ್ಯ ತೋರಿಲ್ಲ. ಅವರು ಕಲ್ಲು ಹೃದಯದ ಪ್ರಧಾನಿ. ದೇಶದ ಆಂತರಿಕ ಘಟನೆಗಳನ್ನು ನಿಯಂತ್ರಿಸುವಲ್ಲಿ ವಿಫಲರಾಗಿದ್ದಾರೆ ಎಂದರು.

ಧರ್ಮಸ್ಥಳದಲ್ಲಿ ನಡೆದ ಬಾಲಕಿ ಅತ್ಯಾಚಾರ ಘಟನೆ ತುಂಬಾ ಅಮಾನೀಯವಾಗಿದ್ದು ಕೊಲೆ ಮಾಡಿರುವ ಅಪರಾಧಿಗಳನ್ನು ಬಂಧಿಸಬೇಕು, ಶಿವಮೊಗ್ಗದಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರವೆಸಗಿರುವ ಕ್ರೈಸ್ತ ಪಾದ್ರಿಯನ್ನು ಮತ್ತು ಗುಲ್ಬರ್ಗದಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಅಪರಾಧಿಗಳನ್ನು ಅತ್ಯಂತ ಉಗ್ರವಾಗಿ ಶಿಕ್ಷಿಸಬೇಕು ಎಂದು ತಮ್ಮ ವೇದಿಕೆ ಆಗ್ರಹಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಜಾ ಪರಿವರ್ತನ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್. ಕೆ. ಕೃಷ್ಣ ಅರಕೆರೆ, ತಾಲ್ಲೂಕು ಅಧ್ಯಕ್ಷ ಕೆ.ಓ. ಹನುಮಂತಪ್ಪ, ರೇಣುಕಮ್ಮ ಮಾತನಾಡಿದರು.

ಪ್ರತಿಭಟನೆಯಲ್ಲಿ ಎನ್.ಲೋಕೇಶ್, ಪಕೀರಪ್ಪ, ಶಿವಮೂರ್ತಿ, ಹೇಮಮ್ಮ, ಗೌರಮ್ಮ, ಇರ್ಫಾನ್ ಭಾಷಾ, ಜೀವನ್, ಮಂಜು, ರೇಣುಕ, ಜಗದೀಶ್ ಕವಿತ ಮಹೇಶ್, ತಿಪ್ಪೇಶ್ ಆಶಾ, ಮೀನಾಕ್ಷಮ್ಮ, ಲತಾ ಸೇರಿದಂತೆ ಇತರರು ಇದ್ದರು.

# ಪ್ರವಾಹ ಪೀಡಿತ ಉಕ್ಕಡಗಾತ್ರಿಗೆ ಎಸಿ ದುರ್ಗಾಶ್ರೀ ಭೇಟಿ



ಮಲೇಬೆನ್ನೂರು, ಜು.25- ತುಂಗಭದ್ರಾ ನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಉಕ್ಕಡಗಾತ್ರಿ-ಫತ್ತೇಪುರ ಸಂಪರ್ಕ ಸೇತುವೆ ಮತ್ತು ಜಲಾವೃತಗೊಂಡಿರುವ ತೋಟ-ಗದ್ದೆಗಳನ್ನು ಮಂಗಳವಾರ ಉಪ ವಿಭಾಗಾಧಿಕಾರಿ ಶ್ರೀಮತಿ ಎನ್.ದುರ್ಗಾಶ್ರೀ ವೀಕ್ಷಣೆ ಮಾಡಿದರು. ಇದಕ್ಕೂ ಮುನ್ನ ಉಕ್ಕಡಗಾತ್ರಿ ಅಜ್ಜಯ್ಯನ ದೇವಸ್ಥಾನದ ಬಳಿ ತುಂಗಭದ್ರಾ ನದಿ ನೀರು ಸುತ್ತುವರೆದಿರುವುದನ್ನು ನೋಡಿ ಭಕ್ತರು ನದಿಗಿಳಿಯದಂತೆ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿದರು. ಉಪತಹಶೀಲ್ದಾರ್ ಆರ್. ರವಿ, ಪಿ.ಆರ್.ಐ.ಡಿ. ಎಇಇ ಗಿರೀಶ್, ಗ್ರಾಮ ಲೆಕ್ಕಾಧಿಕಾರಿ ಆನಂದ ತೀರ್ಥ, ಪಿಡಿಓ ರಾಮಚಂದ್ರಪ್ಪ ಮತ್ತು ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಈ ವೇಳೆ ಹಾಜರಿದ್ದರು.

# ಹಿರಿಯ ನಾಗರಿಕರ ಸೇವಾ ಸಂಸ್ಥೆಗೆ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನ

ದಾವಣಗೆರೆ, ಜು. 25- ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಗಣನೀಯ ಸೇವಾ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ (ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ/ಕ್ರೀಡೆ ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸಮಾಜ ಸೇವೆ) ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ 6 ವೈಯಕ್ತಿಕ ಪ್ರಶಸ್ತಿಗಳನ್ನು ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ಸಂಸ್ಥೆ ಸೇರಿದಂತೆ ಒಟ್ಟು 7 ಪ್ರಶಸ್ತಿಗಳನ್ನು ನೀಡಲಾಗುವುದು. ಅರ್ಹ ಹಿರಿಯ ನಾಗರಿಕರು ಹಾಗೂ ಸಂಸ್ಥೆಗಳು ಆಗಸ್ಟ್ 14 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 08192-263939 ಹಾಗೂ 08192-236784 ಸಂಪರ್ಕಿಸಲು ಜಿಲ್ಲಾ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಎರಡು ತಿಂಗಳಲ್ಲೇ ಸರ್ಕಾರ ಯಾರು ಉರುಳಿಸುತ್ತಾರೆ ?



ಬೆಂಗ ಳೂರು, ಜು. 25 -ಸಿದ್ದರಾ ಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಎರಡು ತಿಂಗಳಷ್ಟೇ ಕಳೆದಿದೆ. ಈ ಸರ್ಕಾರವನ್ನು ಯಾರು ಉರುಳಿಸುತ್ತಾರೆ? ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಉರುಳಿಸಲು ಸಿಂಗಪುರದಲ್ಲಿ ಸಂಚು ನಡೆದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, ಸರ್ಕಾರ ಉರುಳಿಸುವ ಪ್ರಶ್ನೆಯೇ ಇಲ್ಲ. ಅಂತಹ ಸಂದರ್ಭವೂ ಬಂದಿಲ್ಲ. ಅವರ ಹೇಳಿಕೆ ನನಗೆ ಅರ್ಥವಾಗುತ್ತಿಲ್ಲ ಎಂದಿದ್ದಾರೆ. ಕಾಂಗ್ರೆಸ್‌ನಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ. ಶಿವಕುಮಾರ್ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಈಗ ಆ ಭಾವನೆ ಮೂಡವಂತಹ ಕಾಲವೇ ಅಲ್ಲವೆಂದು ತಿಳಿಸಿದ್ದಾರೆ. ಪಕ್ಷದ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರಿಗೆ ನೋವಾಗಿದೆ. ನಾವೆಲ್ಲರೂ ಅವರ ಜತೆಯಲ್ಲಿದ್ದೇವೆ. ಅವರ ಸೇವೆ ದೊಡ್ಡದಿದೆ. ನೋವಿನಲ್ಲಿ ಮಾತನಾಡಿದ್ದು, ಮುಂದೆ ಸರಿ ಹೋಗುತ್ತದೆ. ಪಕ್ಷಕ್ಕೆ ನಿಷ್ಠೆ ಮತ್ತು ಶಿಸ್ತು ಎಂದರೆ ಹರಿಪ್ರಸಾದ್ ಮಾತ್ರ ಎಂದು ಹೇಳಿದರು.

# ನಗರದಲ್ಲಿ ಸಾರಿಗೆ ನಿಗಮದಿಂದ ಕಾರ್ಗೋ ಪಾರ್ಸೆಲ್ ಸೇವಾ ಕೇಂದ್ರ ಆರಂಭ

ದಾವಣಗೆರೆ, ಜು.25 - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ದಾವಣಗೆರೆ ವಿಭಾಗದಿಂದ ಕಾರ್ಗೋ ಪಾರ್ಸೆಲ್ ಸೇವಾ ಕೇಂದ್ರವನ್ನು ನಗರದ ಹೈಸ್ಕೂಲ್ ಮೈದಾನದಲ್ಲಿರುವ ಕೆ.ಎಸ್.ಆರ್.ಟಿ.ಸಿ ತಾತ್ಕಾಲಿಕ ಬಸ್ ನಿಲ್ದಾಣ ಹಾಗೂ ಹರಿಹರ ಬಸ್ ನಿಲ್ದಾಣದಲ್ಲಿ ಪ್ರಾರಂಭಿಸಲಾಗಿದೆ.

ಅತೀ ಕಡಿಮೆ ಸಾಗಾಣಿಕೆ ದರ ಹಾಗೂ ಬೆಲೆ ಬಾಳುವ ವಸ್ತುವಿನ ಸುರಕ್ಷಿತ ವಿಮಾ ವ್ಯವಸ್ಥೆಯೊಂದಿಗೆ ಪಾರ್ಸಲ್ ಸೇವೆಯನ್ನು ಒದಗಿಸಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಕ.ರಾ.ರ.ಸಾ.ನಿಗಮ ದಾವಣಗೆರೆ ಕಛೇರಿ, ವಿಭಾಗೀಯ ಸಂಚಾರ ಅಧಿಕಾರಿ ದೂ.7760990452, ಸಹಾಯಕ ಸಂಚಾರ ಅಧೀಕ್ಷಕ 7022030183, ಸಂಚಾರ ನಿರೀಕ್ಷಕ 9945941875ಗೆ ಸಂಪರ್ಕಿಸಬಹುದೆಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

# ಭೌತಿಕ ಬದುಕಿಗೆ ಧರ್ಮದ ಆಚರಣೆ ಅವಶ್ಯಕ



ಬೀದರ್, ಜು.25- ಜನ್ಮ ಜನ್ಮಗಳ ಪುಣ್ಯದ ಫಲದಿಂದ ಮಾನವ ಜನ್ಮ ಪ್ರಾಪ್ತವಾಗಿದೆ. ಅರಿವು, ಆದರ್ಶಗಳಿಂದ ಬದುಕನ್ನು ಸಮೃದ್ಧಗೊಳಿಸಿಕೊಳ್ಳಬೇಕು. ಭೌತಿಕ ಬದುಕಿಗೆ ಅಧ್ಯಾತ್ಮದ ಅರಿವು ಮತ್ತು ಧರ್ಮಾಚರಣೆಯಿಂದ ಬಾಳು ಉಜ್ವಲಗೊಳ್ಳುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ತಾಲ್ಲೂಕಿನ ಕೊಳ್ಹಾರ ಕೆ. ವ್ಯಾಪ್ತಿಯಲ್ಲಿ ಬರುವ ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಲ್ಲಿ ಜರುಗಿದ ಅಧಿಕ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡುತ್ತಿದ್ದರು.

ಬದುಕು ಒಂದು ಸುಂದರ ಮನೆಯ ಕಿಟಕಿ ಇದ್ದಂತೆ. ಕಿಟಕಿ ತೆರೆದರೆ ಬೆಳಕು, ಇಲ್ಲದಿದ್ದರೆ ಕತ್ತಲು. ಹಾಗೆಯೇ ಮನುಷ್ಯ ಶ್ರಮಪಟ್ಟರೆ ಸುಖ. ಇಲ್ಲದಿದ್ದರೆ ದುಃಖ ತಪ್ಪಿದ್ದಲ್ಲ. ಪೆಟ್ಟು ತಿಂದ ಕಲ್ಲು ಸುಂದರ ಮೂರ್ತಿಯಾಗುತ್ತದೆ. ಪೆಟ್ಟುಕೊಟ್ಟ ಸುತ್ತಿಗೆ ಸುತ್ತಿಗೆಯಾಗಿಯೇ ಉಳಿಯುತ್ತದೆ. ನೋವು ಕೊಡುವವರು ಹಾಗೆಯೇ ಇರುತ್ತಾರೆ. ನೋವುಂಡವರು ಜ್ಞಾನಿಗಳಾಗುತ್ತಾರೆ.

ಸಂಸ್ಕಾರ, ಸಂಸ್ಕೃತಿಯ ಆಚರಣೆಯಿಂದ ಜೀವನ ಉಜ್ವಲಗೊಳ್ಳಲು ಸಾಧ್ಯ. ತಿಳಿದು ಬರುವುದು ಜನನ. ತಿಳಿಯದೇ ಬರುವುದು ಮರಣ. ತಿಳಿದು ಬದುಕುವುದೇ ನಿಜವಾದ ಜೀವನ. ವೀರಶೈವ ಧರ್ಮದಲ್ಲಿ ಗುರು ಕೊಟ್ಟ ಇಷ್ಟಲಿಂಗವನ್ನು ಸದಾ ಧರಿಸಿ ಪೂಜಿಸಿದರೆ ಒಂದೇ ಜನ್ಮದಲ್ಲಿ ಜೀವನ್ಮುಕ್ತಿ ಪ್ರಾಪ್ತವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದಿಂದ ಈ ಭಾಗದಲ್ಲಿ ಅಧ್ಯಾತ್ಮ ಚಿಂತನಗಳನ್ನು ಜನ ಮನಕ್ಕೆ ಮುಟ್ಟಿಸುವ ಉದ್ದೇಶ ಹೊಂದಿದೆ. ಕಾರ್ಯಕ್ರಮದ ಸಂಘಟಕರ ಶ್ರಮ ಸಾರ್ಥಕಗೊಂಡಿದೆ ಎಂದು ಹರುಷ ವ್ಯಕ್ತಪಡಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ಹುಡುಗಿ ಹಿರೇಮಠದ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಒತ್ತಡದಲ್ಲಿ ಸಿಲುಕಿರುವ ಮನುಷ್ಯನಿಗೆ ಮಾನಸಿಕ ಶಾಂತಿ, ನೆಮ್ಮದಿ ಇಲ್ಲದಂತಾಗಿದೆ. ಶ್ರೀ ಗುರುವಿನ ಮಾರ್ಗದರ್ಶನದಲ್ಲಿ ಎಲ್ಲರೂ ಬದುಕು ಕಟ್ಟಿಕೊಂಡು ಬಾಳಬೇಕಾಗುತ್ತದೆ ಎಂದು ಹೇಳಿದರು.

### ಶ್ರೀ ರಂಭಾಪುರಿ ಜಗದ್ಗುರುಗಳ ಹಿತನುಡಿ

ಮೇಹಕರ ಹಿರೇಮಠದ ಶ್ರೀ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತಮಲೂರು ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಮಾತನಾಡಿ, ನಿರ್ಮಿಸುತ್ತಿರುವ ಸಮುದಾಯ ಭವನಕ್ಕೆ 10 ಲಕ್ಷ ರೂ. ಅನುದಾನ ನೀಡುವುದಾಗಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ರಘುನಾಥರಾವ್ ಮಲ್ಕಾಪುರೆ ಮಾತನಾಡಿದರು. ಬೀದರ್ ಕ. ಕಾ.ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಡಿ.ಕೆ. ಗಣಪತಿ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರು ರಕ್ಷೆ ಸ್ವೀಕರಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಭವ್ಯ ಮಂದಿರವನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಉದ್ಘಾಟಿಸಿ, ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು.

# ಹರಿಹರದಲ್ಲಿ ನಾಳೆ ವಿಶ್ವಬಂಧು ಸೊಸೈಟಿಯ ಬೆಳ್ಳಿ ಮಹೋತ್ಸವ



ಹರಿಹರ, ಜು. 25 - ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ಇದರ ಬೆಳ್ಳಿ ಮಹೋತ್ಸವ ಹಾಗೂ ಶಿವ ಸದನದ ನೂತನ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಜು. 27 ರ ಗುರುವಾರ ಬೆಳಿಗ್ಗೆ 12 ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ನಡೆಸಲಾಗುತ್ತದೆ ಎಂದು ಸೊಸೈಟಿ ಅಧ್ಯಕ್ಷ ಬೆಳ್ಳೂಡಿ ರಾಮಚಂದ್ರಪ್ಪ ತಿಳಿಸಿದ್ದಾರೆ.

ನಗರದ ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಸಭಾಂಗಣದಲ್ಲಿ ಮಾತನಾಡಿದ ಅವರು, ನೂತನ ಕಟ್ಟಡ ಉದ್ಘಾಟನೆ ಮತ್ತು ಸಮಾರಂಭದ ಸಾನ್ನಿಧ್ಯವನ್ನು ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಪಟ್ಟಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಲಿದ್ದಾರೆ ಎಂದರು.

ಸ್ಮರಣ ಸಂಚಿಕೆ ಬಿಡುಗಡೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ, ಉದ್ಘಾಟನೆಯನ್ನು ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ನೂತನ ಶಾಖೆಗಳ ಉದ್ಘಾಟನೆಯನ್ನು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ನೆನಪಿನ ಕಾಣಿಕೆ ಬಿಡುಗಡೆಯನ್ನು ಶಾಸಕ ಬಿ.ಪಿ. ಹರೀಶ್ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಸೊಸೈಟಿಯ ಅಧ್ಯಕ್ಷ ಬಿ. ರಾಮಚಂದ್ರಪ್ಪ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ದಾವಣಗೆರೆ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಬಿ. ಹಾಲೇಶಪ್ಪ ಸಿರಿಗೆರೆ, ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರಾದ ಬಿ. ಜಗದೀಶ್, ಸಹಕಾರ ಸಂಘಗಳ ಉಪ ನಿಬಂಧಕರಾದ ಅನ್ನಪೂರ್ಣಮ್ಮ, ಸಹಕಾರ ಸಂಘದ ನಿಬಂಧಕರಾದ ಮಂಜುಳಾ ಭಾಗವಹಿಸಲಿದ್ದಾರೆ. ನಿಟ್ಟೂರು ಸಾವಯವ ಕೃಷಿ ತಜ್ಞರಾದ ಸರೋಜಮ್ಮ ಎನ್.ಪಾಟೀಲ್ ಹಾಗೂ ಕರ್ನಾಟಕದಿಂದ ಭಾರತೀಯ ನೌಕಾಪಡೆಗೆ ಆಯ್ಕೆಯಾದ ಭೂಮಿಕಾ ಇವರುಗಳಿಗೆ ಗೌರವಿಸಿ, ಸನ್ಮಾನಿಸಲಾಗುತ್ತದೆ.

ಬೆಳಿಗ್ಗೆ 10 ಗಂಟೆಗೆ 25ನೇ ವಾರ್ಷಿಕ ಮಹಾಸಭೆಯನ್ನು ಆರಂಭಿಸಲಾಗುತ್ತದೆ ಎಂದು ರಾಮಚಂದ್ರಪ್ಪ ಹೇಳಿದರು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಸದಸ್ಯರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಟಿ. ಶಂಭುಲಿಂಗ ಕುಂಬಳೂರು ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರಕ್ಕೆ ಸ್ವಪಕ್ಷೀಯರೇ ಭಾರ



ಬೆಂಗಳೂರು, ಜು. 25- ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಎರಡು ತಿಂಗಳು ಕಳೆಯುವುದರಲ್ಲೇ ಸ್ವಪಕ್ಷದವರೇ ಅಪಸ್ವರ ಎತ್ತಿದ್ದಾರೆ. ಸರ್ಕಾರಕ್ಕೆ ಸ್ವಪಕ್ಷದವರೇ ಭಾರವಾಗಿ ಪತನಗೊಂಡರೆ ನಾವೇನು ಮಾಡಲಾಗುವುದಿಲ್ಲ ಎಂದು ಮಾಜಿ ಸಚಿವ ಹಾಗೂ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 135 ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ. ಮುಖ್ಯಮಂತ್ರಿ ಮಾಡುವುದು ಗೊತ್ತು, ಕೆಳಗಿಳಿಸುವುದು ಗೊತ್ತು ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿ ಹೇಳಿದರು.

19 ಶಾಸಕರನ್ನು ಹೊಂದಿರುವ ನಾವು ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಯಾವುದೇ ಉದ್ದೇಶವಿಲ್ಲ. ಪಕ್ಷ ಸಂಘಟನೆ ಮಾಡಿ ಅಧಿಕಾರಕ್ಕೆ ಬರಬೇಕೆಂಬುದು ನಮ್ಮ ಉದ್ದೇಶ ಎಂದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮುಸ್ಲಿಮರಿಗೆ ನೀಡಿದ್ದ ಶೇ.4ರಷ್ಟು ಮೀಸಲಾತಿಯನ್ನು ಹಿಂದಿನ ಸರ್ಕಾರ ರದ್ದುಪಡಿಸಿತ್ತು. ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಈ ಮೀಸಲಾತಿಯನ್ನು ಮರು ಜಾರಿ ಮಾಡುವುದಾಗಿ ಹೇಳಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬಂದ ಮೇಲೆ ಅದರ ಬಗ್ಗೆ ಸೊಲ್ಲೇ ಎತ್ತುತ್ತಿಲ್ಲ ಎಂದು ಟೀಕಿಸಿದರು. ಗೆದ್ದಲು ಹುಳ ಹುತ್ತವನ್ನು ಕಟ್ಟುತ್ತದೆ. ಅದರಲ್ಲಿ ಹಾವು ಬಂದು ಸೇರಿಕೊಳ್ಳುತ್ತದೆ ಎಂದು ಆಡಳಿತ ಪಕ್ಷದವರೇ ಮಾತನಾಡಿಕೊಳ್ಳುತ್ತಿದ್ದಾರೆ ಎಂದರು.

# ಕಲ್ಯಾಣ ಸಂಘಟಕರ ಹುದ್ದೆಗೆ ಮಾಜಿ ಸೈನಿಕರಿಂದ ಅರ್ಜಿ

ದಾವಣಗೆರೆ, ಜು. 25- ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ 14 ಕಲ್ಯಾಣ ಸಂಘಟಕರ 'ಸಿ' ವೃಂದದ ಹುದ್ದೆಗಳ ನೇಮಕಾತಿಗಾಗಿ ಸೇವಾ ನಿವೃತ್ತಿ ಹೊಂದಿರುವ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಭೂ ಸೇನೆಯ ಜೆ.ಸಿ.ಓ ರ್‍ಯಾಂಕ್ ಹಾಗೂ ವಾಯುಪಡೆ ಮತ್ತು ನೌಕಾಪಡೆಯ ತತ್ಸಮಾನವಾದ ರ್‍ಯಾಂಕ್‌ನಿಂದ ಸೇವಾ ನಿವೃತ್ತಿ ಹೊಂದಿರುವ ಮಾಜಿ ಸೈನಿಕರು ಹುದ್ದೆಗೆ ಅರ್ಹರಾಗಿದ್ದು, 20 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ದೂ. ಸಂ: 080-25589459 ಸಂಪರ್ಕಿಸಲು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಉಪ ನಿರ್ದೇಶಕ ಡಾ.ಸಿ.ಎ. ಹಿರೇಮಠ ತಿಳಿಸಿರುತ್ತಾರೆ.

# ಹರಪನಹಳ್ಳಿ ಪ್ರಾ. ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಂಜಿನಪ್ಪ ನಿರ್ದೇಶಕ



ಹರಪನಹಳ್ಳಿ, ಜು. 25- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅನಾರೋಗ್ಯದ ನಿಮಿತ್ತ ಪೂಜಾರ್ ಮಂಜುನಾಥ್ ಅವರು ತಮ್ಮ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ಸರ್ವ ಸದಸ್ಯರ ಸಮ್ಮುಖದಲ್ಲಿ ಖಾಲಿ ಇರುವ ನಿರ್ದೇಶಕರ ಸ್ಥಾನಕ್ಕೆ ಎಂ.ವಿ. ಅಂಜಿನಪ್ಪ ಅವರನ್ನು ಸರ್ವಾನುಮತದಿಂದ ನೇರವಾಗಿ ಆಯ್ಕೆ ಮಾಡಲಾಯಿತು ಎಂದು ಸಂಘದ ಅಧ್ಯಕ್ಷ ಟಿ.ಹೆಚ್.ಎಂ. ಮಂಜುನಾಥ ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ಚುನಾಯಿತ ನಿರ್ದೇಶಕರು, ಒಬ್ಬರು ಸರ್ಕಾರದ ನಾಮ ನಿರ್ದೇಶಕರು, ಒಟ್ಟು 13 ಸದಸ್ಯರು ಹಾಜರಿದ್ದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ, ಗಣಚಾರಿ ದುರುಗಪ್ಪ, ಹೆಚ್. ಚಮನ್‌ವಲಿ, ಪೂಜಾರ ದಕ್ಷಿಣ ಮೂರ್ತಿ, ಚಿಕ್ಕೇರಿ ವೆಂಕಟೇಶ್, ಗಿಡ್ಡಹಳ್ಳಿ ನಾಗರಾಜ, ಎಂ.ವಿ. ಕೃಷ್ಣ ಕಾಂತ, ಗುಂಡಿ ಸಾಜತ್, ಎಂ. ಸುಮಂಗಳಾ, ಕೆ. ಮಹಬೂಬ್ ಬಾಷಾ, ದಂಡಿನ ಹರೀಶ್, ಪ್ರಕಾಶ್ ಹೆಬ್ಬಾರ್, ಕಾರ್ಯದರ್ಶಿ ಡಿ. ಬಸವರಾಜ್, ಪುರಸಭೆ ಸದಸ್ಯರಾದ ಗೊಂಗಡಿ ನಾಗರಾಜ, ಟಿ. ವೆಂಕಟೇಶ್, ಲಾಟಿ ದಾದಾಪೀರ, ಉದ್ದಾರ ಗಣೇಶ್, ಹೆಚ್. ವಸಂತಪ್ಪ, ಬಾಣದ ಅಂಜಿನಪ್ಪ, ಹುಲಿಕಟ್ಟೆ ಚಂದ್ರಪ್ಪ, ಚಿಕ್ಕೇರಿ ಬಸಪ್ಪ, ಎಲ್.ಎಂ. ನಾಯ್ಕ, ಹನುಮಂತ ಅಲಮರಸಿಕೇರಿ, ಗುಡಿ ನಾಗರಾಜ್ ಮತ್ತಿತರರಿದ್ದರು.

# ಮಲೇಬೆನ್ನೂರು ಪುರಸಭೆಯಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮ ಜಾರಿ

ಮಲೇಬೆನ್ನೂರು, ಜು.25 - ಮಲೇಬೆನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಪೌರಸಭೆಗಳ ಘನತ್ಯಾಜ್ಯ ನಿರ್ವಹಣಾ ಮಾದರಿ ಉಪನಿಯಮಗಳನ್ನು ಯಥಾವತ್ತಾಗಿ ಜಾರಿಗೊಳಿಸಲಾಗುವು ದು ಎಂದು ಮಲೇಬೆನ್ನೂರು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ. ಮಲೇಬೆನ್ನೂರು ಪುರಸಭೆ ವ್ಯಾಪ್ತಿಯ ಸಾರ್ವಜನಿಕರು, ಉದ್ದಿಮೆ ದಾರರು ಮತ್ತು ಬೀದಿ ಬದಿ ವ್ಯಾಪಾರಿಗಳು ವ್ಯಾಪ್ತಿಯಲ್ಲಿ ಕಸ ಎಸೆಯು ವುದು, ವಿಂಗಡಣೆ ಮಾಡದಿರುವುದು, ಬಯಲು ಮೂತ್ರ ಮತ್ತು ಮಲವಿಸರ್ಜನೆ ಮಾಡುವುದು, ಕಟ್ಟಡ ತ್ಯಾಜ್ಯ, ಬೃಹತ್ ತ್ಯಾಜ್ಯ ಮತ್ತು ಕಸಾಯಿ ಖಾನೆ ತ್ಯಾಜ್ಯ ಸುಡುವುದನ್ನು ನಿಷೇಧಿಸಲಾಗಿದೆ. ಈ ನಿಯಮಗ ಳನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು ಅವರು ತಿಳಿಸಿದ್ದಾರೆ.


## ಎಂಟನೇ ವರ್ಷದ ಪುಣ್ಯಸ್ಮರಣೆ



**ಪವಾಡಪ್ಪ ದಿ|| ಪಿ.ಎಸ್. ಜಯದೇವಪ್ಪ**

ನೀವು ನಮ್ಮನ್ನಗಲಿ ಇಂದಿಗೆ (26.7.2023) ಎಂಟು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವ.

ಪತ್ನಿ : ಶ್ರೀಮತಿ ನಾಗರತ್ನಮ್ಮ
ಮಗ-ಸೊಸೆ : ಶ್ರೀಮತಿ ಶಿಲ್ಪಾ, ಪಿ. ಜೆ. ಗುರುರಾಜ್
ಮಗ-ಸೊಸೆ : ಶ್ರೀಮತಿ ಆಶಾ, ಪಿ. ಜೆ. ತಿಪ್ಪೇಸ್ವಾಮಿ
ಮಗಳು, ಅಳಿಯ : ಶ್ರೀಮತಿ ಕಾವೇರಿ ಎನ್. ವಸಂತಕುಮಾರ್
ಮೊಮ್ಮಕ್ಕಳು : ಯಶ್ ಪವಾಡಪ್ಪ, ಹರ್ಷಿಕ, ತನ್ವಿ ಮತ್ತು ಕುಟುಂಬ ವರ್ಗದವರು.
# 900/ B61, ಶಕ್ತಿ ನಗರ, 1ನೇ ಮೇನ್, 2ನೇ ಕ್ರಾಸ್ ನಿಟುವಳ್ಳಿ, ದಾವಣಗೆರೆ.


# ಕಣ್ಮರೆಯಾಗಿದ್ದ ಚೀನಾ ವಿದೇಶಾಂಗ ಸಚಿವರ ಪದಚ್ಯುತಿ

ಬೀಜಿಂಗ್, ಜು. 25 - ಚೀನಾದ ನೂತನ ವಿದೇಶಾಂಗ ಸಚಿವರಾಗಿ ವಾಂಗ್ ಯಿ ಅವರನ್ನು ನೇಮಿಸಲಾಗಿದೆ. ಇದುವರೆಗೂ ವಿದೇಶಾಂಗ ಸಚಿವರಾಗಿದ್ದ ಕಿನ್ ಗ್ಯಾಂಗ್ ಅವರು ನಿಗೂಢವಾಗಿ ಒಂದು ತಿಂಗಳು ಕಣ್ಮರೆಯಾದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಕಿನ್ ಅವರು ಅಧಿಕಾರ ವಹಿಸಿಕೊಂಡಿದ್ದರು. ಆದರೆ, ಜೂನ್ 25ರ ನಂತರ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ.

ಆರೋಗ್ಯ ಕಾರಣಕ್ಕಾಗಿ ಕಿನ್ ಕೆಲಸಕ್ಕೆ ಬಂದಿಲ್ಲ ಎಂದು ಸಚಿವಾಲಯ ತಿಳಿಸಿದೆ. ಆದರೆ, ಚೀನಾ ನಾಯಕತ್ವದ ನಿರ್ಧಾರ ನಿಗೂಢತೆಗೆ ಕಾರಣವಾಗಿದೆ.

ಕಿನ್ ಅವರಿಗೆ ಮುಂಚೆ ವಿದೇಶಾಂಗ ಸಚಿವರಾಗಿದ್ದ ವಾಂಗ್ ಅವರಿಗೇ ಮತ್ತೆ ಸಚಿವ ಸ್ಥಾನ ನೀಡಲಾಗಿದೆ. ಕಿನ್ ಪದಚ್ಯುತಿಗೆ ಕಾರಣವೇನು ಎಂಬುದನ್ನು ತಿಳಿಸಲಾಗಿಲ್ಲ.

ಈ ಹಿಂದೆ ಕೈಗಾರಿಕಾ ಸಚಿವ ಶಿಯಾವೋ ಯಾಕಿಂಗ್ ಅವರೂ ಸಹ ಒಂದು ತಿಂಗಳ ಕಾಲ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ನಂತರ ತಿಳಿಸಲಾಗಿತ್ತು.

# ಮಣಿಪುರದ ಘಟನೆ ಖಂಡಿಸಿ ಸಿಪಿಐ ಪ್ರತಿಭಟನೆ




### ಹರಪನಹಳ್ಳಿ

ಹರಪನಹಳ್ಳಿ, ಜು.25- ಮಣಿಪುರ ರಾಜ್ಯದಲ್ಲಿ ನಡೆದ ಅಮಾನವೀಯ ಘಟನೆಯನ್ನು ಖಂಡಿಸಿ, ರಾಷ್ಟ್ರವ್ಯಾಪಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ಮಣಿಪುರ ಸೌಹಾರ್ದ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಗಿದ್ದು, ತಾಲ್ಲೂಕು ಸಿಪಿಐ ಘಟಕದಿಂದ ಪಟ್ಟಣದ ಐ.ಬಿ.ವೃತ್ತದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಮೂಲಕ ಮನವಿ ಪತ್ರವನ್ನು ಸಲ್ಲಿಸಿದರು.

ಸಿಪಿಐ ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಮಣಿಪುರದಲ್ಲಿ ಭೀಕರ ಘಟನೆ ನಡೆದರೂ ಪ್ರಧಾನಿಯವರು ಮೌನವಾಗಿರುವುದು ಏಕೆ? ಮಣಿಪುರದಲ್ಲಿ ನಡೆಯುತ್ತಿರುವ ಗಲಭೆಯನ್ನು ತಡೆಯುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿವೆ. ಇದು ಸರ್ಕಾರಿ ಪ್ರಾಯೋಜಿತ ಹಿಂಸಾಚಾರದಂತೆ ಕಾಣುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ಉಸ್ತುವಾರಿ ಎಚ್.ಎಂ.ಸಂತೋಷ್ ಮಾತನಾಡಿ ಸಮುದಾಯ, ಸಮುದಾಯಗಳ ನಡುವೆ ಅಪನಂಬಿಕೆ ಮತ್ತು ದ್ವೇಷ ಹುಟ್ಟುವಂತೆ ತಂತ್ರ ರೂಪಿಸಿದ ಕೋಮುವಾದಿ ಶಕ್ತಿಗಳು ಇಂದು ಈ ಹಿಂಸಾಚಾರಗಳಿಗೆ ನೇರ ಹೊಣೆಯಾಗಿವೆ. ಈ ಕೃತ್ಯದಲ್ಲಿ ಭಾಗಿಯಾದವರ ಮೇಲೆ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ತೀವ್ರವಾದ ಹೋರಾಟ ನಡೆಸಲಾಗುವುದು ಎಂದರು.

ಗಲಭೆ ನಿಯಂತ್ರಿಸಲು ವಿಫಲವಾದ ಮಣಿಪುರದ ಮುಖ್ಯಮಂತ್ರಿ ಕೂಡಲೇ ರಾಜೀನಾಮೆ ನೀಡಬೇಕು. ಅಕ್ರಮ ಶಸ್ತ್ರಾಸ್ತ್ರ ಹೊಂದಿರುವ ಜನರಿಂದ ಅವುಗಳನ್ನು ವಶಪಡಿಸಿಕೊಳ್ಳಬೇಕು. ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಬೇಕು. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಸೇರಿದಂತೆ, ಇತರೆ ಹಕ್ಕೊತ್ತಾಯಗಳ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಬಳಿಗನೂರು ಕೊಟ್ರೇಶ್, ದಾದಾಪೀರ್, ದೊಡ್ಡಬಸವ ರಾಜ್, ಬಾಷಾ ಸಾಬ್, ಡಿ.ಎಚ್.ಅರುಣ್, ಪಂಪಣ್ಣ, ಬಸಮ್ಮ ಸೇರಿದಂತೆ ಇತರರು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಲೋಕಸಭಾ ಚುನಾವಣೆಗೆ ಮೈತ್ರಿ ಇಲ್ಲ



ಬೆಂಗಳೂರು, ಜು.25 - ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷದ ಜೊತೆ ಮೈತ್ರಿ ಇಲ್ಲ. ಇದರ ಬಗ್ಗೆ ಯಾವುದೇ ಸಂಶಯ ಬೇಡ ಎಂದು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಹೇಳಿದ್ದಾರೆ.

ಏಕಾಂಗಿ ಹೋರಾಟ ಮಾಡುವುದಾಗಿ ಹೇಳುವ ಮೂಲಕ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಎನ್‌ಡಿಎ ಮೈತ್ರಿಕೂಟ ಸೇರಲಿದೆ ಎಂಬ ಊಹಾಪೋಹಗಳಿಗೆ ತೆರ ಎಳೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಶಾಸಕರು, ಮಾಜಿ ಶಾಸಕರು, ವಿಧಾನಸಭೆ ಚುನಾವಣೆಯಲ್ಲಿ ಸೋತವರು, ಪಕ್ಷದ ಕಾರ್ಯಕರ್ತರೊಂದಿಗೆ ಚರ್ಚಿಸಿ, ನಮಗೆ ಶಕ್ತಿ ಇರುವ ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧೆ ಮಾಡುತ್ತೇವೆ ಎಂದರು.

ಯಾವುದೇ ಕಾರಣಕ್ಕೂ ಜೆಡಿಎಸ್ ಅನ್ನು ಅಳಿಸಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ. ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ನಮ್ಮ ಪಕ್ಷದ ಮೂವರು ಸಂಸದರ ಬೆಂಬಲವನ್ನು ಯಾವುದೇ ಷರತ್ತಿಲ್ಲದೆ ನೀಡಿದ್ದೇವೆ. ಅದೇ ರೀತಿ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ನಿರ್ಧಾರ ಮಾಡುತ್ತೇವೆ ಎಂದು ಹೇಳಿದರು. ಕಾಂಗ್ರೆಸ್ ಯಾವ ಯಾವ ರಾಜ್ಯದಲ್ಲಿ ಯಾರು ಯಾರನ್ನು ತಬ್ಬಿಕೊಳ್ಳಲು ಹೋಗಿದೆ ಎಂಬುದು ಗೊತ್ತಿಲ್ಲವೇ? ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ವಿಷಯಾಧಾರಿತ ಹೋರಾಟವನ್ನು ಬಿಜೆಪಿ ಜೊತೆ ಮಾಡಿರಬಹುದು. ಈ ಹಿಂದೆ ಕಾಂಗ್ರೆಸ್ ಪಕ್ಷ ಅಧಿಕೃತ ವಿರೋಧ ಪಕ್ಷವಾಗಿದ್ದಾಗಲೂ ಜೆಡಿಎಸ್ ಅವರ ಜೊತೆ ಹೋರಾಟ ಮಾಡಿಲ್ಲವೇ ಎಂದು ಸಮರ್ಥಿಸಿದರು.

ಬೆಂಗಳೂರಿನಲ್ಲಿ ನಡೆದ ವಿರೋಧ ಪಕ್ಷಗಳ ಮಹಾ ಘಟಬಂಧನ್‌ಗೆ ತಮ್ಮನ್ನು ಆಹ್ವಾನಿಸದಂತೆ ಸ್ಥಳೀಯ ಕಾಂಗ್ರೆಸ್‌ನ ಒಂದು ಗುಂಪು ಹೇಳಿತ್ತು. ಒಂದು ವೇಳೆ ಆ ಸಭೆಗೆ ನನ್ನನ್ನು ಆಹ್ವಾನಿಸಿದ್ದೇ ಆದರೆ, ನಾವು ಸಭೆಗೆ ಬರುವುದಿಲ್ಲ ಎಂದು ಧಮ್ಕಿ ಹಾಕಿತ್ತು. ಆ ಕಾರಣಕ್ಕಾಗಿ ನಮ್ಮನ್ನು ಸಭೆಗೆ ಕರೆಯಲಿಲ್ಲ ಎಂದು ಆರೋಪಿಸಿದರು.

ಕೇಂದ್ರದ ಮಾಜಿ ಸಚಿವ ಶರದ್ ಪವಾರ್ ಆ ಸಭೆಗೆ ಬಂದು ಹೋದರು. ಅಲ್ಲಿ ಏನಾಗುತ್ತಿದೆ ಈಗ ಎನ್‌ಡಿಎಗೆ ಬೆಂಬಲ ಸೂಚಿಸಿಲ್ಲವೇ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರು ಬಿಜೆಪಿ ಜೊತೆ ಸೇರಿ ಮುಖ್ಯಮಂತ್ರಿಯಾದರು ಎಂಬ ಟೀಕೆ ಮಾಡುತ್ತಾರೆ. 1983ರಲ್ಲಿ ಬಿಜೆಪಿ ಬೆಂಬಲದಿಂದ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿರಲಿಲ್ಲವೇ? ನಾನು ಲೋಕೋಪಯೋಗಿ ಸಚಿವನಾಗಿದ್ದೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಂದು ಬಿಜೆಪಿ ಬೆಂಬಲಿತ ಸರ್ಕಾರದಲ್ಲಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿರಲಿಲ್ಲವೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪತ್ರಕರ್ತರ ಸಿದ್ಧಾಂತದ ಬಗ್ಗೆ ಮಾತನಾಡಿದ್ದಾರೆ. ಅವರ ಪಕ್ಷದ ಶಾಸಕ ಟಿ.ಬಿ.ಜಯಚಂದ್ರ ನೇತೃತ್ವದ ಸದನ ಸಮಿತಿ, ನೈಸ್ ಸಂಸ್ಥೆಯ ಹಗರಣದ ಬಗ್ಗೆ ವರದಿ ಕೊಟ್ಟಿದೆ. ಅದರ ಮೇಲೆ ಏಕೆ ಕ್ರಮ ಕೈಗೊಳ್ಳಲಿಲ್ಲ? ಎಂದು ಪ್ರಶ್ನಿಸಿದರು.

ನೈಸ್ ಸಂಸ್ಥೆ ಹೆಸರನ್ನು ಪ್ರಸ್ತಾಪಿಸದೇ ಮಾತನಾಡಿದ ಅವರು, 11,660 ಎಕರೆ ಹೆಚ್ಚುವರಿ ಭೂಮಿ ಇದೆ. ಅದು ಯಾರ ಭೂಮಿ? ಸಮಿತಿ ವರದಿ ಆಧರಿಸಿ ಕ್ರಮ ಕೈಗೊಳ್ಳಲು ಸಿದ್ದರಾಮಯ್ಯ ಅವರಿಗೆ ಏನು ಕಷ್ಟವಿದೆ? ಅದರಲ್ಲಿ ಬರುವ ಕೋಟ್ಯಂತರ ರೂ. ಹಣವನ್ನು ಸರ್ಕಾರದ ಐದು ಗ್ಯಾರಂಟಿಗಳಿಗೆ ಬಳಸಲಿ ಎಂಬ ಸಲಹೆ ಮಾಡಿದರು.

# ಸರ್ಕಾರ ಉರುಳಿಸುವ ಷಡ್ಯಂತ್ರದ ಬಗ್ಗೆ ಗೊತ್ತಿಲ್ಲ



ಬೆಂಗಳೂರು, ಜು. 25 - ಸಿಂಗಪುರದಲ್ಲಿ ಸರ್ಕಾರವನ್ನು ಉರುಳಿಸಲು ಷಡ್ಯಂತ್ರ ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಹೇಳಿಕೆ ನೀಡಿರುವ ಡಿ.ಕೆ.ಶಿವಕುಮಾರ್ ಅವರನ್ನೇ ಕೇಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬರ ಬರುತ್ತದೆ ಎಂದು ಬಿಜೆಪಿಯವರು ಟ್ರೋಲ್ ಮಾಡಿರುವ ಬಗ್ಗೆ ಉತ್ತರಿಸಿ, ಈಗ ಮಳೆಯಾಗು ತ್ತಿಲ್ಲವೇ? ಎಂದು ಪ್ರಶ್ನಿಸಿದರು. ಈ ಮೂಢನಂಬಿಕೆಗಳಲ್ಲಿ ಹಾಗೂ ಮೌಢ್ಯಗಳಲ್ಲಿ ನನಗೆ ನಂಬಿಕೆ ಇಲ್ಲ. ಬಿಜೆಪಿ ಅಧಿಕಾರದ ಅವಧಿಯಲ್ಲಿ ಪ್ರವಾಹ ಬಂದು ಒಂದು ಲಕ್ಷ ಮನೆಗಳು ಬಿದ್ದು ಹೋಗಿದ್ದವು.

ಪ್ರವಾಹ ಉಂಟಾಗುವುದು ಹಾಗೂ ಮಳೆ ಕೊರತೆಯಾಗುವುದು ಸ್ವಾಭಾವಿಕ. ಈಗ ಹವಾಮಾನ ಬದಲಾವಣೆ ಇದೆ. ಮುಂಗಾರು ಜೂನ್ ತಿಂಗಳಲ್ಲಿ ಪ್ರಾರಂಭವಾಗುವುದು ಜುಲೈನಲ್ಲಿ ಆಗುತ್ತಿದೆ. ಜಗತ್ತಿನ ಎಲ್ಲೆಡೆ ಹವಾಮಾನ ಬದಲಾವಣೆಯಾಗುತ್ತಿದೆ ಎಂದರು.

ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಒಂದಾಗುತ್ತಿರುವ ಬಗ್ಗೆ ನನಗೆ ತಿಳಿದಿಲ್ಲ ಮಾತುಕತೆ ನಡೆಸುತ್ತಿದ್ದಾರೆ. ಅವರು ಒಂದಾದರೆ ನಮಗೇನೂ ಭಯವಿಲ್ಲ. ನಾವು 15- 20 ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ. ಅವರು ಒಂದಾದರೂ, ಒಂದಾಗದೇ ಇದ್ದರೂ ಗೆಲ್ಲುತ್ತೇವೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

# ಹರಿಪ್ರಸಾದ್ ಹೇಳಿಕೆಗೆ ಸಿಂಗಪುರ ಕಥೆ

## ಕಾಂಗ್ರೆಸ್ ಸರ್ಕಾರದಲ್ಲಿ ಬಾಲಗ್ರಹ ಪೀಡೆ : ಮಾಜಿ ಸಿಎಂ ಬೊಮ್ಮಾಯಿ



ಬೆಂಗಳೂರು, ಜು.25 - ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದು ಆರಂಭದಿಂದಲೂ ಗೋಚರಿಸುತ್ತಿದ್ದು, ಬಿ.ಕೆ. ಹರಿಪ್ರಸಾದ್ ಹೇಳಿಕೆಯಿಂದ ಸರ್ಕಾರಕ್ಕೆ ಆಗಿರುವ ಡ್ಯಾಮೇಜ್ ಕಂಟ್ರೋಲ್ ಮಾಡಲು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸಿಂಗಪುರ ಕಾರ್ಯತಂತ್ರದ ಕಥೆ ಹೇಳಿದ್ದಾರೆ. ಈ ಸರ್ಕಾರಕ್ಕೆ ಬಾಲಗ್ರಹ ಪೀಡೆ ಶುರುವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಮೊದಲ ದಿನದಿಂದ ಎಲ್ಲವೂ ಸರಿ ಇಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ. ಸ್ಪಷ್ಟ ಬಹುಮತ ಇದ್ದರೂ ಮುಖ್ಯಮಂತ್ರಿ ಆಯ್ಕೆ ಮಾಡಿರುವ ವಿಧಾನ, ಸಿಕ್ರೆಟ್ ಬ್ಯಾಲೆಟ್ ಬಳಕೆ ಮಾಡಿರುವುದು ಬಹುಮತ ಇದ್ದರೂ ಇಷ್ಟು ಸರ್ಕಸ್ ಮಾಡಿದ್ದು ಎಲ್ಲವೂ ಸರಿ ಇಲ್ಲ ಅಂತ ಅರ್ಥವಾಗುತ್ತದೆ ಎಂದರು.

ಸಿದ್ದರಾಮಯ್ಯ ಗ್ಯಾರಂಟಿಗಳಿಗೆ ಹಣ ನೀಡುವ ಸಲುವಾಗಿ ಅಭಿವೃದ್ಧಿಗೆ ಅನುದಾನ ಇಲ್ಲ ಅಂತ ಹೇಳಿದ್ದಾರೆ. ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸ್ಪಷ್ಟವಾಗಿದೆ.

ಶಾಸಕರು ಬಹಿರಂಗವಾಗಿಯೇ ಹೇಳಿದ್ದಾರೆ. ಸಚಿವರುಗಳ ವಿರುದ್ದ ಅಸಮಾಧಾನ ಹೊರ ಹಾಕಿದ್ದಾರೆ. ಆದರೆ, ಸಿದ್ದರಾಮಯ್ಯ ಅರ್ಧ ಸತ್ಯ ಹೇಳಿದ್ದಾರೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅವರ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನೀಡಿರುವ ಹೇಳಿಕೆಯಿಂದ ಆಗಿರುವ ಡ್ಯಾಮೇಜ್ ಕಂಟ್ರೋಲ್ ಮಾಡಲು ಸಿಂಗಪುರ ತಂತ್ರದ ಬಗ್ಗೆ ಹೇಳಿದ್ದಾರೆ.

ಸ್ವತಃ ಡಿ.ಕೆ ಶಿವಕುಮಾರ್ ಅವರು ಮುಂದೆ ತಾವು ಮಾಡುವ ಕಾರ್ಯತಂತ್ರದ ಬಗ್ಗೆ ಈಗ ಮಾತನಾಡುತ್ತಿದ್ದಾರೆ. ಇದು ಅವರಲ್ಲಿಯೇ ಸಮಾಧಾನ ಇಲ್ಲ ಎನ್ನುವುದನ್ನು ತೋರಿಸಿದ್ದಾರೆ. ಬಿಜೆಪಿಯ ಹೈಕಮಾಂಡ್ ಈ ಸರ್ಕಾರ ಅಸ್ಥಿರಗೊಳಿಸುವ ಬಗ್ಗೆ ಆಲೋಚಿಸಿಲ್ಲ ಎಂದು ಹೇಳಿದರು. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ಭಿನ್ನಾಭಿಪ್ರಾಯ ಇದೆ ಎನ್ನುವುದು ಸತ್ಯ. ಶಿವಕುಮಾರ್ ಸರ್ಕಾರದ ಅಸ್ಥಿರತೆಯ ಬಗ್ಗೆ 2 ಬಾರಿ ಬಹಿರಂಗವಾಗಿ ಹೇಳಿಕೆ ನೀಡಿದರೂ ಮುಖ್ಯಮಂತ್ರಿಗೆ ಮಾಹಿತಿ ಇಲ್ಲ ಎಂದರೆ ಇಬ್ಬರ ನಡುವೆ ಹೊಂದಾಣಿಕೆ ಇಲ್ಲ ಅಂತ ಅರ್ಥ ಎಂದು ಅಭಿಪ್ರಾಯ ಪಟ್ಟರು.

ಈ ಸರ್ಕಾರಕ್ಕೆ ಬಾಲಗ್ರಹ ಪೀಡೆ ಶುರುವಾಗಿದೆ. ಆಂತರಿಕ ಕಲಹ ಹೆಚ್ಚಾಗಿದೆ. ಈ ಸರ್ಕಾರ ಗ್ಯಾರಂಟಿಗಳ ಜಾರಿಗೆ ಎಸ್ಸಿಪಿ/ಟಿಎಸ್ಪಿ ಹಣ ಬಳಕೆ ಮಾಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

# ಅಕಾಡೆಮಿ ಪ್ರಶಸ್ತಿ ವಾಪಸ್ ನೀಡುವುದಿಲ್ಲ ಎಂಬ ಮುಚ್ಚಳಿಕೆ

**ಸಂಸತ್ ಸಮಿತಿ ಸಲಹೆ**

ನವದೆಹಲಿ, ಜು. 25 - ಸಾಹಿತ್ಯ ಅಕಾಡೆಮಿ ಹಾಗೂ ಇತರೆ ಸಾಂಸ್ಕೃತಿಕ ಅಕಾಡೆಮಿಗಳು ರಾಜಕೀಯೇತರ ಸಂಘಟನೆಗಳು. ಇವುಗಳ ಮೂಲಕ ಪ್ರಶಸ್ತಿ ಪಡೆದವರು, ಅವುಗಳನ್ನು ರಾಜಕೀಯ ಕಾರಣಕ್ಕಾಗಿ ಮರಳಿಸುವುದಿಲ್ಲ ಎಂಬ ಮುಚ್ಚಳಿಕೆ ನೀಡಬೇಕು ಎಂದು ಸಂಸದೀಯ ಸಮಿತಿಯೊಂದು ಸಲಹೆ ನೀಡಿದೆ.

ಸಾರಿಗೆ, ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ ಈ ಕುರಿತು ನೀಡಿದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಯಾರಾದರೂ ಪ್ರಶಸ್ತಿಗಳನ್ನು ಮರಳಿಸಿದರೆ, ಅವರನ್ನು ಮುಂದಿನ ಯಾವುದೇ ಈ ರೀತಿಯ ಪ್ರಶಸ್ತಿಗೆ ಪರಿಗಣಿಸಬಾರದು ಎಂದು ಸಮಿತಿ ಶಿಫಾರಸ್ಸು ಮಾಡಿದೆ.

ಪ್ರಶಸ್ತಿ ಮರಳಿಸುವ ಅನುಚಿತ ಘಟನೆಗಳಿಂದ ಪುರಸ್ಕೃತರಾದ ಇತರೆ ಸಾಧಕರ ಮೇಲೂ ಪರಿಣಾಮವಾಗುತ್ತದೆ. ಒಟ್ಟಾರೆ ಪ್ರತಿಷ್ಠಿತ ಪ್ರಶಸ್ತಿಯ ಮೇಲೂ ಪರಿಣಾಮವಾಗುತ್ತದೆ ಎಂದು ಸಮಿತಿ ಹೇಳಿದೆ.

## ಸಿರಿಗೆರೆಯಿಂದ ಅಮೆರಿಕಾದ ಸ್ಯಾನ್‌ಫ್ರಾನ್ಸಿಸ್ಕೋವರೆಗೆ.....

# ಏರ್ ಇಂಡಿಯಾದ ಅತ್ಯಂತ ದೀರ್ಘ ಎತ್ತರ ಜಿಗಿತ



ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಕಳೆದ ಭಾನುವಾರ ಜು.23 ರಂದು ಮಧ್ಯಾಹ್ನ 2 ಗಂಟೆಗೆ ಏರ್ ಇಂಡಿಯಾ ಬೋಯಿಂಗ್ 787 ವಿಮಾನ ಏರಿದಾಗ, ಅದು ಘರ್ಜಿಸುತ್ತಾ ನಭಕ್ಕೆ ಹಾರಿತು. ಬೆಂಗಳೂರಿಗೆ ವಿದಾಯ ಹೇಳಿದ ಅದು ಮುಖ ಮಾಡಿದ್ದು ಉತ್ತರ ಅಮೆರಿಕಾದ ಸ್ಯಾನ್‌ಫ್ರಾನ್ಸಿಸ್ಕೋದತ್ತ. ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಗಗನಸಖಿ ಹಲವಾರು ಪ್ರಕಟಣೆಗಳನ್ನು ಮಾಡಿದರಲ್ಲದೇ, ಕೆಲವು ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸಿದರು.

ಆದರೆ ತರಗತಿಯಲ್ಲಿ ಶಿಕ್ಷಕ, ಶಿಕ್ಷಕಿಯರ ಮಾತಿಗೆ ಕಿವಿಗೊಡದ ತುಂಡ ಹುಡುಗರಂತೆ ಯಾವ ಪ್ರಯಾಣಿಕರೂ ಆಕೆಯ ಮಾತುಗಳ ಕಡೆ ಗಮನ ಕೊಡಲಿಲ್ಲ. ಅಷ್ಟೇ ಏಕೆ ತಮ್ಮ ಪಕ್ಕದಲ್ಲಿ ಕುಳಿತಿದ್ದ ಸಹ ಪ್ರಯಾಣಿಕರನ್ನೂ ಅವರು ತಲೆ ಎತ್ತಿ ನೋಡಲಿಲ್ಲ. ತಮ್ಮ ಮೊಬೈಲ್‌ಗಳಲ್ಲಿ ತಲ್ಲೀನರಾಗಿದ್ದ ಎಲ್ಲರೂ ತಮ್ಮದೇ ಜಗತ್ತಿನಲ್ಲಿ ವಿಹರಿಸುತ್ತಿದ್ದರು.

ಸ್ವಲ್ಪ ಹೊತ್ತಿನಲ್ಲಿಯೇ ಗಗನಸಖಿ ನಮ್ಮ ಹತ್ತಿರ ಬಂದು, ವಿನಯದಿಂದ ಕುಡಿಯಲು ತಮಗೇನು ಬೇಕು? ಎಂದು ಕೇಳಿದರು. ಅವರ ಕೈಲಿದ್ದ ಟ್ರೇನಲ್ಲಿ ಎರಡು ಗ್ಲಾಸ್‌ಗಳಲ್ಲಿ ಒಂದು ಮಜ್ಜಿಗೆ, ಮತ್ತೊಂದು ಕಿತ್ತಳೆ ಹಣ್ಣಿನ ರಸ ಎಂಬುದನ್ನು ಗಮನಿಸಿದ್ದ ನಾವು 'ಮಜ್ಜಿಗೆ' ಎಂದು ಸೂಚಿಸಿದರು. ಮಜ್ಜಿಗೆಯನ್ನು ಕನ್ನಡದಲ್ಲಿ ಶಿವಧ್ಯಾನ ಎನ್ನುತ್ತಾರೆ. ಅದು ದೇವರ ಕೊಡುಗೆ ಎಂದರ್ಥ. ಅಸಿಡಿಟಿ ಇರುವವರೆಗೆ ಅದು ರಾಮಬಾಣ. ನಾವು ಮಜ್ಜಿಗೆ ಗ್ಲಾಸ್ ತೆಗೆದುಕೊಂಡ ನಂತರ ಗಗನಸಖಿ ನಮಗೆ ಹಲವು ವಾರಪತ್ರಿಕೆಗಳನ್ನು ಕೊಟ್ಟರು. ಮಜ್ಜಿಗೆ ನಮ್ಮ ಹೊಟ್ಟೆಗೆ ಆಧಾರವಾದರೆ, ಆ ಪತ್ರಿಕೆಗಳು ನಮ್ಮ ಮೆದುಳಿಗೆ ಆಹಾರ ಆದವು.

ಗಣಿತದ ಲೆಕ್ಕಾಚಾರಗಳು ಯಾವಗಲೂ ಸತ್ಯವೆಂದು ಹೇಳಲಾಗದು. ಆ ಏರ್ ಇಂಡಿಯಾ ವಿಮಾನದ ಬೆಂಗಳೂರು ನಿರ್ಗಮನದ ಸಮಯ ಮಧ್ಯಾಹ್ನ 2 ಗಂಟೆ ಹಾಗೂ ಉತ್ತರ ಅಮೆರಿಕಾದ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಅದರ ಆಗಮನದ ಸಮಯ ಅದೇ ದಿನ ಸಂಜೆ 6 ಗಂಟೆ. ಅಂದರೆ ಪ್ರಯಾಣದ ಅವಧಿ ಕೇವಲ ನಾಲ್ಕು ಗಂಟೆ. ಭಾರತ ಹಾಗೂ ಅಮೆರಿಕಗಳಲ್ಲಿ 12 ಗಂಟೆ 30 ನಿಮಿಷಗಳ ವ್ಯತ್ಯಾಸವಿದೆ. ಹೀಗಾಗಿ ಸ್ಯಾನ್‌ಫ್ರಾನ್ಸಿಸ್ಕೋ ತಲುಪಲು ವಿಮಾನ ತೆಗೆದುಕೊಂಡಿದ್ದು ವಾಸ್ತವವಾಗಿ 16 ಗಂಟೆ, 30 ನಿಮಿಷಗಳ ಈ ಅವಧಿಯಲ್ಲಿ ಅದು ಸುಮಾರು 14000 ಕಿ.ಮೀ. ಅಂತರಿಕ್ಷ ದೂರವನ್ನು ಕ್ರಮಿಸಿತ್ತು. ಕಳೆದ ನಾಲ್ಕು ದಶಕಗಳಲ್ಲಿ ಇದು ನಮ್ಮ ಅತ್ಯಂತ ದೀರ್ಘ ವಿಮಾನ ಪ್ರಯಾಣ ಎಂದು ಶ್ರೀಗಳು ಹೇಳಿದ್ದಾರೆ.

ಅಮೆರಿಕಾ ದೇಶವನ್ನು ಪಾಶ್ಚಿಮಾತ್ಯ ದೇಶ ಎಂದು ಕರೆಯುವುದು ತಪ್ಪೆಂದು ಕಾಣುತ್ತದೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳೆಂಬುದು ಸಂಪೂರ್ಣ ಸತ್ಯವಲ್ಲ. ನೀವು ನಿಂತ ಜಾಗಕ್ಕೆ ಅವು ಸಾಪೇಕ್ಷತೆ ಹೊಂದಿರುತ್ತವೆ. ನಮ್ಮ ವಿಮಾನವು ಪ್ರಾರಂಭದಲ್ಲಿ ಹೊರಟಿದ್ದು ಪಶ್ಚಿಮಾಭಿಮುಖವಾಗಿ ಆದರೆ ಅದು ನಿಗದಿತ ಎತ್ತರ ತಲುಪಿದ ನಂತರ ಪೂರ್ವಾಭಿಮುಖವಾಯಿತು. ಇದನ್ನು ವಿಮಾನ ಚಾಲಕ ಕ್ಯಾಪ್ಟನ್ ಅಭಿರಾಜ್ ಪ್ರಕಟಿಸಿದಾಗ ನಾವು ನಿಬ್ಬೆರಗಾದೆವು. ಅಮೆರಿಕವು ನಿಸ್ಸಂಶಯವಾಗಿಯೂ ಪಾಶ್ಚಿಮಾತ್ಯ ದೇಶವೇ. ಆದರೆ ನಾವು ಪೂರ್ವದ ಭಾರತ ದೇಶದ ಕಡೆಯಿಂದ ಅಮೆರಿಕಾ ಪಶ್ಚಿಮ ತೀರದ ಸ್ಯಾನ್‌ಫ್ರಾನ್ಸಿಸ್ಕೋ ನಗರವನ್ನು ತಲುಪಿದ್ದೆವು. ಇದಕ್ಕೆ ಭೂಮಿಯ ಅಂಡಾಕಾರವಾಗಿರುವುದು ಕಾರಣ ಎಂದು ಅಭಿಪ್ರಾಯಪಟ್ಟಿದ್ದಾರೆ ಶ್ರೀಗಳು.

ಜಾಗತಿಕ ವಿಮಾನಯಾನ ಸ್ಪರ್ಧೆಯಲ್ಲಿ ಈ ವಿಮಾನವು ಏರ್ ಇಂಡಿಯಾದ ಅತ್ಯಂತ ದೀರ್ಘ ಎತ್ತರ ಜಿಗಿತವೆಂದು ನಮಗೆ ಭಾಸವಾಯಿತು.

ಸಂಜೆಯ ತಿಂಡಿಯನ್ನು ಕೊಟ್ಟನಂತರ, ಗಗನಸಖಿಯು ಆ ಸುಂದರ ಲೋಹದ ಹಕ್ಕಿಯಲ್ಲಿದ್ದ ಸುಮಾರು 250 ಪ್ರಯಾಣಿಕರಿಗೆ ಇತಿಹಾಸದ ಗಗನ ಶಿಕ್ಷಕಿಯಾದರು. ಆಕೆಯು ಭಾರತ ಸ್ವಾತಂತ್ರ್ಯ ಚಳವಳಿಯ ಕೆಳಕಂಡ ಪ್ರಸಂಗವನ್ನು ಕುರಿತು ಹೇಳಿದಾಗ ನಮ್ಮಲ್ಲಿ ಸ್ಫುರಿಸಿದ ಗಾಢ ದೇಶಭಕ್ತಿಯ ಭಾವದಿಂದಾಗಿ ನಾವು ಮೂಕ ವಿಸ್ಮಿತರಾದೆವು ಎಂದು ಶ್ರೀಗಳು ಅನುಭವ ಹಂಚಿಕೊಂಡಿದ್ದಾರೆ.

- ಪ್ರೊ. ಎಸ್.ಬಿ.ರಂಗನಾಥ್, ದಾವಣಗೆರೆ.

### ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಸ್ಮರಣೆ



**ಮಹಾಕ್ರಾಂತಿಕಾರಿಯಾಗಿದ್ದ ಕ್ಯಾಪ್ಟನ್ ಲಕ್ಷ್ಮಿಯು ಸುಭಾಷ್ ಚಂದ್ರ ಬೋಸ್ ಅವರ ಆಜಾದ್ ಹಿಂದ್ ಸರ್ಕಾರದಲ್ಲಿ ಮಹಿಳಾ ವ್ಯವಹಾರ ಮಂತ್ರಿಯಾಗಿದ್ದರಲ್ಲದೆ 'ಆಜಾದ್ ಹಿಂದ್ ಫೌಜ್' ಎಂದು ಹೆಸರಾಗಿದ್ದ ಅವರು ಇಂಡಿಯನ್ ನ್ಯಾಷನಲ್ ಆರ್ಮಿಯಲ್ಲಿ ಝಾನ್ಸಿರಾಣಿ ರೆಜಿಮೆಂಟ್‌ನ ಕಮ್ಯಾಂಡರ್ ಕೂಡ ಆಗಿದ್ದರು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿನ ಅವರ ಅಮೂಲ್ಯ ಸೇವೆಗಾಗಿ ಅವರನ್ನು ಜು. 23 ರಂದು ನಾವೆಲ್ಲಾ ಅತ್ಯಂತ ಗೌರವದಿಂದ ಸ್ಮರಿಸುತ್ತೇವೆ.**

# ಗೋಡೆ ಕುಸಿದು ಮಗು ಸಾವು: ಶಾಸಕ-ಡಿಸಿ ಭೇಟಿ, 5 ಲಕ್ಷ ರೂ. ಪರಿಹಾರ





**(1ನೇ ಪುಟದಿಂದ)** ಆಗಮಿಸಿ ಘಟನೆ ನಡೆದ ಸ್ಥಳವನ್ನು ಪರಿಶೀಲಿಸಿ, ಮಗುವಿನ ತಂದೆ-ತಾಯಿಗೆ ಸಾಂತ್ವನ ಹೇಳಿ, ಬೆಳಿಗ್ಗೆಯೇ ನಿಮ್ಮ ಖಾತೆಗೆ ಪರಿಹಾರದ 5 ಲಕ್ಷ ರೂ. ಜಮಾ ಮಾಡಿರುವುದನ್ನು ಹೇಳಿ ಸರ್ಕಾರದಿಂದ ಮನೆ ಮಂಜೂರು ಮಾಡಿಸುವುದಾಗಿ ತಿಳಿಸಿದರು.

ಈ ವೇಳೆ ಮುಖಂಡ ನಂದಿಗಾವಿ ಶ್ರೀನಿವಾಸ್, ಗ್ರಾ.ಪಂ. ಅಧ್ಯಕ್ಷೆ ಲೀಲಾ ಶಿವಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್.ಹೆಚ್. ಬಸವರಾಜ್, ಕರಡಿ ರಾಜಪ್ಪ, ಎಂ. ವಾಸು, ತಹಶೀಲ್ದಾರ್ ಪೃಥ್ವಿ ಸಾನಿಕಂ, ಉಪತಹಶೀಲ್ದಾರ್ ಆರ್. ರವಿ, ಆರ್.ಐ. ಸಮೀರ್ ಬಿ.ಎ. ಶ್ರೀಧರ್, ಪಿಡಿಓ ಮೂರ್ತಿ ಮತ್ತಿತರರು ಹಾಜರಿದ್ದರು.

**ಆರೋಪ :** ಗ್ರಾ.ಪಂ. ಉಪಾಧ್ಯಕ್ಷ ಎ.ಕೆ. ಹನುಮಂತಪ್ಪ ಅವರು ಇಂತಹ ಘಟನೆಗಳು ನಡೆಯಲು ಹಿಂದಿನ ಬಿಜೆಪಿ ಸರ್ಕಾರವೇ ಕಾರಣ. ಏಕೆಂದರೆ 3 ವರ್ಷದಲ್ಲಿ ಒಂದೂ ಆಶ್ರಯ ಮನೆ ನೀಡಿಲ್ಲ. ಸರ್ಕಾರ ಮನೆ ನೀಡಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ ಎಂದು ದೂರಿದರು.

# ಇಂಡಿಯಾ ಎಂದು ಹೆಸರಿಟ್ಟುಕೊಂಡಿವೆ

**(1ನೇ ಪುಟದಿಂದ)** ಹೇಳಿಕೆಗಳ ಬಗ್ಗೆ ವಿವರ ನೀಡಿದರು. ಪ್ರತಿಪಕ್ಷಗಳು ಸೋತಿವೆ, ಬಳಲಿವೆ, ಆಶಾರಹಿತವಾಗಿವೆ. ಮೋದಿ ವಿರೋಧಿಸುವುದೊಂದೇ ಅವುಗಳ ಅಜೆಂಡಾ. ಅವರು ಪ್ರತಿಪಕ್ಷದ ಸಾಲಿನಲ್ಲೇ ಮುಂದುವರೆಯಲು ಮನಸ್ಸು ಮಾಡಿದ್ದಾರೆ ಎಂದು ಮೋದಿ ಹೇಳಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿದ್ದ ಪ್ರತಿಪಕ್ಷಗಳು ತಮ್ಮ ಒಕ್ಕೂಟಕ್ಕೆ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (ಐ.ಎನ್.ಡಿ.ಐ.ಎ.) ಎಂಬ ಹೆಸರಿಟ್ಟುಕೊಂಡಿದ್ದವು.

## ಖರ್ಗೆ ತೀವ್ರ ತರಾಟೆ

**(1ನೇ ಪುಟದಿಂದ)** ಅವರು ಈಸ್ಟ್ ಇಂಡಿಯಾ ಕಂಪನಿ ಬಗ್ಗೆ ಮಾತನಾಡುತ್ತಿದ್ದಾರೆ. ಐ.ಎನ್.ಡಿ.ಐ.ಎ. ಎಂದರೆ ಈಸ್ಟ್ ಇಂಡಿಯಾಗೆ ಹೋಲಿಸುತ್ತಿದ್ದಾರೆ ಎಂದಿದ್ದಾರೆ. ನಂತರ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಖರ್ಗೆ, ಕಾಂಗ್ರೆಸ್ ಪಕ್ಷ ಸದಾ ಭಾರತ ಮಾತೆ ಪರವಾಗಿದೆ ಎಂದಿದ್ದಾರೆ.

ಬಿಜೆಪಿ ರಾಜಕೀಯ ಪೂರ್ವಿಕರೇ ಬ್ರಿಟಿಷರ ಗುಲಾಮರು. ಪ್ರಧಾನಿ ನರೇಂದ್ರ ಮೋದಿ ಗಮನ ಬೇರೆಡೆ ಸೆಳೆಯುವುದನ್ನು ಬಿಟ್ಟು, ಸಂಸತ್ತಿನಲ್ಲಿ ಮಣಿಪುರದ ಬಗ್ಗೆ ಮಾತನಾಡಬೇಕು ಎಂದು ಖರ್ಗೆ ಹೇಳಿದ್ದಾರೆ.

# ಉಕ್ಕಡಗಾತ್ರಿಗೆ ಡಿಸಿ, ಎಸಿ ಭೇಟಿ, ಪರಿಶೀಲನೆ



**(1ನೇ ಪುಟದಿಂದ)** ಮುಂಜಾಗ್ರತಾ ಕ್ರಮಗಳನ್ನು ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ದೇವಸ್ಥಾನ ಕಾರ್ಯದರ್ಶಿ ಸುರೇಶ್ ಮತ್ತು ಗ್ರಾ.ಪಂ. ಮಾಜಿ ಅಧ್ಯಕ್ಷೆ ಕರಿಬಸಮ್ಮ ಹಾಗೂ ಗ್ರಾಮಸ್ಥರು ಮಾಳನಾಯಕನಹಳ್ಳಿ-ಉಕ್ಕಡಗಾತ್ರಿ ನಡುವೆ ಹೊಸ ಸಂಪರ್ಕ ಸೇತುವೆ ನಿರ್ಮಿಸುವಂತೆ ಮತ್ತು ಉಕ್ಕಡಗಾತ್ರಿ-ಪತ್ತೇಪುರ ನಡುವೆ ಇರುವ ಸಂಪರ್ಕ ಸೇತುವೆಯನ್ನು ಎತ್ತರ ಮಾಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದರು.

ಇದಕ್ಕೆ ಪೂರಕವಾಗಿ ಸ್ಪಂದಿಸಿದ ಡಿಸಿಯವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿದರು.

ತಹಶೀಲ್ದಾರ್ ಪೃಥ್ವಿ ಸಾನಿಕಂ, ಪಿಆರ್‌ಐಡಿ ಎಇಇ ಗಿರೀಶ್, ಉಪ ತಹಶೀಲ್ದಾರ್ ಆರ್. ರವಿ ಕಂದಾಯ ನಿರೀಕ್ಷಕ ಸಮೀರ್, ಗ್ರಾಮ ಲೆಕ್ಕಾಧಿಕಾರಿ ಆನಂದತೀರ್ಥ, ಪಿಡಿಓ ರಾಮಚಂದ್ರಪ್ಪ ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ಹೂಡಿಕೆ ಸಮಾರಂಭ

ಜೈನ್ ಪಬ್ಲಿಕ್ ಸ್ಕೂಲ್‌ನಲ್ಲಿ ಇಂದು ಬೆಳಿಗ್ಗೆ 10.30 ಗಂಟೆಗೆ 14ನೇ ಹೂಡಿಕೆ ಕಾರ್ಯಕ್ರಮ ನಡೆಯಲಿದೆ. ಅತಿಥಿಗಳಾಗಿ ಪ್ರಕಾಶ್ ಪಿ.ಬಿ. ಆಗಮಿಸುವರು. ಗೌರವ ಅತಿಥಿಗಳಾಗಿ ಡಾ. ಹೆಚ್.ವಿ. ವಾಮದೇವಪ್ಪ ಆಗಮಿಸುವರು. ಕಾರ್ಯಕ್ರಮವನ್ನು ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಅಚಲ್‌ಚಂದ್ ಜೈನ್ ಉದ್ಘಾಟಿಸುವರು.

# ಕ.ರಾ.ಮು.ವಿ: ವಿವಿಧ ಕೋರ್ಸ್‌ಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನ

ದಾವಣಗೆರೆ, ಜು.25 - ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಬಿ.ಎ, ಬಿ.ಕಾಂ., ಬಿ.ಎಸ್.ಸಿ., ಬಿ.ಲಿಬ್.ಐ.ಎಸ್.ಸಿ., ಬಿ.ಸಿ.ಎ., ಬಿ.ಬಿ.ಎ., ಬಿ.ಎಸ್.ಡಬ್ಲ್ಯೂ., ಎಂ.ಎ., ಎಂ.ಕಾಂ., ಎಂ.ಎ-ಎಂ.ಸಿ.ಜೆ., ಎಂ.ಲಿಬ್.ಐ.ಎಸ್.ಸಿ., ಎಂ.ಬಿ.ಎ., ಎಂ.ಎಸ್.ಸಿ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ. ಪದವಿಗಳು ಹಾಗೂ ಸ್ನಾತಕೋತ್ತರ ಪದವಿ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಆಗಸ್ಟ್ 31 ರೊಳಗಾಗಿ ಕರಾಮುವಿ ಯ ಅಧಿಕೃತ ವೆಬ್‌ಸೈಟ್: www.ksoumysuru.ac.in ನಲ್ಲಿ ಪ್ರವೇಶಾತಿ ಪಡೆಯಬಹುದು. ಮಾಹಿತಿಗಾಗಿ ವಿವಿ ಅಧಿಕೃತ ಜಾಲತಾಣ www.ksoumysuru.ac.in ಅಥವಾ 8690544544, 8800335638, 9916009318, 8095939359 ಸಂಪರ್ಕಿಸಬಹುದು.

# ಸಂಕಲ್ಪ ಸಕಾರಾತ್ಮಕ, ದೃಢವಾಗಿರಲಿ : ಶಾರದೇಶಾನಂದ ಶ್ರೀ



ದಾವಣಗೆರೆ, ಜು. 25- ನಾವು ಮಾಡುವ ಸಂಕಲ್ಪ ಶಕ್ತಿಯುತ, ಸತ್ವಯುತ, ಸಕಾರಾತ್ಮಕವಾಗಿರಬೇಕು ಮತ್ತು ದೃಢವಾಗಿರಬೇಕು. ಸಂಕಲ್ಪ ಆದರ್ಶಪ್ರಾಯವಾಗಿದ್ದು ಇನ್ನೊಬ್ಬರಿಗೆ ಸ್ಫೂರ್ತಿ ನೀಡುವಂತಿರಬೇಕು ಎಂದು ಹರಿಹರ ರಾಮಕೃಷ್ಣಾಶ್ರಮದ ಶ್ರೀ ಶಾರದೇಶಾನಂದ ಸ್ವಾಮೀಜಿ ಹಿತ ನುಡಿದರು.

ನಗರದ ವಿದ್ಯಾಸಾಗರ ಕಾನ್ವೆಂಟ್ ಶಾಲಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಸಂಕಲ್ಪ ದಿನಾಚರಣೆ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸಂಕಲ್ಪ ಅತ್ಯಂತ ಶಕ್ತಿಯುತ ಮತ್ತು ಸತ್ವಯುತ. ವಿದ್ಯಾರ್ಥಿಗಳು ಓದಿನ ಜೊತೆಗೆ ಆರೋಗ್ಯ ನಿಯಮಗಳನ್ನು ತಪ್ಪದೇ ಪಾಲಿಸಬೇಕು ಎಂದರು.

ಸಂಕಲ್ಪದಿಂದ ಸಾಧನೆ ಸಾಧ್ಯ. ಸಣ್ಣ ಸಣ್ಣ ಸಂಕಲ್ಪಗಳನ್ನು ಮಾಡುತ್ತಾ ದೊಡ್ಡ ದೊಡ್ಡ ಸಂಕಲ್ಪಗಳನ್ನು ಮಾಡಿಕೊಳ್ಳಬೇಕು. ತನ್ಮೂಲಕ ದೊಡ್ಡ ವ್ಯಕ್ತಿಗಳಾಗಲು ಸಾಧ್ಯವಿದೆ ಎಂದು ಹೇಳಿದರು.

ಗುರಿ ಮುಟ್ಟುವ ಜೊತೆಗೆ ಸರಿಯಾದ ಮಾರ್ಗದಲ್ಲಿ ಸಾಗಬೇಕು. ಕೀಳರಿಮೆ ಬೆಳೆಸಿಕೊಳ್ಳದೆ, ಇನ್ನೊಬ್ಬರಿಗೆ ಕಿರಿಕಿರಿ ಉಂಟು ಮಾಡದೇ, ಜೀವನದಲ್ಲಿ ಜಾಗೃತರಾಗಿ ಮುನ್ನಡೆಯಬೇಕಾಗಿದೆ. ವಿದ್ಯಾರ್ಥಿಗಳು ನಿಂತು ಓದುವುದನ್ನು ರೂಢಿಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ಮಾತನಾಡಿ, ಜೀವನದಲ್ಲಿ ಒಳ್ಳೆಯತನ ರೂಢಿಸಿಕೊಳ್ಳಬೇಕು. ಗುರಿಯನ್ನು ಮುಖ್ಯವಾಗಿರಿಸಿಕೊಂಡು ಮುನ್ನಡೆದರೆ ಯಶಸ್ಸು ಕಾಣಲು ಸಾಧ್ಯವಿದೆ ಎಂದರು.

ಪ್ರಾಮಾಣಿಕ ಪ್ರಯತ್ನ, ಸತತ ಪರಿಶ್ರಮದಿಂದ ಸಂಕಲ್ಪ ಈಡೇರಲು ಸಾಧ್ಯವಿದೆ. ಶಾಲೆಯಲ್ಲಿ ಓದಿದ್ದನ್ನು ಚನ್ನಾಗಿ ಮನನ ಮಾಡಿಕೊಳ್ಳಬೇಕು. ಗುರುಗಳ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕಾದ ಅಗತ್ಯವಿದೆ ಎಂದು ಕರೆ ನೀಡಿದರು.

ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ನಿಮ್ಮಲ್ಲಿರುವ ಶಕ್ತಿಯನ್ನು ಗುರುತಿಸಬೇಕು. ಯಾವುದೂ ಅಸಾಧ್ಯವಲ್ಲ. ಸಾಧ್ಯವಾಗಿಸಿಕೊಳ್ಳುವ ನಿಟ್ಟಿನಲ್ಲಿ ಗುರಿ ಇರಲಿ ಎಂದು ಹಿತ ನುಡಿದರು.

ವಿದ್ಯಾಸಾಗರ ಶಾಲಾ ಸಂಸ್ಥಾಪಕ ಭರತ್ ಸಿಂಗ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಕಲ್ಪದ ಜೊತೆಗೆ ಸುಂದರ ಬದುಕು ಕಟ್ಟಿಕೊಳ್ಳಬೇಕು. ಪ್ರಾಮಾಣಿಕ ಪ್ರಯತ್ನದಿಂದ ಗುರಿ ಸಾಧನೆ ಸಾಧ್ಯವಾಗುತ್ತದೆ ಎಂದರು.

ಕಾರ್ಯದರ್ಶಿ ಸತ್ಯವತಿ ಭರತ್‌ಸಿಂಗ್ ಮಾತನಾಡಿದರು. ಆಡಳಿತಾಧಿಕಾರಿ ವಿಶ್ವಜಿತ್ ಸಿಂಗ್, ಮುಖ್ಯ ಶಿಕ್ಷಕ ಮಂಜುನಾಥ್ ಉಪಸ್ಥಿತರಿದ್ದರು.

6 ನೇ ತರಗತಿ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ವಿಜ್ಞಾನ ಶಿಕ್ಷಕಿ ಆಶಾ ಸ್ವಾಗತಿಸಿದರು. ರಶ್ಮಿ ಜೋಷಿ ವಂದಿಸಿದರು. ವಿದ್ಯಾರ್ಥಿಗಳಿಗೆ ಶ್ರೀ ಶಾರದೇಶಾನಂದ ಸ್ವಾಮೀಜಿ 'ಸಂಕಲ್ಪ ವಿಧಿ' ಬೋಧಿಸಿದರು.

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಜ್ಯೋಗಪ್ಪರ ಚಂದ್ರಪ್ಪ ಬಿನ್ ಕ್ಯಾತಪ್ಪ ರುದ್ರನಕಟ್ಟೆ ಗ್ರಾಮ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಇವರು ಕೊಟ್ಟ ಅಧಿಕಾರ ಮತ್ತು ಮಾಹಿತಿ ಮೇರೆಗೆ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಸದರಿ ಈ ನೋಟೀಸಿನ ಅನುಸೂಚಿ ಆಸ್ತಿಯಲ್ಲಿ ನಮೂದಿಸಿರುವ ಆಸ್ತಿಯು ರೇವಣಸಿದ್ದಪ್ಪ ಬಿನ್ ಐಗೂರು ಕರಿಯಪ್ಪ ದಿಂಡದ ಹಳ್ಳಿ ಗ್ರಾಮ ಮಾಯಕೊಂಡ ಹೋಬಳಿ, ದಾವಣಗೆರೆ ತಾಲ್ಲೂಕು, ಇವರ ಆಸ್ತಿ ಆಗಿರುತ್ತದೆ. ಸದರಿ ಆಸ್ತಿಯನ್ನು ರೇವಣಸಿದ್ದಪ್ಪ ಇವರು, ದಿನಾಂಕ : 16.02.1996 ರಂದು 40,000/- (ನಲವತ್ತು ಸಾವಿರ) ರೂಪಾಯಿಗಳಿಗೆ ನಮ್ಮ ಕಕ್ಷಿದಾರರಿಗೆ ಕ್ರಯದ ಕರಾರು ಪತ್ರ ಮಾಡಿ ಸ್ವಾಧೀನವನ್ನು ನೀಡಿರುತ್ತಾರೆ. ಸದರಿ ಕ್ರಯದ ಕರಾರು ಪತ್ರದ ಪ್ರಕಾರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ಇತ್ಯರ್ಥವಾದ ಮೇಲೆ, ಕರೆದಾಗ ಬಂದು ಕ್ರಯ ಪತ್ರ ಮಾಡಿಕೊಡುತ್ತೇವೆ ಅಂತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ.

ಸದರಿ ಆಸ್ತಿಯಲ್ಲಿ 1 ಎಕರೆ 4 ಗುಂಟೆಯಲ್ಲಿ 10 ಗುಂಟೆ ನರ್ಸರಿ ಮತ್ತು 34 ಗುಂಟೆ ಇತರೆ ಬೆಳೆಗಳನ್ನು ಬೆಳೆಯುತ್ತಾ ಬಂದಿರುತ್ತಾರೆ. ಸದರಿ ಈ ನೋಟೀಸಿನ ಅನುಸೂಚಿ ಆಸ್ತಿಯನ್ನು ನಮ್ಮ ಕಕ್ಷಿದಾರರೇ ಶಾಂತ ರೀತಿಯ ಸ್ವಾಧೀನಾನುಭವವನ್ನು ಕ್ರಯದ ಕರಾರು ಪತ್ರದ ದಿನಾಂಕ : 16.02.1996ರಿಂದ ನಮ್ಮ ಕಕ್ಷಿದಾರರು ಶಾಂತ ರೀತಿಯ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಒಂದು ವೇಳೆ ಸದರಿ ಈ ನೋಟಿಸಿನ ಅನುಸೂಚಿ ಆಸ್ತಿಗೆ ಸಂಬಂಧ ಪಟ್ಟಂತೆ ಬೇರೆ ಯಾರಾದರೂ ಸದರಿ ರೇವಣಸಿದ್ದಪ್ಪ ಬಿನ್ ಐಗೂರು ಕರಿಯಪ್ಪ ಇವರೊಡನೆ ವ್ಯವಹಾರ, ವಗೈರೆ ಮಾಡಿದರೆ ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗಿರುವುದಿಲ್ಲ. ಒಂದು ವೇಳೆ ಆ ರೀತಿ ಸದರಿ ರೇವಣಸಿದ್ದಪ್ಪ ಇವರಿಂದ ಕ್ರಯದ ಕರಾರು ಅಥವಾ ಪರಭಾರೆ ವಗೈರೆ ಮಾಡಿಕೊಂಡರೆ ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನೀವುಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತೀರಿ ಅಂತ ನೀಡಿದ ಸಾರ್ವಜನಿಕ ಪ್ರಕಟಣೆ.

**ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ರುದ್ರನಕಟ್ಟೆ ಗ್ರಾಮದ ರೀ. ಸರ್ವೆ ನಂ. 31 : ಪೈಕಿ ವಿಸ್ತೀರ್ಣ ಎಕರೆ-ಒಂದು, ಗುಂಟೆ-ಇಪ್ಪತ್ತಾರು (1-26), ಆಕಾರ ರೂ. 1.00ವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಇದೇ ಸರ್ವೆ ನಂಬರ್ ಪೈಕಿ ಶಿವರುದ್ರಪ್ಪನವರ ಹೊಲ, ಪಶ್ಚಿಮಕ್ಕೆ : ಅಗಸನಕಟ್ಟೆ ಗಡಿ, ಉತ್ತರಕ್ಕೆ ; ಜ್ಯೋಗಪ್ಪರ ತತಿಪ್ಪೇಸ್ವಾಮಿ ಇವರ ಜಮೀನು, ದಕ್ಷಿಣಕ್ಕೆ : ಹುಣಸೆಕಟ್ಟೆ-ದಾವಣಗೆರೆ ರಸ್ತೆ ಈ ಮಧ್ಯದ ಜಮೀನು ಸದರಿ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.**

**ಸಹಿ/- ವಕೀಲರು, ಶ್ರೀಮತಿ ವೀಣಾ ಎಸ್. ಮೋಹರೆ,ಲಾಳಿ ತಿಮ್ಮಪ್ಪ ಕಾಂಪ್ಲೆಕ್ಸ್, ಹೊಸ ಜಿಲ್ಲಾ ಕೋರ್ಟ್ ಎದುರು, ದೇವರಾಜ ಅರಸ್ ಬಡಾವಣೆ, ಎ ಬ್ಲಾಕ್, ದಾವಣಗೆರೆ.**

**ಸ್ಥಳ : ದಾವಣಗೆರೆ**
**ದಿನಾಂಕ : 25.07.2023**

## ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ

**ಸಿ.ಆರ್.ಮಿಸ್.ನಂ. 509/2023**

**ಅರ್ಜಿದಾರರು : 1. ಶ್ರೀ ಬಷೀರ್ ಅಹಮದ್ ಎಸ್ ಬಿನ್ ಲೇಟ್ ಸಾಲೇಹ ಸಾಬ್** ವಯಸ್ಸು ಸುಮಾರು 54 ವರ್ಷ. 2. **ಶ್ರೀ ಅಸ್ಲಂ ಎಂ ಬಿನ್ ಲೇಟ್ ಮಹಬೂಬ್ ಪೀರ್ ಎಸ್** ವಯಸ್ಸು ಸುಮಾರು 38 ವರ್ಷ. 3. **ಶ್ರೀ ಅಕ್ರಂ ಬಾಷ ಎಂ ಲೇಟ್ ಮಹಬೂಬ್ ಪೀರ್ ಎಸ್** ವಯಸ್ಸು ಸುಮಾರು 36 ವರ್ಷ. 1 ರಿಂದ 3 ರವರೆಗಿನ ಅರ್ಜಿದಾರರ ವಾಸ, #337/1, ಉರ್ದು ಶಾಲೆಯ ಎದುರು, ಎಂ.ಬಿ. ಕೇರಿ, ದಾವಣಗೆರೆ. *ವಿರುದ್ಧ* **ಎದುರುದಾರರು** : ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಮಹಾನಗರ ಪಾಲಿಕೆ, ಪಿ.ಬಿ. ರಸ್ತೆ. ದಾವಣಗೆರೆ.

**ನ್ಯಾಯಾಲಯದಿಂದ ಸಾರ್ವಜನಿಕರಿಗೆ ನೀಡಲಾದ ಪ್ರಕಟಣಾ ನೋಟೀಸ್**

ಮೇಲ್ಕಂಡ ಪ್ರಕರಣದ 1ನೇ ಅರ್ಜಿದಾರರ ಅಜ್ಜಿ ಮತ್ತು 2 ಮತ್ತು 3ನೇ ಅರ್ಜಿದಾರರು ತಮ್ಮ ಮುತ್ತಜ್ಜಿಯಾದ ಮೃತ ಮಹಬೂಬ್ ಬಿ ಇವರು ದಿನಾಂಕ : 15.10.1970 ರಲ್ಲಿ ಮರಣ ಹೊಂದಿದ್ದು, ಸದರಿ ಮೃತ ಮಹಬೂಬ್ ಬಿ ರವರ ಮರಣ ಪ್ರಮಾಣ ಪತ್ರಕ್ಕಾಗಿ ಮಾನ್ಯ ನ್ಯಾಯಾಲಯದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಸಂಬಂಧವಾಗಿ ಸಂಬಂಧಿಕರಾಗಲೀ, ಸಾರ್ವಜನಿಕರಾಗಲೀ ಅಥವಾ ಬೇರೆ ಯಾರಿಗಾದರೂ ತಂಟೆ, ತಕರಾರುಗಳಿದ್ದಲ್ಲಿ, ಅಂತಹ ವ್ಯಕ್ತಿಗಳು ತಾವಾಗಲೀ ಅಥವಾ ಅವರ ಪರ ವಕೀರಾಗಲೀ ದಿನಾಂಕ : 16-08-2023 ರಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು ಮತ್ತು ತಮ್ಮ ಪರವಾಗಿ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳಿದ್ದರೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರಿಂದಲೂ ಯಾವುದೇ ರೀತಿಯ ತಕರಾರು ಅಥವಾ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಘನ ನ್ಯಾಯಾಲಯವು ಅರ್ಜಿದಾರರ ಪರವಾಗಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 21-07-2023 ರಂದು ಕೊಡಲ್ಪಟ್ಟಿದೆ.

**ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೇದಾರರು, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ.**

**ಅರ್ಜಿದಾರರ ಪರ ವಕೀಲರು, ಇಳಕಲ್ ಷೇಕ್ ಇಸ್ಮಾಯಿಲ್, ದಾವಣಗೆರೆ.**

# ಜಿಲ್ಲೆಯಲ್ಲಿ ಬೆಳೆಗಳಿಗೆ ಶೀತದ ಅಡ್ಡ ಪರಿಣಾಮ : ಪರಿಹಾರ



ದಾವಣಗೆರೆ, ಜು.25- ಜಿಲ್ಲೆಯ ಮುಂಗಾರು ಹಂಗಾಮಿನ ಮಳೆ ಆಶ್ರಿತ ಪ್ರದೇಶದಲ್ಲಿ ಈಗಾಗಲೇ ವಿವಿಧ ಬೆಳೆಗಳ ಬಿತ್ತನೆಯಾಗಿದ್ದು, ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಮೋಡ ಕವಿದ ವಾತಾವರಣವಿದ್ದು, ಆಗಿಂದಾಗ್ಗೆ ಜಿಟಿ ಜಿಟಿ ಮಳೆ ಬರುತ್ತಿರುವುದರಿಂದ ಕೆಲವೊಂದು ಭಾಗದ ಜಮೀನಿನಲ್ಲಿ ನೀರು ನಿಲ್ಲುವಂತಹ ಕಡೆಗಳಲ್ಲಿ ಬೆಳೆಗಳಿಗೆ ಶೀತದ ಅಡ್ಡ ಪರಿಣಾಮಗಳು ಕಂಡು ಬರುತ್ತಿವೆ. ಕಾರಣ ರೈತ ಬಾಂಧವರು ವಿವಿಧ ಬೆಳೆಗಳಲ್ಲಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ವಿನಂತಿಸಿದೆ.

ಜಿಲ್ಲೆಯಲ್ಲಿ ಮೆಕ್ಕೆಜೋಳ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಶೀತದ ಪರಿಣಾಮ ಬೆಳೆ ಬಿಳಿಚಾಗುವುದು ಹಾಗೂ ಕ್ಯಾದಿಗೆ ರೋಗದ ತರಹದ ಲಕ್ಷಣಗಳು ಕಂಡು ಬಂದಲ್ಲಿ, ಜಮೀನಿನಲ್ಲಿ ನೀರು ಬಸಿದು ಹೋಗುವಂತೆ ನೀರಿನ ದಾರಿ ಕಲ್ಪಿಸುವುದು. ದಪ್ಪವಾಗಿ ಬಿತ್ತನೆಯಾದ ಕಡೆಗಳಲ್ಲಿ ಕನಿಷ್ಠ 8 ಅಂಗುಲ ಅಂತರ ಕಾಯ್ದುಕೊಳ್ಳಲು ಸಸಿಗಳನ್ನು ಕಿತ್ತು, ಎಡೆ ಹೊಡೆದು ಬೆಳೆ ಸಾಲುಗಳಿಗೆ ದಿಂಡು ಏರಿಸಬೇಕು.

ಮೆಕ್ಕೆಜೋಳ 30 ದಿವಸದ ಬೆಳೆಗೆ 10 ರಿಂದ 15 ಕೆಜಿ ಯೂರಿಯಾ ಮೇಲುಗೊಬ್ಬರ ಕೊಡಬಹುದು. ಶೀತ ಬಾಧೆಯಿಂದ ಬೇಗ ಚೇತರಿಸಿಕೊಳ್ಳಲು 3ಗ್ರಾಂ.ನೀರಿನಲ್ಲಿ ಕರಗುವ ಸಾರಜನಕ:ರಂಜಕ:ಪೊಟ್ಯಾಷ್ (19:19:19 / 18:18:18) ಮತ್ತು 3 ಮಿಲೀ. ಲಘು ಪೋಷಕಾಂಶ ದ್ರಾವಣವನ್ನು ಪ್ರತೀ ಲೀಟರ್ ನೀರಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು.

ಮಳೆ ಹಾಗೂ ಬಿಸಿಲು ವಾತಾವರಣ ಇದ್ದಲ್ಲಿ ಶೇಂಗಾ ಬೆಳೆಯಲ್ಲಿ ಬುಡ ಕೊಳೆ ರೋಗ ಕಂಡು ಬರುತ್ತದೆ. ಅಲ್ಲಲ್ಲಿ ಗಿಡಗಳು ಬಾಡುವುದು ಕಂಡು ಬರುತ್ತದೆ. ಹತೋಟಿಗಾಗಿ 2ಗ್ರಾಂ. ಕಾರ್ಬನ್ ಡೈಜಿಂ ಪ್ರತೀ ಲೀಟರ್ ನೀರಿಗೆ ಬೆರೆಸಿ ದ್ರಾವಣವನ್ನು ರೋಗ ಪೀಡಿತ ಬೆಳೆಗಳ ಬುಡಕ್ಕೆ ಸುರಿಯಬೇಕು.

ಶೇಂಗಾ ಬಿತ್ತುವಾಗ ಜಿಪ್ಸಂ ಹಾಕಿಲ್ಲದಿದ್ದಲ್ಲಿ, 30 ದಿನದೊಳಗಾಗಿ 2ಕ್ವಿಂ. ಜಿಪ್ಸಂನ್ನು ಪ್ರತೀ ಎಕರೆಗೆ ಮಣ್ಣಿನಲ್ಲಿ ಬೆರೆಸಿ ಎಡೆ ಹೊಡೆದು ದಿಂಡು ಏರಿಸಬೇಕು.

ತೊಗರಿ ಬೆಳೆಯಲ್ಲಿ ನೀರು ನಿಲ್ಲದಂತೆ ಬಸಿದು ತೆಗೆಯಬೇಕು. ಇಲ್ಲದಿದ್ದಲ್ಲಿ ಸಿಡಿ ರೋಗ ಬರುವ ಸಾಧ್ಯತೆ ಇರುತ್ತದೆ. ಸಿಡಿ ರೋಗದ ಲಕ್ಷಣಗಳು (ಗಿಡ ಬಾಡಿದಂತೆ ಅಥವಾ ಒಣಗಿದಂತೆ ಕಾಣುತ್ತದೆ) ಇದ್ದಲ್ಲಿ ಸಿಡಿ ರೋಗ ಬಾಧಿತ ಒಣಗಿದ ಗಿಡಗಳನ್ನು ಕಿತ್ತು ನಾಶಪಡಿಸಬೇಕು. ಮುನ್ನೆಚ್ಚರಿಕೆಯಾಗಿ ಇತರೆ ಪ್ರದೇಶಕ್ಕೆ ರೋಗ ಹರಡದಂತೆ 1ಗ್ರಾಂ. ಕಾರ್ಬಂಡೈಜಿಂ ಪ್ರತೀ ಲೀಟರ್ ನೀರಿಗೆ ಬೆರೆಸಿ ರೋಗ ಪೀಡಿತ ಪ್ರದೇಶ ನೆನೆಯುವಂತೆ ಸುರಿಯಬೇಕು.

ಹತ್ತಿ ಬೆಳೆಯಲ್ಲಿ ಸತತವಾಗಿ ಬರುವ ಜಿಟಿ ಜಿಟಿ ಮಳೆಯಿಂದ ಕರಿ ಹೇನು ಬಾಧೆ ಕಂಡು ಬಂದಲ್ಲಿ ಹತೋಟಿಗೆ ಒಂದು ಮಿಲೀ. ಅಸಿಟಮಿಪ್ರಿಡ್ 3ಲೀ. ನೀರಿಗೆ ಅಥವಾ ಒಂದು ಮಿಲೀ ಇಮಿಡಕ್ಲೋಪ್ರಿಡ್ ಪ್ರತಿ ಲೀಟರ್ ನೀರಿಗೆ ಬೆರೆಸಿ ಬೆಳೆಯ ಮೇಲೆ ಚೆನ್ನಾಗಿ ಸಿಂಪಡಿಸಬೇಕು. ಜಮೀನಿನಲ್ಲಿ ನೀರು ನಿಲ್ಲದಂತೆ ಬಸಿದು ತೆಗೆಯಬೇಕು. ಶೀತ ಬಾಧೆಯಿಂದ ಎಲೆ ಕೆಂಪಾಗುವುದು ಕಂಡುಬಂದಲ್ಲಿ, ಶೇ.2ರ ಡಿಎಪಿ ರಸಗೊಬ್ಬರದ ದ್ರಾವಣವನ್ನು (100 ಲೀ.ನೀರಿನಲ್ಲಿ 2ಕೆಜಿ ಡಿಎಪಿ ಚೆನ್ನಾಗಿ ಕರಗಿಸಿ ಒಂದು ರಾತ್ರಿ ಬಿಟ್ಟು, ಮೇಲಿನ ತಿಳಿ) ಪ್ರತೀ ಎಕರೆಗೆ 200ಲೀ.ನಂತೆ ಬೆಳೆಗೆ ಸಿಂಪರಿಸಬೇಕು. ಬೆಳೆಯಲ್ಲಿ ಎಡೆ ಹೊಡೆದು ಸಾಲುಗಳಿಗೆ ದಿಂಡು ಏರಿಸಬೇಕು.

ಎಲ್ಲಾ ಬೆಳೆಗಳ ಬಿತ್ತನೆ ಕಾಲಕ್ಕೆ ಜಿಪ್ಸಂ, ಜಿಂಕ್, ಬೋರಾನ್ ನೀಡಿಲ್ಲದಿದ್ದರೆ, 30 ದಿವಸದೊಳಗಾಗಿ ಪ್ರತಿ ಎಕರೆಗೆ 1ಕ್ವಿಂ.ಜಿಪ್ಸಂ, 5ಕೆಜಿ ಜಿಂಕ್ ಮತ್ತು 2ಕೆಜಿ ಬೋರಾನ್ ಪೋಷಕಾಂಶಗಳನ್ನು ಒದಗಿಸಿ ಎಡೆ ಹೊಡೆದು ಸಾಲುಗಳಿಗೆ ದಿಂಡು ಏರಿಸಿ, ಬದುಗಳನ್ನು ಸ್ವಚ್ಛಗೊಳಿಸಿ, ಕಳೆ ಮುಕ್ತವಾಗಿರಿಸಿದಲ್ಲಿ ಕೀಟ ರೋಗ ಬಾಧೆ ಕಡಿಮೆಯಾಗುತ್ತದೆ. ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಲಘು ಪೋಷಕಾಂಶ ಮಿಶ್ರಣಗಳು ರೈತರಿಗೆ ರಿಯಾಯತಿಯಲ್ಲಿ ಲಭ್ಯವಿರುತ್ತವೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಹರಿಹರದಲ್ಲಿ ಗೃಹ ಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಬೃಹತ್ ಸರತಿ ಸಾಲು



ಹರಿಹರ, ಜು,25- ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಗೆ ನಗರದ ದೇವಸ್ಥಾನ ರಸ್ತೆಯ ಕರ್ನಾಟಕ ಒನ್ ಸೆಂಟರ್ ಬಳಿ ಸಾರ್ವಜನಿಕರು ಬೃಹತ್ ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸಿದರು.

ನಗರದ ದೇವಸ್ಥಾನ ರಸ್ತೆ ಹಾಗೂ ಟಿ.ಜೆ. ಶಿವಣ್ಣ ಕಟ್ಟಡದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಬೆಂಕಿನಗರ, ಕಾಳಿದಾಸ ನಗರ, ಹರ್ಲಾಪುರ ಸೇರಿದಂತೆ, ಇತರೆ ಬಡಾವಣೆಗಳಲ್ಲಿ ಇರುವಂತಹ ಸೇವಾ ಕೇಂದ್ರಗಳು ಸಾರ್ವಜನಿಕರಿಂದ ಅರ್ಜಿಯನ್ನು ಸ್ವೀಕರಿಸುವ ಕಾರ್ಯವನ್ನು ಮಾಡುತ್ತಿದ್ದು, ಈ ಕೇಂದ್ರಗಳಲ್ಲಿ ಅರ್ಜಿಯನ್ನು ನೀಡಿದಾಗ ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಸೌಲಭ್ಯಗಳು ದೊರೆಯದಿದ್ದರೆ ಯಾರನ್ನು ದೋಷಿಸಬೇಕು. ಹಾಗಾಗಿ ತಾಲ್ಲೂಕು ಆಡಳಿತ ಇದರ ಬಗ್ಗೆ ಗಮನ ಹರಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು.

ಅಲ್ಲದೇ ಗೃಹ ಜ್ಯೋತಿ ಯೋಜನೆಯ ಅಡಿ ಜುಲೈ ತಿಂಗಳ ಉಚಿತ ವಿದ್ಯುತ್ ಪಡೆಯಲು ನೋಂದಣಿಗೆ ಇಂದು ಮಂಗಳವಾರ ಕೊನೆಯ ದಿನವಾಗಿತ್ತು. ಹಾಗಾಗಿ ಆಗಸ್ಟ್ ತಿಂಗಳಲ್ಲಿ ಶೂನ್ಯ ಬಿಲ್ ಪಡೆಯುವ ಉದ್ದೇಶದಿಂದ ಇಂದು ಕರ್ನಾಟಕ ಒನ್ ಸೆಂಟರ್ ಬಳಿ ಸಾರ್ವಜನಿಕರು ಹೆಚ್ಚಿನ ಸಂಖೆಯಲ್ಲಿ ಸೇರಿದ್ದರು. ಅರ್ಜಿ ಸಲ್ಲಿಸಲು ಇನ್ನೂ ಅಂತಿಮ ದಿನ ಪ್ರಕಟಿಸಿಲ್ಲ. ಇನ್ನು ಆಗಸ್ಟ್ ನಲ್ಲಿ ಅರ್ಜಿ ಸಲ್ಲಿಸಿದರೆ, ಸೆಪ್ಟಂಬರ್‌ನಲ್ಲಿ ಶೂನ್ಯ ಬಿಲ್ ಪಡೆಯಬಹುದಾಗಿದೆ.

# ಅಂಬಾಭವಾನಿ ಬ್ಯಾಂಕ್‌ಗೆ ಗೋಪಾಲರಾವ್ ಮಾನೆ ಅಧ್ಯಕ್ಷ

**(1ನೇ ಪುಟದಿಂದ)** ಗಿರಿಧರ್ ಡಿ. ಮೆಹರ್‌ವಾಡೆ ಅನುಮೋದಿಸಿದರು.

ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಗಿರಿಧರ್ ಡಿ. ಮೆಹರ್‌ವಾಡೆ ಅವರ ಹೆಸರನ್ನು ನಿರ್ದೇಶಕ ರಾಜು ಎಲ್. ಬದ್ದಿ ಅವರು ಸೂಚಿಸಿದಾಗ ಅದನ್ನು ಗೋಪಾಲರಾವ್ ಮಾನೆ ಅನುಮೋದಿಸಿದರು.

ನೂತನ ನಿರ್ದೇಶಕರುಗಳಾದ ಆರ್.ಜಿ. ಸತ್ಯನಾರಾಯಣ, ಆನಂದ್ ಡಿ. ಸಫಾರೆ, ಕೆ. ಗಣೇಶ್, ಎಸ್.ಕೆ. ಮಧುಕರ್, ಆರ್. ವಿಠ್ಠಲ್, ವಿ. ಮನೋಹರ್, ವೈದ್ಯರಾದ ಡಾ. ಎಸ್. ರಜನಿ, ಬಾಬು, ಶ್ರೀಮತಿ ಅನಿತಾಬಾಯಿ ಮಾಲತೇಶರಾವ್ ಜಾಧವ್, ಶ್ರೀಮತಿ ರೇಣುಕಾಬಾಯಿ, ಜಿ. ಯಲ್ಲಪ್ಪ ಅವರುಗಳು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಸಹಕಾರ ಸಂಘಗಳ ದಾವಣಗೆರೆ ಉಪವಿಭಾಗದ ಸಹಾಯಕ ನಿಬಂಧಕರ ಕಛೇರಿಯ ಹಿರಿಯ ನಿರೀಕ್ಷಕ ಎಲ್. ಸತೀಶ್‌ನಾಯ್ಕ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಬ್ಯಾಂಕಿನ ವ್ಯವಸ್ಥಾಪಕ ನಾಗರಾಜ್ ಗೌಡನಕಟ್ಟಿ ಮತ್ತು ಸಹಾಯಕ ವ್ಯವಸ್ಥಾಪಕ ಅನಿಲ್ ಟಿ. ಮಾಳದಕರ್ ಮತ್ತು ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾರರು, ಲೋನ್ ರಿಕವರಿ ಆಫೀಸರ್ ಅವರು ಚುನಾವಣಾ ಪ್ರಕ್ರಿಯೆಗೆ ಸಹಕರಿಸಿದರು.

**ಗಣ್ಯರ ಅಭಿನಂದನೆ :** ಚುನಾವಣೆ ನಡೆದ ನಂತರ ಏರ್ಪಾಡಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಬ್ಯಾಂಕಿನ ಮಾಜಿ ಅಧ್ಯಕ್ಷರುಗಳಾದ ಯಶವಂತ್‌ರಾವ್ ಜಾಧವ್, ಮಾಲತೇಶರಾವ್ ಡಿ. ಜಾಧವ್, ಕಿರಣ್ ಕುಮಾರ್ ಎ., ಮಲ್ಲರಸಾ ಕಾಟ್ವೆ, ಅರವಿಂದ್ ಎಲ್. ಬದ್ದಿ, ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ದೇವರಮನೆ ಶಿವಕುಮಾರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಎಸ್.ಎಸ್.ಕೆ. ಸಮಾಜದ ಮುಖಂಡರು ಮತ್ತಿತರರು ಮಾತನಾಡಿ ಶುಭ ಹಾರೈಸಿದರು.

ಗಣ್ಯರಾದ ಎ.ಜಿ. ವಿಠ್ಠಲ್, ಆಲೂರು ಜಯಣ್ಣ, ಮಲ್ಲಿಕಾರ್ಜುನ, ಪುತ್ತೂರು ಶಲ್ಯವೈದ್ಯ, ದೇವೇಂದ್ರರಾವ್ ಮಾನೆ, ಸುಪ್ರೀತ್ ರಾವ್ ಮಾನೆ, ಮಂಜು ಜಾಧವ್, ವಿಠೋಬರಾವ್, ಆಲೂರು ಭೀಮಣ್ಣ, ತಿಮ್ಮಣ್ಣ, ಸಂತೋಷ್ ಪೈಲ್ವಾನ್, ಪ್ರವೀಣ್ ರಾವ್ ಜಾಧವ್, ಚಂದ್ರಪ್ಪ ಮತ್ತಿತರರು ಭಾಗವಹಿಸಿ, ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಅಭಿನಂದಿಸಿದರು.

# ಗೃಹಲಕ್ಷ್ಮಿ: ಜಿಲ್ಲೆಯಲ್ಲಿ 1.62 ಲಕ್ಷ ಫಲಾನುಭವಿಗಳ ನೋಂದಣಿ ಪೂರ್ಣ

**(1ನೇ ಪುಟದಿಂದ)** ಸಲ್ಲಿಸುವಂತೆ ಅವರು ಕೋರಿದ್ದಾರೆ. ಅರ್ಜಿ ನೋಂದಣಿಗೆ ಯಾವುದೇ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಒಂದು ವೇಳೆ ಕೇಂದ್ರಗಳಲ್ಲಿ ಅರ್ಜಿ ನೋಂದಾಯಿಸಲು ಹಣ ಕೇಳಿದಲ್ಲಿ ಸಾರ್ವಜನಿಕರು ಈ ಬಗ್ಗೆ ಕೂಡಲೇ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ, ಪೊಲೀಸ್ ಠಾಣೆಗೆ ಅಥವಾ ತಹಶೀಲ್ದಾರ್ ಕಛೇರಿಗೆ ದೂರು ಸಲ್ಲಿಸುವಂತೆ ಅವರು ಹೇಳಿದ್ದಾರೆ.

# ವಿದ್ಯಾರ್ಥಿಗಳಿಗೆ ಕಲಿಯುವ ಹಸಿವು, ಛಲ ಇರಬೇಕು



## ಆರ್.ಎಸ್. ನಾಗಭೂಷಣ್ ಆಶಯ

ದಾವಣಗೆರೆ, ಜು.25- ನಗರದ ಜಿಎಂಐಟಿ ಪಾಲಿಟೆಕ್ನಿಕ್‌ನ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶ ಕಾರ್ಯಕ್ರಮವನ್ನು ಕಾಲೇಜಿನ ಜಿಎಂ ಹಾಲಮ್ಮ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನಗರದ ವಿಜಯ ಟ್ರೇಡರ್ಸ್ ಕಂಪನಿಯ ಮಾಲೀಕ ಆರ್. ಎಸ್. ನಾಗಭೂಷಣ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಕಲಿಯುವ ಹಸಿವಿರಬೇಕು, ಸಾಧಿಸುವ ಛಲವಿರಬೇಕು, ವಿಶೇಷ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಇತರರಿಗೆ ಮಾದರಿಯಾಗಬೇಕೆಂದು ಕರೆಕೊಟ್ಟರು.

ಮುಂಬರುವ ಜಿ.ಎಂ. ವಿಶ್ವವಿದ್ಯಾಲಯದ ನಾಮ ನಿರ್ದೇಶಿತ ಉಪ ಕುಲಪತಿ ಡಾ. ಎಚ್. ಡಿ. ಮಹೇಶಪ್ಪ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು ಮತ್ತು ಬದ್ಧತೆಯನ್ನು ಪ್ರದರ್ಶಿಸುವುದರ ಮೂಲಕ ಉತ್ತಮ ವಿದ್ಯಾರ್ಥಿಗಳಾಗಿ ಹೊರಹೊಮ್ಮಬೇಕೆಂದು ತಿಳಿಸಿದರು.

ಜಿಎಂಐಟಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಡಾ. ಬಿ. ಆರ್. ಶ್ರೀಧರ್ ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ, ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ, ಕಾಲೇಜಿನ ಆಡಳಿತ ಅಧಿಕಾರಿ ಸುಭಾಷ್‌ಚಂದ್ರ ಮಾತನಾಡಿದರು.

ಸಿವಿಲ್ ವಿಭಾಗದ ಮುಖ್ಯಸ್ಥ ನಿಂಗರಾಜು ಮತ್ತು ಮೆಕ್ಯಾನಿಕಲ್ ವಿಭಾಗದ ಅಧ್ಯಾಪಕರಾದ ಯಾಸ್ಮಿನ್ ಬೇಗಮ್ ಕಾರ್ಯಕ್ರಮ ನಡೆಸಿಕೊಟ್ಟರು. ಭೂಮಿಕ ಸ್ವಾಗತಿಸಿದರು.

# ಜನರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವೆ

## ಚಳ್ಳಕೆರೆ ವೀರಶೈವ ಸಮಾಜದಿಂದ ಶಾಸಕರುಗಳ ಸನ್ಮಾನ ಸಮಾರಂಭದಲ್ಲಿ ಸಚಿವ ಡಿ.ಸುಧಾಕರ್



ಚಳ್ಳಕೆರೆ, ಜು.25- ಸಮಾಜದ ಎಲ್ಲ ವರ್ಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಲ್ಲದೇ ಬಡ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುವುದಾಗಿ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ಇಲ್ಲಿನ ವೀರಶೈವ ಸೇವಾ ಸಮಾಜ ಸಂಘದ ವತಿಯಿಂದ ಜಿಲ್ಲೆಯ ಶಾಸಕರುಗಳಿಗೆ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಸಚಿವ ಸುಧಾಕರ್ ಮಾತನಾಡುತ್ತಿದ್ದರು.

ವೀರಶೈವ ಸಮಾಜದಲ್ಲಿ ಇರುವ ನನ್ನ ಸ್ನೇಹಿತರು, ಮುಖಂಡರ ಆಶೀರ್ವಾದವೂ ನನಗೆ ಸಿಕ್ಕಿದೆ. ಹಾಗಾಗಿ ನಾನು ಹಿರಿಯೂರಿನಲ್ಲಿ ಗೆದ್ದು ಮತ್ತೆ ಸಚಿವನಾಗಿ ನಿಮ್ಮ ಮುಂದೆ ಮಾತನಾಡುವ ಸೌಭಾಗ್ಯ ದೊರಕಿದೆ ಎಂದರು.

ಸನ್ಮಾನ ಸ್ವೀಕರಿಸಿದ ಶಾಸಕ ಟಿ. ರಘುಮೂರ್ತಿ ಮಾತನಾಡಿ, ನನ್ನ ರಾಜಕೀಯ ಜೀವನದಲ್ಲಿ ವೀರಶೈವ ಸಮಾಜ ಸದಾ ನನ್ನೊಂದಿಗೆ ಇದ್ದು, ನನ್ನ ಏಳಿಗೆ ಬಯಸುತ್ತಾ ಬಂದಿದೆ. ಸಮಾಜದ ಯುವ ಮುಖಂಡರು ಸ್ವಾರ್ಥಕ್ಕಾಗಿ ಏನನ್ನೂ ಕೇಳಿಲ್ಲ, ಆದರೆ ವೀರಶೈವ ಸಮಾಜದ ಅಭಿವೃದ್ಧಿಗೆ, ಬೇಡಿಕೆಗಳಿಗೆ ಸದಾ ಸ್ಪಂದಿಸುವುದಾಗಿ ತಿಳಿಸಿದರು.

ಚಿತ್ರದುರ್ಗ ಶಾಸಕ ಕೆ.ಪಿ.ವೀರೇಂದ್ರ ಮಾತನಾಡಿ, ನಮ್ಮ ಸಮಾಜದ ಬಂಧುಗಳು ಸನ್ಮಾನ ಮಾಡುವ ವಿಚಾರ ತಿಳಿಸಿದಾಗ ನನಗೆ ಮುಜುಗರವಾಯಿತು. ಆದರೆ ನನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಕಂಡು ಬೆರಗಾಗಿದ್ದೇನೆ ಎಂದು ಹೇಳಿದರು. ವೀರಶೈವ ಸಮಾಜ ಎಲ್ಲ ಕ್ಷೇತ್ರಗಳಲ್ಲಿಯೂ ಹೆಚ್ಚಿನ ಸಾಧನೆ ಮಾಡಬೇಕಿದೆ, ಅದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವೆಂದರು.

ಭದ್ರಾವತಿ ತಾಲ್ಲೂಕು ಗೋಣಿಬೀಡು ಗ್ರಾಮದ ಹಿರಿಯ ರಂಗಕಲಾವಿದ ಆರಾಧ್ಯ ಜ್ಯೂನಿಯರ್ ಅಂಬರೀಶ್ ಪಾತ್ರದಲ್ಲಿ ಹಾಡಿಗೆ ನೃತ್ತಿಸಿದರು.

ವೇದಿಕೆ ಮೇಲೆ ತಾಲ್ಲೂಕು ವೀರಶೈವ ಸಮಾಜದ ಉಪಾಧ್ಯಕ್ಷ ಕೆ.ಎಂ.ಜಗದೀಶ್, ಪ್ರಧಾನ ಕಾರ್ಯದರ್ಶಿ ಹೆಚ್.ವಿ. ಪ್ರಸನ್ನಕುಮಾರ್, ಖಜಾಂಚಿ ವಾಸುದೇವ, ಕಾರ್ಯದರ್ಶಿ ಈಶ್ವರಪ್ಪ, ನಿರ್ದೇಶಕರಾದ ಕೆ. ಎಂ.ಕೊಟ್ರೇಶ್, ಮಾತೃಶ್ರೀ, ಎಸ್. ಮಂಜುನಾಥ್, ಶಿವಕುಮಾರ್, ಇಂದುಶೇಖರ್, ಎನ್. ಸತೀಶ್ ಬಾಬು, ಹೆಚ್. ಮಂಜುನಾಥ್, ನಾಗರಾಜ್, ಮಧುರ, ಪ್ರಾಧ್ಯಾಪಕ ಜಿ.ವಿ.ರಾಜಣ್ಣ, ವಿಜಯೇಂದ್ರ, ವಿ. ಮುರುಗೇಶ್ ಮತ್ತಿತರರು ಹಾಜರಿದ್ದರು.

# ಪೋಷಕರು ಮಕ್ಕಳ ಆರೋಗ್ಯದ ಕಡೆ ನಿಗಾ ವಹಿಸಬೇಕು



**ರಾಣೇಬೆನ್ನೂರು**

ರಾಣೇಬೆನ್ನೂರು, ಜು.25- ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು ಎಂದು ಡಾ. ಮಲ್ಲಿಕಾರ್ಜುನ ಎಚ್.ಬಿ. ಹೇಳಿದರು.

ತಾಲ್ಲೂಕಿನ ಅಸುಂಡಿ ಗ್ರಾಮದ ಡಾ. ಕಡಕೋಳ ಪೋದಾರ್ ಲರ್ನ್ ಸ್ಕೂಲ್‌ನಲ್ಲಿ ಏರ್ಪಡಿಸಲಾಗಿದ್ದ ದಂತ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳಲ್ಲಿ ಚಾಕೋಲೇಟ್, ಐಸ್‌ಕ್ರೀನಂತಹ ಪದಾರ್ಥಗಳ ಸೇವನೆ ಹೆಚ್ಚಾಗುತ್ತಿದ್ದು, ಇದು ಅವರ ದಂತ ಪಂಕ್ತಿಗಳ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತದೆ. ಈ ನಿಟ್ಟಿನಲ್ಲಿ ಮಕ್ಕಳ ಆರೋಗ್ಯಕ್ಕೆ ಪೂರಕವಾಗುವಂತಹ ಆಹಾರ ಪದಾರ್ಥಗಳನ್ನು ನೀಡಬೇಕು ಎಂದರು.

ದಂತ ವೈದ್ಯರುಗಳಾದ ಡಾ. ಬಿ.ಎಸ್. ಪಾಟೀಲ ಮತ್ತು ಡಾ. ಅಮರನಾಥ ಉಪಾಸಿ, ಡಾ. ಪ್ರಕಾಶ್ ಲೋಕಂಡೆ, ಡಾ.ಮಹಾಂತೇಶ್ ಶಿರಗಾಂವಿ, ಡಾ. ಪ್ರವೀಣ್ ಉದುಗನಿ. ಡಾ. ಪ್ರಮೋದ್ ಉದುಗನಿ, ಡಾ. ಪ್ರಸನ್ನಕುಮಾರ್ ಕಡಕೋಳ ಮಕ್ಕಳ ದಂತ ತಪಾಸಣೆಯನ್ನು ನಡೆಸಿ, ದಂತ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಲು ಮಕ್ಕಳಿಗೆ ಸಲಹೆಗಳನ್ನು ನೀಡಿದರು.

ಸ್ಕೂಲ್‌ನ ಕಾರ್ಯದರ್ಶಿ ಪ್ರಶಾಂತ ಕಡಕೋಳ್, ಕವಿತಾ ಕಡಕೋಳ್, ರಾಜೇಶ್ವರಿ ಹನಗೋಡಿಮಠ, ಪ್ರಿನ್ಸಿಪಾಲ್ ರೂಪೇಶ್ ಘಾಟಗೆ, ಆಧ್ಯಾ, ಮಮತಾ ಘಾಟಗೆ, ಅಶ್ವಿನಿ ಅಗಡಿ, ರುಕ್ಸಾನ, ಗೀತಾ, ಸುಮಾ, ಹರ್ಷಿತಾ, ನಿಖಾತ್, ರಘುನಂದನ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಎ.ಆರ್. ಉಜ್ಜನಪ್ಪ ಅವರಿಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಶ್ರದ್ಧಾಂಜಲಿ

ದಾವಣಗೆರೆ, ಜು.25- ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎ. ಆರ್. ಉಜ್ಜನಪ್ಪ ಅವರ ನಿಧನಕ್ಕೆ ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಶ್ರದ್ಧಾಂಜಲಿ ಸಲ್ಲಿಸಿದೆ. ಟ್ರಸ್ಟ್, 20 ವರ್ಷಗಳ ಹಿಂದೆ 'ಪರಿಸರ ಜಾಗೃತಿ ಸಮುದಾಯ' ಎಂಬ ಹೆಸರಿನಿಂದ ಪ್ರಾರಂಭವಾದಾಗಿನಿಂದಲೂ ಸಕ್ರಿಯರಾಗಿದ್ದ, ಉಜ್ಜನಪ್ಪನವರು ಖಜಾಂಚಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಜನಪರ, ಜನಾನುರಾಗಿ, ಜೀವಪರರೂ ಆಗಿದ್ದಂತಹ ಸಜ್ಜನ ವ್ಯಕ್ತಿಯಾಗಿದ್ದರು. ಅವರ ಅಗಲಿಕೆ ನೋವನ್ನುಂಟು ಮಾಡಿದೆ ಎಂದು ಟ್ರಸ್ಟ್ ಸದಸ್ಯರು ದುಃಖಿಸಿದ್ದಾರೆ.

# ಧಾರಾಕಾರ ಮಳೆಗೆ ಉಕ್ಕಿ ಹರಿಯುತ್ತಿರುವ ನದಿಗಳು

**(1ನೇ ಪುಟದಿಂದ)** ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹವಾಮಾನ ಇಲಾಖೆಯು 24 ಗಂಟೆಗಳ ಕೆಂಪು ಎಚ್ಚರಿಕೆ ಘೋಷಿಸಿತ್ತು. ಕೊಡಗು, ಶಿವಮೊಗ್ಗ ಹಾಗೂ ಬೆಳಗಾವಿಗಳಲ್ಲಿ ಕಿತ್ತಳೆ ಹಾಗೂ ಬಾಗಲಕೋಟೆ, ಬೀದರ್, ಕಲಬುರಗಿ, ವಿಜಯಪುರ, ಬಳ್ಳಾರಿ ಮತ್ತು ಹಾಸನಗಳಲ್ಲಿ ಹಳದಿ ಎಚ್ಚರಿಕೆ ಘೋಷಿಸಲಾಗಿತ್ತು.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಶಿವಮೊಗ್ಗ, ಚಿಕ್ಕಗಳೂರು, ಕೊಡಗು, ಗುಲ್ಬರ್ಗ ಹಾಗೂ ಬೀದರ್‌ಗಳಲ್ಲಿ ಬುಧವಾರವೂ ಕಿತ್ತಳೆ ಎಚ್ಚರಿಕೆ ನೀಡಲಾಗಿದೆ.

ನಾನು ಹಾಗೂ ಸಂಪುಟ ಸಚಿವರು ರಾಜ್ಯದ ವಿವಿಧ ಭಾಗಗಳಿಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಳೆಯಿಂದ ಆಗಿರುವ ಅನಾಹುತ ಹಾಗೂ ಬೆಳೆ ಪರಿಸ್ಥಿತಿ ಕುರಿತು ತಿಳಿಯಲು ಬುಧವಾರದಂದು ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಿಡಿಯೋ ಕಾನ್ಫರೆನ್ಸ್ ಸಭೆ ಕರೆದಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕೆ ಇವೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕಿವೆ. - ಬಿ.ಎಸ್. ಸಂತೋಷ್
96322 67555

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಡಿಟಿಪಿ ಆಪರೇಟರ್ ಹಾಗೂ ಆನ್ ಲೈನ್ ನಲ್ಲಿ ಅಪ್ಲಿಕೇಷನ್ ಹಾಕಲು ಬೇಕಾಗಿದ್ದಾರೆ. ಸಂಪರ್ಕಿಸಿ: ಚಂದನಾ ಜೆರಾಕ್ಸ್ ಸೆಂಟರ್, 4ನೇ ಮೇನ್, ಎಸ್ ಬಿ ಐ ಎಟಿಎಂ ಎದುರು, ರಾಂ & ಕೋ ಸರ್ಕಲ್, ಪಿ.ಜೆ.ಬಡಾವಣೆ, ದಾವಣಗೆರೆ.
98443 54514, 86608 86694

**ಮನೆ ಬಾಡಿಗೆಗೆ ಇದೆ**
3BHK ಕಾರ್ ಪಾರ್ಕಿಂಗ್ ಬೋರ್ ಮುನ್ಸಿಪಲ್ ನೀರಿನ ಸೌಲಭ್ಯವಿದೆ. ವಿವೇಕಾನಂದ ಬಡಾವಣೆ, 2ನೇ ಮುಖ್ಯರಸ್ತೆ, ಪುಷ್ಪಾ ಮಹಾಲಿಂಗಪ್ಪ ಕಾಲೇಜು ಬಳಿ ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ.
88806 99986, 98455 30663

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ ಡಾಲರ್ಸ್‌ಕಾಲೋನಿ ಶಿವ-ಪಾರ್ವತಿ, ಸಿದ್ದವೀರಪ್ಪ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ :
97315 12365

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
94480 84144

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ವಂತ ಬೈಕ್ ಉಳ್ಳವರಾಗಿರಬೇಕು. ಕೂಡಲೇ ಸಂಪರ್ಕಿಸಿ :
98800 42597, 89711 19130
ವಾಟ್ಸಾಪ್ ನಂ. 70199 83025

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ದಕ್ಷಿಣ 30x60 ಡುಪ್ಲೆಕ್ಸ್, ಜೆ.ಹೆಚ್. ಪಟೇಲ್ ಬಡಾವಣೆ, ಉತ್ತರ 30x50, (ಕೆಳಗೆ 2BHK ಮೇಲೆ ಸಿಂಗಲ್ ಅಟ್ಯಾಚ್) ಆಂಜನೇಯ ಬಡಾವಣೆ ನೂತನ ಕಾಲೇಜು ಹತ್ತಿರ, ಉತ್ತರ 40x76 (4BHK) (ಮೇಲೆ 2BHK ಎರಡು ಸಿಂಗಲ್ BHK-2)
ಐಗೂರು ವಿಜಯಕುಮಾರ :
99457 02495

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 40x70 (ಅಕ್ಕ-ಪಕ್ಕ) ಉತ್ತರ-ಪಶ್ಚಿಮ ಕಾರ್ನರ್ 40x70, 40x55, 30x65, 30x43, 30x35, ಪೂರ್ವ 40x60 (ಅಕ್ಕ-ಪಕ್ಕ) 30x43, ಪಶ್ಚಿಮ 30x55, ಸರ್ಕಾರಿ ನೌಕರರ ಬಡಾವಣೆ ಪಕ್ಕ ಪೂರ್ವ 30x50, ಪಶ್ಚಿಮ 30x40.
ಐಗೂರು ವಿಜಯಕುಮಾರ :
99457 02495

**EC / ಇಸಿ,**
E-swathu, Khatha Change Building Licence & Other Property Documents
96118-66449

**ಅದ್ಭುತವಾದ ಹೊಸ ಮನೆ ಮಾರಾಟಕ್ಕಿದೆ**
30x40 ಉತ್ತರ ದಿಕ್ಕಿನಲ್ಲಿ ವಾಸ್ತು ಪ್ರಕಾರ ಕಟ್ಟಿರುವ 2 BHK ಮನೆ ಮಾರಾಟಕ್ಕಿದೆ. ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದ, ದಾವಣಗೆರೆ.
95384 86666, 63605 94165

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ.
96068 47121

**ಬಾಡಿಗೆಗೆ ಇದೆ**
ನೆಲ ಮಹಡಿ 3500 ಚ.ಅ.
1ನೇ ಮಹಡಿ 3500 ಚ.ಅ.
2ನೇ ಮಹಡಿ 3500 ಚ.ಅ.
ಎನ್.ಆರ್. ರೋಡ್, ಜಗಳೂರು ಬಸ್ ಸ್ಟಾಂಡ್ ಹಿಂಭಾಗ
94483 39413, 98445 66415

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
88616 89590

**ಸುವರ್ಣ ಅವಕಾಶ**
ಮೊಬೈಲ್ ಹೊಂದಿರುವ ಪ್ರತಿಯೊಬ್ಬರೂ ದಿನಾಲು ಹೆಚ್ಚು ಆದಾಯ ಗಳಿಸುವ ಉತ್ತಮ ಸದಾವಕಾಶ.
ಆಸಕ್ತಿ ಇರುವವರು ಇಂದೇ ಸಂಪರ್ಕಿಸಿ :
9972479075
8095570649

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಸೈಟ್ ಮಾರಾಟಕ್ಕೆ**
ಜೆ.ಹೆಚ್. ಪಟೇಲ್ ಬಡಾವಣೆ, 30x40 ಉತ್ತರ, 20x30 ಪೂರ್ವ, 40x60 ಪೂರ್ವ (ನೇರವಾದ ವ್ಯಾಪಾರ ಸ್ವಚ್ಛ ದಾಖಲೆ ಸರಿಯಾದ ಅಳತೆಯಾ ಗುರಿ ನಮ್ಮದು )
ಕಿರಣ್ ಭೂಸನೂರ್(ಏಜೆಂಟ್)
98440 63409, 97315 63409

**ಬೇಕಾಗಿದ್ದಾರೆ**
ಡಿ.ಎಸ್.ಎಂ. ಅಸೋಸಿಯೇಟ್ಸ್ ಅಕೌಂಟೆಂಟ್ ಆಗಿ ಕೆಲಸ ಮಾಡಲು ಬಿ.ಕಾಂ. ಆದಂತಹ ಇಬ್ಬರು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
74114 89711

**Lining Blouse**
Stiching Only 200/-
Nijalingappa Layout, Davanagere - 04.
Contact :
98446 78785

**WANTED LECTURER**
Jai sri gurudev Gnana vikas polytechnic
Sri Adichunchanagiri shikshana Trust (R)
Challakere Road, Chitradurga.
Electronics & Communications - 2
Electrical & Electronics - 2 Post
Quali: BE.B.Tech.
Contact : SURESH.G., Principal
GVP, 9242 408377

**ಸೈಟ್ ಮಾರಾಟಕ್ಕೆ (37 ಲಕ್ಷಕ್ಕೆ)**
30x40 ಉತ್ತರ
ಕರ್ನಾಟಕ ಗೃಹ ಮಂಡಳಿಯಲ್ಲಿ
(ಮನೆ ಕಟ್ಟಲು ಸೂಪರ್ ಇದೆ)
20x30 ಉತ್ತರ (12.5 ಲಕ್ಷಕ್ಕೆ)
ಕಿರಣ್ ಭೂಸನೂರ್ (ಏಜೆಂಟ್)
97315 63409

**ಹೆಸರು ಸ್ಪಷ್ಟೀಕರಣ**
ನಾನು ಮಹೇಶ್ವರಪ್ಪ PL ತಂದೆ ಲಕ್ಷ್ಮಪ್ಪ P ಮುಕ್ತೇನಹಳ್ಳಿ ಹೊನ್ನಾಳಿ ತಾ|| ದಾವಣಗೆರೆ ಜಿ|| ವಾಸಿಯಾದ ನಾನು ನನ್ನ ಹಳೇ ಆಧಾರ್ ಕಾರ್ಡ್‌ನಲ್ಲಿ ಮಹಂತೇಶ PL ಎಂದಿದ್ದು, ಹೊಸ ಆಧಾರ್ ಕಾರ್ಡ್‌ನಲ್ಲಿ ಮಹೇಶ್ವರಪ್ಪ PL ಎಂದಿದ್ದು, ದಾವಣಗೆರೆ ಶುಗರ್ ಕಂ.ಲಿ. ಕುಕ್ಕುವಾಡದಲ್ಲಿ ನನ್ನ ಷೇರ್ ಸರ್ಟಿಫಿಕೇಟ್‌ನಲ್ಲಿ PL ಮಹಂತೇಶ ಎಂದಾಗಿದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಹೆಸರುಗಳು ನನ್ನದೆ ಆಗಿದ್ದು ಇನ್ನು ಮುಂದೆ ಮಹೇಶ್ವರಪ್ಪ PL ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿನಾಂಕ 25.07.2023 ರಂದು ನೋಟರಿ ದಾವಣಗೆರೆಯವರ ಸಮಕ್ಷಮ ಪ್ರಮಾಣಿಕರಿಸುತ್ತೇನೆ. ಸಹಿ /- ಮಹೇಶ್ವರಪ್ಪ

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
We are Hiring telecallers
Good Communication Skill. Required : (Only for Girls, Womens) Salary : 6000, 7000 (Under Graduates) Salary : 8000, 9000, 10,000 (Post Graduates)
95350 51589, 78670 75786
Office Locatoon : Hasbahavi Circle, K.R. Market, Davangere.

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**2 BHK HOUSE FOR LEASE / RENT**
Near Podar International School in J.H. Patel Badavane, Davanagere.
95358 41058
88617 11072

**ಗ್ಯಾಸ್ ಗೀಜರ್**
Fully Automatic 2990/- Rs.
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗು ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಸ್ಟ್ಯಾಂಡರ್ಡ್ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇದೆ. ಸಂಬಳ : 30,000 ರೂ.
ಫೋ. : 78291 91921

**ಬೇಕಾಗಿದ್ದಾರೆ**
ಷೋರೂಂನಲ್ಲಿ ಸೇಲ್ಸ್ ಪ್ರಮೋಟರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಕನಿಷ್ಠ ವಿದ್ಯಾಭ್ಯಾಸ ಯಾವುದಾದರೂ ಪದವಿ ಮುಗಿಸಿರಬೇಕು. ಸಂಪರ್ಕಿಸಿ. ಐಸಿಟಿ ಸೆಲ್ LLP ರಾಂ & ಕೋ ಸರ್ಕಲ್ ಕಾವೇರಿ ಬೇಕರಿ ಎದುರು, ದಾವಣಗೆರೆ-2.
ಫೋ : 86601 01034

**SPOKEN ENGLISH**
The Only Place to Learn Spoken English @ VETA EXPERTS IN SPOKEN ENGLISH
98450 40493
9902860360

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ ವ್ಯವಹಾರ, ವೈವಾಹಿಕ ಶತ್ರು ಬಾಧೆ ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮ ಬಾಣ.
80733 42011

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**ಸುಕ್ಷೇತ್ರ ಗಾಣಗಟ್ಟೆ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಇವರು ನುಡಿದಂತೆ ನಡೆಯುವರು
ಪಂಡಿತ್ ಭರತ್ ಭಟ್- 81232 83279
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಲೈಂಗಿಕ ಸಮಸ್ಯೆ, ಮಾಟ, ಮಂತ್ರ, ಸಂತಾನ, ವಶೀಕರಣ, ಆರೋಗ್ಯ ಇನ್ನೂ ನಿಮ್ಮ ಯಾವುದೇ ಸಮಸ್ಯೆಗೆ 3 ದಿನಗಳಲ್ಲಿ ಪರಿಹಾರ. ಪರಿಹಾರ ಸಿಗದಿದ್ದಲ್ಲಿ ಹಣ ವಾಪಾಸ್ ನೀಡಲಾಗುವುದು.
ವಿಳಾಸ : ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.



## ಬಸವಣ್ಣನ ವಚನಗಳ ಭಾವಾರ್ಥ

ದಾವಣಗೆರೆ, ಜು. 25 -ನಗರದ ಬಸವ ಬಳಗದ ವತಿಯಿಂದ ಹುಚ್ಚಪ್ಪ ಗುರುಗಳ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಬಸವಣ್ಣನವರ ವಚನಗಳ ಭಾವಾರ್ಥ ತಿಳಿಸಲಾಯಿತು.

# ಮದ್ರಾಸ್ ಐ ವೈರಾಣುವಿಗೆ ಭಯ ಪಡಬೇಕಾಗಿಲ್ಲ: ಡಾ.ನಾಗರಾಜ್

ದಾವಣಗೆರೆ, ಜು. 25 - ಸಾಮಾನ್ಯವಾಗಿ ಚಳಿಗಾಲದಲ್ಲಿ ಕಾಣಿಸಿಕೊಳ್ಳುತ್ತಿದ್ದ ಮದ್ರಾಸ್ ಐ ವೈರಾಣು ಅತೀ ವೇಗವಾಗಿ ಹರಡುತ್ತಿದ್ದು ಇದಕ್ಕೆ ಭಯ ಪಡಬೇಕಾಗಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ ತಿಳಿಸಿದ್ದಾರೆ.

ಮದ್ರಾಸ್ ಐ ಈ ಬಾರಿ ಮಳೆಗಾಲದಲ್ಲಿ ಆರಂಭ ವಾಗಿದ್ದು ರಾಜ್ಯದ ಜನರ ಕಣ್ಣು ಕೆಂಪಾಗಿಸುತ್ತಿದೆ, ಮುಖ್ಯ ವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳಲ್ಲಿ ಮದ್ರಾಸ್ ಐ ವೇಗಾಗಿ ಹರಡುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಕಂಜಕ್ಟಿಟಿಸ್ ಎಂದು ಕರೆಯ ಲಾಗುವ ಮದ್ರಾಸ್ ಐ ಅಥವಾ ಕಣ್ಣು ವೈರಾಣುಗಳಿಂದ ಹರಡುವ ಕಣ್ಣಿನ ಸಮಸ್ಯೆ ತೇವಾಂಶ ಹೆಚ್ಚಾದಾಗ ಅಥವಾ ಚಳಿಗಾಲದ ವಾತಾವರಣದಲ್ಲಿ ಹುಟ್ಟಿಕೊಳ್ಳುವ ಈ ವೈರಾ ಣುಗಳು ನೇರವಾಗಿ ಕಣ್ಣಿನ ಮೇಲೆ ಪರಿಣಾಮ ಉಂಟು ಮಾಡುತ್ತವೆ. ರಾಜ್ಯದಲ್ಲಿ ಮಳೆಯಾಗುತ್ತಿದ್ದ ಪರಿಣಾಮ ಬಿಸಿಲು ಇಲ್ಲದಂತಾಗಿದೆ. ಇದರ ಪರಿಣಾಮ ತೇವಾಂಶ ಹೆಚ್ಚಾಗಿ ಅವಧಿಗೂ ಮೊದಲೇ ಈ ವೈರಾಣು ದಾಂಗುಡಿ ಇರಿಸಿದೆ.

**ರೋಗದ ಲಕ್ಷಣಗಳು:** ಕಸ ಬಿದ್ದಿದಂತೆ ಆಗುವ ರೀತಿಯಾಗಿ ಕಣ್ಣು ಚುಚ್ಚುವುದು, ಬೆಳಗ್ಗೆ ಎದ್ದಾಗ ಹೆಚ್ಚು ಪಿಸುರು (ಪಿಚ್ಚು) ಬರುತ್ತದೆ, ಕಣ್ಣುಗಳು ಕೆಂಪಾಗಿ, ಕಿರಿಕಿರಿ ಹೆಚ್ಚುವುದು, ಕಣ್ಣಲ್ಲಿ ನೀರು ಬರುವುದು, ರೆಪ್ಪೆ ಕಣ್ಣು ದಪ್ಪ ಆಗುವುದು ಕಂಡು ಬರುತ್ತದೆ.

**ಮುಂಜಾಗ್ರತಾ ಕ್ರಮಗಳು:** ಸಮಸ್ಯೆ ಇರುವವರು ಕೆಲದಿನ ಪ್ರತ್ಯೇಕ ವಾಸ ಮಾಡಿ, ಲಕ್ಷಣಗಳು ಕಾಣಿಸಿಕೊಳ್ಳದಿದ್ದರೆ, ಕಣ್ಣಿಗೆ ಔಷಧ ಹಾಕಿಸಿಕೊಳ್ಳಬೇಡಿ, ದಿನಕ್ಕೆ 8-10 ಬಾರಿ ಸ್ಯಾನಿಟೈಸರ್, ಸೋಪು ಬಳಸಿ ಕೈ ತೊಳೆದುಕೊಳ್ಳಿ, ವೈರಸ್ ಕಾಣಿಸಿಕೊಂಡಾಗ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಸಲಹೆ ಪಡೆಯಬೇಕು. ವೈದ್ಯರ ತಪಾಸಣೆ ಮಾಡಿಸದೇ, ಔಷಧಿ ಅಂಗಡಿಗಳಲ್ಲಿ ಸಿಗುವ ಡ್ರಾಪ್ಸ್‌ಗಳನ್ನು ಬಳಸಬಾರದು, ಕಣ್ಣು ಮುಟ್ಟಿಕೊಳ್ಳುವುದನ್ನು ಕಡಿಮೆ ಮಾಡಬೇಕು.

**ಪರಿಹಾರ:** ಸಮಸ್ಯೆ ಉಳ್ಳವರು ಇತರರಿಂದ ದೂರಇರಬೇಕು. ವೈದ್ಯರ ಬಳಿ ತೋರಿಸಿ, ಐ ಡ್ರಾಪ್ಸ್ ಮಾತ್ರ ಹಾಕಬೇಕು, ಸಮಸ್ಯೆ ಕಡಿಮೆ ಆಗುವವರೆಗೆ ಗಾಳಿಗೆ ಹೋಗಬಾರದು, ದ್ವಿಚಕ್ರ ವಾಹನ ಓಡಿಸಬಾರದು, ಟಿ.ವಿ, ಮೊಬೈಲ್, ಕಂಪ್ಯೂಟರ್‌ಗಳನ್ನು ನೋಡುವುದನ್ನ ಕಡಿಮೆ ಮಾಡಿ ಕಣ್ಣಿಗೆ ವಿಶ್ರಾಂತಿಕೊಡಬೇಕು.

ರೋಗದ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣವೇ ಸಮೀಪದ ನಗರ, ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ವೈದ್ಯರ ಹತ್ತಿರ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯುವುದು ಸೂಕ್ತ. ವೈರಾಣುವಿನ ಸಮಸ್ಯೆ ಆಗಿರುವ ಕಾರಣ ನಿರ್ದಿಷ್ಟ ಚಿಕಿತ್ಸೆ ಇಲ್ಲ ಮುನ್ನೆಚ್ಚರಿಕೆಯೇ ಮದ್ದಾಗಿದೆ.

# ಜಿಲ್ಲೆಯಲ್ಲಿ 11.4 ಮಿ.ಮೀ ಸರಾಸರಿ ಮಳೆ

### 11.38 ಲಕ್ಷ ನಷ್ಟು ಹಾನಿ

ದಾವಣಗೆರೆ, ಜು. 25 - ಜಿಲ್ಲೆಯಲ್ಲಿ ಜುಲೈ 23 ರಂದು ಬಿದ್ದ ಮಳೆಯ ವಿವರದನ್ವಯ 11.4 ಮಿ. ಮೀ. ಸರಾಸರಿ ಮಳೆಯಾಗಿದ್ದು, 11.38 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿಯಲ್ಲಿ ವಾಡಿಕೆ ಮಳೆ 7.1 ಮಿ.ಮೀ ಹಾಗೂ ವಾಸ್ತವ ಮಳೆ 14.8 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ 1.5 ಮಿ.ಮೀ ಹಾಗೂ ವಾಸ್ತವ ಮಳೆ 6.0 ಮಿ.ಮೀ, ಹರಿಹರದಲ್ಲಿ ವಾಡಿಕೆ ಮಳೆ 1.9 ಮಿ.ಮೀ ಹಾಗೂ ವಾಸ್ತವ ಮಳೆ 4.4 ಮಿ.ಮೀ, ಹೊನ್ನಾಳಿ ವಾಡಿಕೆ ಮಳೆ 3.8 ಮಿ.ಮೀ ಹಾಗೂ ವಾಸ್ತವ ಮಳೆ 10.8 ಮಿ.ಮೀ, ಜಗಳೂರು ವಾಡಿಕೆ ಮಳೆ 2.3 ಮಿ. ಮೀ ಹಾಗೂ ವಾಸ್ತವ ಮಳೆ 12.7 ಮಿ.ಮೀ, ನ್ಯಾಮತಿಯಲ್ಲಿ ವಾಡಿಕೆ ಮಳೆ 5.7 ಮಿ.ಮೀ ಹಾಗೂ ವಾಸ್ತವ ಮಳೆ 20.4 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 9 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 2.70 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾ.ವ್ಯಾಪ್ತಿಯಲ್ಲಿ 1 ಮನೆ ಪೂರ್ಣ ಹಾನಿಯಾಗಿದ್ದು ರೂ. 0.2 ಸಾವಿರ ಅಂದಾಜು ನಷ್ಟ ಹಾಗೂ 1 ಮನೆ ಭಾಗಶಃ ಹಾನಿಯಾಗಿದ್ದು ರೂ.0.30 ಸಾವಿರ ಅಂದಾಜು ನಷ್ಟ ಸಂಭವಿಸಿದೆ ಹಾಗೂ 1 ಜೀವಹಾನಿಯಾಗಿದ್ದು, ವಾರಸುದಾರರಿಗೆ 5 ಲಕ್ಷ ಪರಿಹಾರ ನೀಡಲಾಗಿದೆ.

ಜಗಳೂರು ತಾ.ವ್ಯಾಪ್ತಿಯಲ್ಲಿ 2 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 0.13 ಸಾವಿರ ಅಂದಾಜು ನಷ್ಟ ಸಂಭವಿಸಿದೆ.

ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ಭಾಗಶಃ ಹಾನಿಯಾಗಿದ್ದು ರೂ. 0.25 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ.

ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ಭಾಗಶಃ ಹಾನಿಯಾಗಿದ್ದು, ರೂ. 0.40 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ಭಾಗಶಃ ಹಾನಿಯಾಗಿದ್ದು, ರೂ. 0.40 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ. ಜಿಲ್ಲೆಯಲ್ಲಿ ಒಟ್ಟಾರೆ 11.38ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

# ನಗರದ ಮಹಿಳಾ ನಿಲಯದಲ್ಲಿ ಇಂದು ವಿವಾಹ ಮಹೋತ್ಸವ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ರಾಜ್ಯ ಮಹಿಳಾ ನಿಲಯದಲ್ಲಿ ವಿವಾಹ ಮಹೋತ್ಸವವನ್ನು ಏರ್ಪಡಿಸಲಾಗಿದೆ.

ರಾಜ್ಯ ಮಹಿಳಾ ನಿಲಯ, ದಾವಣಗೆರೆ ನಿವಾಸಿಗಳಾದ ರಮ್ಯ ಜೊತೆ ನಾಗರಾಜ ಪರಮೇಶ್ವರ ಹೆಗಡೆ ಹಾಗೂ ವಿನೋದ ಜೊತೆ ಮಲ್ಲಿಕಾರ್ಜುನ ಯು.ಎಂ ಇವರ ವಿವಾಹವನ್ನು ನಿಶ್ಚಯಿಸಲಾಗಿದೆ.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ, ಜಿಲ್ಲಾ ಪಂಚಾಯತ್. ಸಿ.ಇ.ಓ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ, ರಾಜ್ಯ ಮಹಿಳಾ ನಿಲಯ, ದಾವಣಗೆರೆ ಅಧೀಕ್ಷಕರಾದ ಶ್ರೀಮತಿ ಶಕುಂತಲಾ ಬಿ ಕೋಳೂರ ಭಾಗವಹಿಸುವರು.

# ಎ.ಆರ್.ಉಜ್ಜನಪ್ಪ ಸ್ನೇಹಿಜೀವಿ : ಡಾ.ನಾಗಪ್ರಕಾಶ್



ದಾವಣಗೆರೆ, ಜು.25- ಲಯನ್ಸ್ ಕ್ಲಬ್‌ನ ಮಾಜಿ ಜಿಲ್ಲಾ ಗೌರ್ನರ್ ಎ.ಆರ್. ಉಜ್ಜನಪ್ಪ ಅವರ ನಿಧನಕ್ಕೆ ನಗರದ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಭವನದಲ್ಲಿ ಸಂತಾಪ ಸೂಚಿಸಲಾಯಿತು.

ಲಯನ್ಸ್ ಮಾಜಿ ಜಿಲ್ಲಾ ರಾಜ್ಯಪಾಲ ಬಿ. ಎಸ್.ನಾಗಪ್ರಕಾಶ್ ಮಾತನಾಡಿ, ಉಜ್ಜನಪ್ಪ ಸ್ನೇಹ ಜೀವಿ, ನಾವುಗಳೆಲ್ಲರೂ ಬೇರೆ ಬೇರೆ ಕ್ಲಬ್‌ಗಳಲ್ಲಿ ಸದಸ್ಯರಾಗಿದ್ದರೂ ಸಹ ಒಂದೇ ಸಂಸ್ಥೆಯ ಸದಸ್ಯರೆಂಬ ಭಾವನೆ ಇತ್ತು. ಹೀಗೆ ನಮ್ಮ ಅವರ ಸ್ನೇಹವಿದ್ದರೂ ಕೂಡ ಚುನಾವಣೆ ಸಂದರ್ಭದಲ್ಲಿ ಮಾತ್ರ ಪರ-ವಿರೋಧ ಇರುತ್ತಿತ್ತು. ನಂತರ ಅವರೇ ನಮ್ಮನ್ನು ಹುಡುಕಿಕೊಂಡು ಬಂದು ಸ್ನೇಹದಿಂದ ಮಾತನಾಡಿಸುತ್ತಿದ್ದರು ಎಂದು ಸ್ಮರಿಸಿದರು.

ಲಯನ್ಸ್ ಕ್ಲಬ್ ಅಲ್ಲದೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಹಾಗೂ ಹಾಲಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾಗಿ ಹತ್ತು ಹಲವಾರು ಸಂಘ, ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು ಎಂದು ತಿಳಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ನೀಲಿ ಉಮೇಶ್ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಭೀಮಾನಂದ ಶೆಟ್ಟಿ, ಖಜಾಂಚಿ ಮಹಾಲಿಂಗೇಶ್, ಲಯನ್ಸ್ ಪ್ರಾಂತೀಯ ಅಧ್ಯಕ್ಷ ಎಸ್.ಓಂಕಾರಪ್ಪ, ಉಪಾಧ್ಯಕ್ಷ ಎಸ್.ಜಿ. ಉಳುವಯ್ಯ, ಶ್ರೀ ಕನ್ನಿಕಾ ಪರಮೇಶ್ವರಿ ಕೋ-ಆಪ್. ಬ್ಯಾಂಕಿನ ಅಧ್ಯಕ್ಷ ಆರ್.ಜಿ.ಶ್ರೀನಿವಾಸ ಮೂರ್ತಿ, ಲಯನ್ಸ್ ಹಿರಿಯ ಸದಸ್ಯರುಗಳಾದ ಎ.ಎನ್.ಮದನ್‌ಕುಮಾರ್, ಎಸ್.ಕೆ. ಶಿವಕುಮಾರ್, ಟಿ.ಎಂ.ಪಂಚಾಕ್ಷರಯ್ಯ, ದಿನೇಶ್ ಕೆ.ಶೆಟ್ಟಿ, ಹೆಚ್.ವಿ.ಮಂಜುನಾಥ ಸ್ವಾಮಿ, ರವಿಶಂಕರ್ ವಾಲಿ, ಬೆಳ್ಳೂಡಿ ಶಿವಕುಮಾರ್, ಇ. ಅಜಯ್ ನಾರಾಯಣ, ಆರ್. ಸಂತೋಷ್, ಎನ್. ವಿ. ಬಂಡಿವಾಡ, ಬಾದಾಮಿ ಜಯಣ್ಣ ಹಾಗೂ ಇತರರು ಮಾತನಾಡಿದರು.

## ಕುರಿ, ಮೇಕೆ ಸಾಕಾಣಿಕೆ ತರಬೇತಿ ಶಿಬಿರ

ದಾವಣಗೆರೆ, ಜು. 25 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಜುಲೈ 27 ಮತ್ತು 28 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಆಯೋಜಿಸಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ

ದಾವಣಗೆರೆ, ಜು. 25- ದಾವಣಗೆರೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಉಳುಪಿನಕಟ್ಟೆ, ಆನಗೋಡು ಹಾಗೂ ಶಾಲಾ ಶಿಕ್ಷಣ ಇಲಾಖೆ ದಾವಣಗೆರೆ ಜಿಲ್ಲೆ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆ ಅಂಗವಾಗಿ ಜಿಲ್ಲೆಯ ಸರ್ಕಾರಿ/ ಅನುದಾನಿತ/ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಕೃತಿ ರಕ್ಷಿಸಿ, ಜೀವಿ ಸಂಕುಲ ಉಳಿಸಿ ವಿಷಯದ ಚಿತ್ರಕಲಾ ಸ್ಪರ್ಧೆಯು ಇದೇ ದಿನಾಂಕ 28 ರಂದು ಬೆಳಿಗ್ಗೆ 10 ಗಂಟೆಗೆ ವಿನೋಬನಗರದ ಶ್ರೀ ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ನಡೆಯಲಿದೆ.

ವಿವರಗಳಿಗೆ ಕ್ಯುರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ (97423 13992) ಇವರಿಗೆ ಸಂಪರ್ಕಿಸಬಹುದಾಗಿದೆ.

### ಓದುಗರ ಪತ್ರ

## ಗೃಹಲಕ್ಷ್ಮಿ : ಮನೆಯಲ್ಲಿಯೇ ಅರ್ಜಿ ಸಲ್ಲಿಸುವ ಅವಕಾಶವಿರಲಿ



ಮಾನ್ಯರೇ,

ಕಾಂಗ್ರೆಸ್ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ ಕಳೆದ ವಾರ ಚಾಲನೆ ನೀಡಿದ ದಿನದಿಂದ ಇಲ್ಲಿಯವರೆಗೂ, ಸೇವಾ ಕೇಂದ್ರಗಳ ಮುಂದೆ ಮಳೆ, ಚಳಿ, ಗಾಳಿ ಎನ್ನದೆ ಮಹಿಳೆಯರು, ಮಕ್ಕಳು, ವಯೋವೃದ್ಧರು ಕೆಲಸಕ್ಕೆ ರಜೆ ಹಾಕಿ, ಬೆಳಿಗ್ಗೆ ನಾಲ್ಕು ಗಂಟೆಯಿಂದಲೇ ಮಳೆಯಲ್ಲಿಯೇ ಕೊಡೆ ಹಿಡಿದು ಸರತಿ ಸಾಲಿಗೆ ನಿಲ್ಲುತ್ತಿದ್ದಾರೆ.

ಇನ್ನೊಂದೆಡೆ, ನಿರ್ದಿಷ್ಟ ಸೇವಾ ಕೇಂದ್ರಗಳಲ್ಲಿಯೇ ನೋಂದಣಿ ಮಾಡಿಸಬೇಕಾಗಿರುವುದರಿಂದ ಪ್ರತಿನಿತ್ಯವೂ ಜನವೋ ಜನ. ಇನ್ನೊಂದೆಡೆ ಆಗಾಗ ಕೈ ಕೊಡುವ ಸರ್ವರ್ ಸಮಸ್ಯೆ. ಪ್ರತಿ ನಿತ್ಯ ಜನ ಸಂದಣಿ ಹೆಚ್ಚಿರುವುದರಿಂದ ಸೇವಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವವರಿಗೂ ದಿನೇ ದಿನೇ ಒತ್ತಡ ಹೆಚ್ಚಾಗುತ್ತಿದೆ.

ರಾಜ್ಯ ಸರ್ಕಾರ ಗೃಹ ಜ್ಯೋತಿ ಯೋಜನೆಯ ರೀತಿ ಮನೆಯಲ್ಲಿಯೇ ಕುಳಿತು ನೋಂದಣಿ ಮಾಡಲು ಅವಕಾಶ ನೀಡಬೇಕು. ಇಲ್ಲವೇ ಸೇವಾ ಕೇಂದ್ರಗಳಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಕೌಂಟರ್‌ಗಳನ್ನು ತೆರೆಯುವ ಮೂಲಕ ಜನ ಜಂಗುಳಿ ತಪ್ಪಿಸಬೇಕಾಗಿದೆ.

**- ಮುರುಗೇಶ ಡಿ.,** ಹವ್ಯಾಸಿ ಬರಹಗಾರರು, ದಾವಣಗೆರೆ.

# ಮಣಿಪುರ ಗಲಭೆ ನಿಯಂತ್ರಣಕ್ಕೆ ಒತ್ತಾಯಿಸಿ ನಗರದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರತಿಭಟನೆ




ದಾವಣಗೆರೆ, ಜು. 25- ಮಣಿಪುರದ ಜನಾಂಗೀಯ ಘರ್ಷಣೆ, ಮಹಿಳೆಯರ ಮೇಲಿನ ಅತ್ಯಾಚಾರ, ಬೆತ್ತಲೆ ಮೆರವಣಿಗೆ ಘಟನೆಗೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಷ್ಟ್ರಪತಿಗಳನ್ನು ಒತ್ತಾಯಿಸಿ ಭಾರತ್ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ಸಿಪಿಐ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿದರು.

ಮಣಿಪುರ ರಾಜ್ಯದಲ್ಲಿ ಕಳೆದ ಎರಡು ತಿಂಗಳಿನಿಂದ ಜನಾಂಗೀಯ ಗಲಭೆ ನಡೆಯುತ್ತಿದ್ದು, 150 ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. 40 ಸಾವಿರಕ್ಕೂ ಅಧಿಕ ಜನ ನಿರಾಶ್ರಿತರಾಗಿದ್ದಾರೆ. ಇದಲ್ಲದೇ ಮಹಿಳೆಯರ ಮೇಲೆ ದೌರ್ಜನ್ಯ ಸಹ ನಡೆಯುತ್ತಿದೆ. ಹಿಂಸಾಚಾರ ನಿಯಂತ್ರಣ ಮಾಡುವಲ್ಲಿ ಮಣಿಪುರ ಮುಖ್ಯಮಂತ್ರಿ, ದೇಶದ ಪ್ರಧಾನಿ ವಿಫಲರಾಗಿದ್ದಾರೆಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಘಟನೆ ಖಂಡಿಸಿ ಸರ್ವೋಚ್ಛ ನ್ಯಾಯಾಲಯ ಕೂಡ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಆದರೂ ಪ್ರಧಾನಿ ಹೇಳಿಕೆ ಕಣ್ಣೊರೆಸುವ ತಂತ್ರವಾಗಿದೆ. ಇದಲ್ಲದೇ ಮಣಿಪುರ ರಾಜ್ಯದಲ್ಲಿ ಶಾಂತಿ-ಸೌಹಾರ್ದತೆ ನೆಲೆಸಲು ಹೋರಾಟಕ್ಕೆ ಮುಂದಾದ ಎನ್‌ಎಫ್‌ಐಡಬ್ಲ್ಯೂ ಸಂಘಟನೆಯ ಮಹಿಳಾ ಮುಖಂಡರ ಮೇಲೆ ಪೊಲೀಸರು ದಾಖಲು ಮಾಡಿರುವ ಎಫ್‌ಐಆರ್ ರದ್ದು ಮಾಡುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಆವರಗೆರೆ ಚಂದ್ರು, ಮುಖಂಡರಾದ ಆವರಗೆರೆ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಆನಂದರಾಜ್, ಐರಣಿ ಚಂದ್ರು, ನರೇಗಾ ರಂಗನಾಥ್, ಗದಿಗೇಶ್ ಪಾಳೇದ, ಚಮನ್ ಸಾಬ್, ಜಯಣ್ಣ, ಕೃಷ್ಣಮೂರ್ತಿ, ಹೆಚ್.ಸಿ. ಉಮಾಪತಿ, ಲಕ್ಕ್ಮಣ್, ಹಾಲೇಶ್, ಕೇಶವ, ಬಸವರಾಜ್, ನೇತ್ರವತಿ, ಸರೋಜ, ಸುರೇಶ್, ಗುಂಡಯ್ಯ ಮತ್ತಿತರರು ಪಾಲ್ಗೊಂಡಿದ್ದರು.

# ಮಧ್ಯವರ್ತಿಗಳಿಂದ ಸಚಿವರಿಗೆ ಹಣ

## ಶಾಸಕರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ದೂರು

ಬೆಂಗಳೂರು, ಜು.25 - ಸಚಿವರು ಮಧ್ಯವರ್ತಿಗಳ ಮೂಲಕ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದಾರೆಂದು ಆಡಳಿತ ಪಕ್ಷದ ಶಾಸಕರೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ನೀಡಿದ್ದಾರೆ.

ಮುಖ್ಯಮಂತ್ರಿ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಹಾಲಿ ಶಾಸಕ ಹಾಗೂ ಮಾಜಿ ಉಪ ಸಭಾಪತಿ ಬಿ.ಆರ್.ಪಾಟೀಲ್ ಮತ್ತು ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಅವರು ಪ್ರತ್ಯೇಕವಾಗಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ದೂರು ನೀಡಿದ್ದಾರೆ.

ವಿವಿಧ ಇಲಾಖೆಗೆ ಸಂಬಂಧಿಸಿದ 20ಕ್ಕೂ ಹೆಚ್ಚು ಸಚಿವರಿಗೆ ನಮ್ಮ ಕ್ಷೇತ್ರಕ್ಕೆ ಅನುದಾನ ನೀಡುವಂತೆ ಮನವಿ ಮಾಡಿದ್ದರೂ ಸ್ಪಂದಿಸುತ್ತಿಲ್ಲ. ಅಲ್ಲದೆ, ಅನುದಾನ ಬಿಡುಗಡೆ ಮಾಡುವುದಕ್ಕೂ ಸಚಿವರು ಮೂರನೇ ವ್ಯಕ್ತಿಯ ಮೂಲಕ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದಾರೆ ಎಂದು ದೂರಲಾಗಿದೆ.

ಸ್ಥಳೀಯ ಶಾಸಕರು ನಾವಾಗಿದ್ದರೂ ಅನುದಾನಕ್ಕಾಗಿ ಮೂರನೇ ವ್ಯಕ್ತಿಯ ಮೊರೆ ಹೋಗಬೇಕಾಗಿರುವುದು ಅತ್ಯಂತ ಬೇಸರದ ವಿಷಯ ಎಂದು ಬಿ.ಆರ್.ಪಾಟೀಲ್ ಮತ್ತು ಇತರೆ ಶಾಸಕರು ಸಚಿವರ ವಿರುದ್ಧ ನೇರವಾಗಿ ಆರೋಪ ಮಾಡಿದ್ದಾರೆ.

ಜನರ ವಿಶ್ವಾಸ, ಭರವಸೆ ಹಾಗೂ ಅವರ ಪ್ರೀತಿಯಿಂದ ನಾವು ಶಾಸಕರಾಗಿ ಆಯ್ಕೆಯಾಗಿದ್ದೇವೆ. ಆದರೆ, ನಮ್ಮನ್ನು ಆರಿಸಿ ಕಳುಹಿಸಿದ ಜನರ ವಿಶ್ವಾಸಕ್ಕೆ ತಕ್ಕಂತೆ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಬಿ.ಆರ್.ಪಾಟೀಲ್ ಬರೆದಿರುವ ಪತ್ರಕ್ಕೆ 20ಕ್ಕೂ ಹೆಚ್ಚು ಆಡಳಿತ ಪಕ್ಷದ ಸದಸ್ಯರು ಸಹಿ ಹಾಕಿದ್ದು, ಸಚಿವರ ನಡವಳಿಕೆ ಬಗ್ಗೆ ಕಿಡಿ ಕಾರಿದ್ದಾರೆ.

ಪತ್ರಕ್ಕೆ ಸಹಿ ಹಾಕಿರುವ ಸಿ.ಎಸ್.ನಾಡಗೌಡ, ಪಿ.ಎಂ.ನರೇಂದ್ರಸ್ವಾಮಿ, ಎನ್.ಎಚ್.ಕೋನರೆಡ್ಡಿ ಸೇರಿದಂತೆ ಎಲ್ಲರೂ ಹಿರಿಯ ಶಾಸಕರಾಗಿದ್ದಾರೆ.

ಪತ್ರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರ ವಿರುದ್ಧ ಯಾರೂ ದೂರು ನೀಡಿಲ್ಲ. ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಕೋರಿದ್ದಾರೆ ಎಂದು ತಿಳಿಸಿದ್ದಾರೆ.

ಮತ್ತೊಂದೆಡೆ ಪತ್ರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಶಾಸಕರಿಂದ ಯಾವುದೇ ಪತ್ರ ಬಂದಿಲ್ಲ. ಎಲ್ಲವೂ ಊಹಾಪೋಹ ಎಂದು ಹೇಳಿದ್ದಾರೆ.

ನಮ್ಮ ಪಕ್ಷದ ಶಾಸಕರು ಅವರವರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮ್ಮನೆ ಊಹಾಪೋಹದ ಸುದ್ದಿ ಹಬ್ಬಿಸಬೇಡಿ ಎಂದು ಮಾಧ್ಯಮದವರ ಮುಂದೆ ಕಿಡಿ ಕಾರಿದ್ದಾರೆ.

ಎಲ್ಲಾ ಸಚಿವರು ಶಾಸಕರ ಮಾತು ಕೇಳುತ್ತಿದ್ದಾರೆ. ಎಲ್ಲರೂ ಅವರವರ ಕೆಲಸ ಮಾಡುತ್ತಿದ್ದಾರೆ. ಯಾವುದೇ ಅಸಮಾಧಾನವಿಲ್ಲ. ವರ್ಗಾವಣೆ ಅವಧಿ ಮುಗಿದಿದೆ ಎಂದರು.

ಎಲ್ಲರೂ ಬಹಳ ಆಸೆಯಲ್ಲಿದ್ದಾರೆ. ಆ ಮಾತು ಕೊಟ್ಟಿದ್ದೇನೆ. ಈ ಮಾತು ಕೊಟ್ಟಿದ್ದೇನೆ. ಅವರ ಭರವಸೆ ಈಡೇರಿಸಬೇಕು. ನಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು 10 ಕೋಟಿ, 100 ಕೋಟಿ, 300 ಕೋಟಿ ರೂ. ಕೆಲಸ ಕೇಳುತ್ತಿದ್ದಾರೆ. ಸದ್ಯಕ್ಕೆ ಆಗುವುದಿಲ್ಲ. ತಡೆಹಿಡಿಯಿರಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂದು ಅವರು ಹೇಳಿದರು.

## ಬಿಐಇಟಿಯಲ್ಲಿ ಇಂದು ಕಾರ್ಗಿಲ್ ವಿಜಯ ದಿವಸ್

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಿಂದ 'ಕಾರ್ಗಿಲ್ ವಿಜಯ ದಿವಸ್' ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್.ಬಿ.ಅರವಿಂದ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೇಂದ್ರ ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿ ಯರ್ ಮತ್ತು ಸೇನೆಯ ಶೌರ್ಯ ಪದಕ ಪುರಸ್ಕೃತ ಕ್ಯಾಪ್ಟನ್ ನವೀನ ನಾಗಪ್ಪ ಅಣಬೇರು ಮುಖ್ಯ ಅಥಿತಿಗಳಾಗಿ ಪಾಲ್ಗೊಂಡು ಉಪನ್ಯಾಸ ನೀಡಲಿದ್ದಾರೆ. ಅತಿಥಿಗಳಾಗಿ ಕಾಲೇಜಿನ ನಿರ್ದೇ ಶಕ ಪ್ರೊ. ವೈ. ವೃಷಭೇಂದ್ರಪ್ಪ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಸಂಯೋಜಕರುಗಳಾದ ವಿಭಾಗ ಗಣಿತ ವಿಭಾಗದ ಮುಖ್ಯಸ್ಥ ಡಾ. ಕೆ. ಎಸ್. ಬಸವರಾಜನ್, ಸಂಶೋಧನಾ ಮತ್ತು ಅಭಿವೃದ್ಧಿ ಡೀನ್ ಡಾ. ಎ.ಜಿ.ಶಂಕರಮೂರ್ತಿ ಉಪಸ್ಥಿತರಿರುವರು.

## ಏತ ನೀರಾವರಿ ಹೋರಾಟ ಸಮಿತಿ ಸಭೆ ಇಂದು

ರಾಜನಹಳ್ಳಿ ಇಂದು ಬೆಳಿಗ್ಗೆ 11 ಗಂಟೆಗೆ 22 ಕೆರೆಗಳ ಏತ ನೀರಾವರಿ ಹೋರಾಟ ಸಮಿತಿಯ ಸಭೆಯನ್ನು ಹರಿಹರ ಹೊಳೆ ಹತ್ತಿರ ಇರುವ ಜಾಕ್‌ವೆಲ್ 1 ರ ಬಳಿ (ರಾಜನಹಳ್ಳಿ) ಸಭೆ ಕರೆಯಲಾಗಿದೆ ಎಂದು 22 ಕೆರೆಗಳ ಏತ ನೀರಾವರಿ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಹುಲಿಕಟ್ಟೆ ಎಲ್. ಕೊಟ್ರೇಶ್ ನಾಯ್ಕ್ ತಿಳಿಸಿದ್ದಾರೆ.

# ಮಲೇಬೆನ್ನೂರು ಪುರಸಭೆಗೆ ಶಾಸಕ ಹರೀಶ್ ಭೇಟಿ ನೀರಾವರಿ ಕಛೇರಿಯಲ್ಲಿ ಗೃಹಲಕ್ಷ್ಮಿ ಕೇಂದ್ರಕ್ಕೆ ಸೂಚನೆ



ಮಲೇಬೆನ್ನೂರು, ಜು.25- ಪಟ್ಟಣದ ಪುರಸಭೆ ಕಛೇರಿ ಆವರಣದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಮಹಿಳೆಯರು ಮಳೆಯಲ್ಲೇ ನಿಂತು ಅರ್ಜಿ ಹಾಕುತ್ತಿರುವುದನ್ನು ಕಣ್ಣಾರೆ ಕಂಡ ಶಾಸಕ ಬಿ.ಪಿ. ಹರೀಶ್ ಅವರು ನೀರಾವರಿ ಇಲಾಖೆ ಯಲ್ಲಿ ಖಾಲಿ ಇರುವ ಸಭಾ ಭವನದಲ್ಲಿ ಬುಧ ವಾರ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವಂತೆ ನೀರಾವರಿ ಇಲಾ ಖೆಯ ಇಂಜಿನಿಯರ್‌ಗೆ ಸೂಚನೆ ನೀಡಿದರು.


ಮಂಗಳವಾರ ಇಲ್ಲಿನ ಪುರಸಭೆಗೆ ದಿಢೀರ್ ಭೇಟಿ ನೀಡಿದ ಹರೀಶ್ ಅವರು ಕಛೇರಿ ಆವರಣದಲ್ಲಿ ಜಿಟಿಜಿಟಿ ಮಳೆಯಲ್ಲೇ ಮಹಿಳೆಯರು ನಿಂತಿರುವುದನ್ನು ನೋಡಿದರು. ನಂತರ ಮುಖ್ಯಾಧಿಕಾರಿ ಎ. ಸುರೇಶ್ ಅವರೊಂದಿಗೆ ಈ ಕುರಿತು ಚರ್ಚಿಸಿದಾಗ ನೀರಾವರಿ ಇಲಾಖೆಯ ಕಛೇರಿಯಲ್ಲಿ ಮೀಟಿಂಗ್ ಹಾಲ್ ಖಾಲಿ ಇರುವ ಬಗ್ಗೆ ಮಾಹಿತಿ ಪಡೆದುಕೊಂಡು ಅಲ್ಲಿಗೆ ತೆರಳಿದರು.

ಅಲ್ಲಿ ಮೀಟಿಂಗ್ ಹಾಲ್ ವೀಕ್ಷಿಸಿ ಮಳೆಗಾಲ ಆಗಿರುವುದರಿಂದ ಪುರಸಭೆ ಕಛೇರಿಯಲ್ಲಿ ಮಹಿಳೆಯರು ನಿಲ್ಲಲು ಜಾಗವಿಲ್ಲ. ಹಾಗಾಗಿ ಇಲ್ಲಿ ಅವಕಾಶ ಮಾಡಿಕೊಡಿ ಎಂದು ಕಾರ್ಯ ಪಾಲಕ ಅಭಿಯಂತರ ಸತೀಶ್ ಪಾಟೀಲ್ ಅವರಿಗೆ ಮೊಬೈಲ್ ಮೂಲಕ ಶಾಸಕ ಹರೀಶ್ ಅವರು ಹೇಳಿದಾಗ ಸಮ್ಮತಿ ಸೂಚಿಸಿದರು.

ಬುಧವಾರದಿಂದ ಪಟ್ಟಣದ ಮಹಿಳೆಯರು ನೀರಾವರಿ ಇಲಾಖೆಯ ಮೀಟಿಂಗ್ ಹಾಲ್‌ನಲ್ಲಿ ತೆರೆಯುವ ಕೇಂದ್ರದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸುವಂತೆ ಪುರಸಭೆ ಮುಖ್ಯಾಧಿಕಾರಿಯಾಗಿ ಸುರೇಶ್ ತಿಳಿಸಿದ್ದಾರೆ.

ಭದ್ರಾ ಎಇಇ ಧನಂಜಯ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜು ನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಜಿಗಳೇರ ಹಾಲೇಶಪ್ಪ, ಓ.ಜಿ. ಕುಮಾರ್, ಬಿ. ಸುರೇಶ್, ಎ.ಕೆ. ಲೋಕೇಶ್, ಭೋವಿ ಮಂಜಣ್ಣ, ಆನಂದಚಾರ್, ನ್ಯಾಯಬೆಲೆ ಅಂಗಡಿ ಮಂಜಣ್ಣ, ಜಿ.ಪಿ. ಹನುಮಗೌಡ, ಕೊಮಾರನಹಳ್ಳಿ ಸುನೀಲ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಉಜ್ಜನಪ್ಪ ನಿಧನಕ್ಕೆ ಸಾದರ ಪತ್ತಿನ ಸೌಹಾರ್ದ ಸಹಕಾರಿ ಸಂತಾಪ



ದಾವಣಗೆರೆ, ಜು. 25- ಸ್ಮರಣೀಯ ಕಾರ್ಯ ಮಾಡಿ ನಿಧನರಾದ ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್.ಉಜ್ಜನಪ್ಪ ಅವರಿಗೆ ಸಾದರ ಪತ್ತಿನ ಸೌಹಾರ್ದ ಸಹಕಾರಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಸಹಕಾರಿ ಸ್ಥಾಪಿಸುವಲ್ಲಿ, ಲಯನ್ಸ್ ಸಂಸ್ಥೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಾಗೂ ಸರ್ಕಾರಿ ನೌಕರರ ಸಂಘ ದಲ್ಲಿ ಮತ್ತು ವಿವಿಧ ಸಂಘ-ಸಂಸ್ಥೆಗಳಲ್ಲಿ ಮಾಡಿದ ಸೇವೆಯನ್ನು ಸ್ಮರಿಸಲಾಯಿತು. ಸಹಕಾರಿಯ ಅಧ್ಯಕ್ಷ ಕೆ. ನಾಗಪ್ಪ, ನಿರ್ದೇಶಕರಾದ ಬಿ. ದಿಳ್ಳೆಪ್ಪ, ಷಣ್ಮುಖಪ್ಪ, ಮಲ್ಲಿಕಾರ್ಜುನ, ನಾಗೇಶ್, ಜಗದೀಶ್, ಪರಮೇಶ್ವರಪ್ಪ, ಶಾರದಮ್ಮ, ವಿನಾಯಕ, ಜಯಪ್ರಕಾಶ್ ಮತ್ತಿತರರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

**ಕರುಳಿನ ಆರೋಗ್ಯಕ್ಕೆ ಪಂಚಕರ್ಮ**

ಮನುಷ್ಯನ ಆರೋಗ್ಯ ಅವಲಂಬಿಸಿರುವುದು ಆಹಾರದಲ್ಲಿ,
ಹಾಗೇ ಅದರ ಪಚನಕ್ರಿಯೆ ಕರುಳಿನ ಮೇಲೆ ಅವಲಂಬಿಸಿರುತ್ತದೆ.
ಈ ಕರುಳಿನ ಆರೋಗ್ಯ ಕಾಪಾಡಲು ಮಳೆಗಾಲದಲ್ಲಿ ಆಯುರ್ವೇದದ
ಪಂಚಕರ್ಮ ದಿವ್ಯೌಷಧಿ, ಕರುಳಿನಲ್ಲಿ ಆಗುವ ರೋಗಗಳಾದ
ಹುಣ್ಣಿನಿಂದ ಕ್ಯಾನ್ಸರ್ ವರೆಗೂ ಈ ಚಿಕಿತ್ಸೆಯಿಂದ ತಡೆಗಟ್ಟಬಹುದಾಗಿದೆ.
ಈ ಚಿಕಿತ್ಸೆಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಸಂಪರ್ಕಿಸಿ.

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**

ಎಂ.ಸಿ.ಸಿ. 'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ-2. ಮೊ. 8618642929

ಈ ಚೀಟಿಯನ್ನು ತಂದರೆ ಶೇ. 10% ಚಿಕಿತ್ಸೆಯಲ್ಲಿ ರಿಯಾಯಿತಿ ದೊರೆಯಲಿದೆ.

# ಸಚಿವರ ವಿರುದ್ಧ ದೂರಿನ ಪತ್ರವೇ ನಕಲಿ

**ಶಾಸಕ ಬಿ.ಆರ್. ಪಾಟೀಲ್ ಸ್ಪಷ್ಟನೆ**

ಬೆಂಗಳೂರು, ಜು. 25 - ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಕೋರಿದ್ದಾರೆ, ಶಾಸಕ ಬಿ.ಆರ್. ಪಾಟೀಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಕಳೆದ ವಾರವೇ ಶಾಸಕಾಂಗ ಪಕ್ಷದ ಸಭೆ ನಡೆಯಬೇಕಿತ್ತಾದರೂ, ಅದನ್ನು ಮುಂದೂಡಲಾಗಿತ್ತು.

ಪಾಟೀಲ್ ಅವರು ಬರೆದಿರುವ ಪತ್ರಕ್ಕೆ ಹಲವು ಶಾಸಕರು ಸಹಿ ಹಾಕಿದ್ದಾರೆ. ಆದರೆ, ಈ ಪತ್ರದಲ್ಲಿ ಸಚಿವರ ವಿರುದ್ಧ ಕಿಡಿ ಕಾರಲಾಗಿದೆ ಎಂದು ಹೇಳಲಾಗಿತ್ತು. ಸಚಿವರು ಶಾಸಕರ ಮನವಿಗಳಿಗೆ ಸ್ಪಂದಿಸುತ್ತಿಲ್ಲ, ಮೂರ ನೇ ವ್ಯಕ್ತಿಗಳ ಮೂಲಕ ಹಣದ ಬೇಡಿಕೆ ಇಡುತ್ತಿದ್ದಾರೆ ಎಂದು ದೂರಲಾಗಿದೆ ಎಂದೂ ಹೇಳಲಾಗಿತ್ತು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಶಾಸಕ ಪಾಟೀಲ್, ಶಾಸಕರ ಕುಂದುಕೊರತೆಗಳನ್ನು ಆಲಿಸಲು ಮುಖ್ಯಮಂತ್ರಿಗಳಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಬರೆದ ಮನವಿ ಪತ್ರವನ್ನು ತಿರುಚಿ ಕಿಡಿಗೇಡಿಗಳು ನಕಲಿ ಪತ್ರ ಮಾಡಿ ಹರಿಬಿಟ್ಟಿರುತ್ತಾರೆ ಎಂದರು.

ಈ ಪತ್ರ ನನ್ನದಲ್ಲ. ನಾನು ಕೊಟ್ಟ ಪತ್ರಕ್ಕೂ ಈ ಪತ್ರದಲ್ಲಿರುವ ವಿಷಯಕ್ಕೂ ಸಂಬಂಧವಿಲ್ಲ. ಈ ನಕಲಿ ಪತ್ರದಲ್ಲಿ ನನ್ನ ಸಹಿಯನ್ನು ಫೋಟೋ ಶಾಪ್ ಮೂಲಕ ಅಂಟಿಸಲಾಗಿದೆ. ಅಲ್ಲದೇ ಈ ನಕಲಿ ಪತ್ರದಲ್ಲಿ ನನ್ನ ಹಳೆಯ ಮನೆಯ ವಿಳಾಸ ಇದೆ. ಹೊಸ ಲೆಟರ್‌ಹೆಡ್‌ನಲ್ಲಿ ಹೊಸ ವಿಳಾಸ ಇದೆ ಹಾಗೂ ಪ್ರತಿ ಪತ್ರಕ್ಕೂ ಕ್ರಮ ಸಂಖ್ಯೆ ನೀಡುತ್ತಿದ್ದೇನೆ ಎಂದವರು ವಿವರಿಸಿದ್ದಾರೆ.

ನನ್ನ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ನಡುವೆ ಮನಸ್ತಾಪ ಹಚ್ಚಲು ಕುತಂತ್ರದಿಂದ ಮಾಡಿರುವಂತಿದೆ. ಇದನ್ನು ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೂಡ ಕಲಬುರ್ಗಿ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಲಿದ್ದೇನೆ ಎಂದೂ ಅವರು ಹೇಳಿದ್ದಾರೆ.

# ಮಣಿಪುರದಲ್ಲಿ ಸೀಮಿತ ಇಂಟರ್‌ನೆಟ್‌ಗೆ ಅನುಮತಿ

ಇಂಫಾಲ್, ಜು. 25 - ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ಮಣಿಪುರ ಸರ್ಕಾರ ಭಾಗಶಃ ವಾಪಸ್ ಪಡೆದಿದೆ. ಮೂರು ತಿಂಗಳ ಹಿಂದೆ ಹಿಂಸಾಚಾರ ಆರಂಭವಾದಾಗ ಇಂಟರ್‌ನೆಟ್ ಮೇಲೆ ನಿರ್ಬಂಧ ಹೇರಲಾಗಿತ್ತು. ಆದರೆ, ಮೊಬೈಲ್ ಇಂಟರ್‌ನೆಟ್ ಮೇಲಿನ ನಿರ್ಬಂಧ ಮುಂದುವರೆಸಲಾಗಿದೆ ಎಂದು ರಾಜ್ಯ ಗೃಹ ಇಲಾಖೆ ತಿಳಿಸಿದೆ. ಸ್ಥಿರ ಇಂಟರ್‌ನೆಟ್ ಸೌಲಭ್ಯ ಬಳಕೆಗೆ ಅನುಮತಿ ನೀಡಲಾಗಿದೆ. ಆದರೆ, ಯಾವುದೇ ವೈ ಫೈ ಹಾಟ್‌ಸ್ಪಾಟ್‌ಗಳನ್ನು ನಿರ್ವಹಿಸುವಂತಿಲ್ಲ ಎಂದು ಷರತ್ತು ವಿಧಿಸಲಾಗಿದೆ.

# ದಾವಣಗೆರೆ ಹುಡುಗರು ಅಭಿನಯಿಸಿದ 'ಡೈಮಂಡ್ ಕ್ರಾಸ್'




**ನಾಡಿದ್ದು 28ಕ್ಕೆ ತೆರೆಗೆ**

ದಾವಣಗೆರೆ, ಜು. 25- ಸೈಬರ್ ಕ್ರೈಂ ಕುರಿತಾದ 'ಡೈಮಂಡ್ ಕ್ರಾಸ್' ಚಲನಚಿತ್ರ ನಾಡಿದ್ದು ದಿನಾಂಕ 28ರ ಶುಕ್ರವಾರ ರಾಜ್ಯದ 100 ಚಿತ್ರ ಮಂದಿರಗಳಲ್ಲಿ ಬಿಡುಗಡೆಯಾಗಲಿದೆ ಎಂದು ಚಿತ್ರದ ನಿರ್ದೇಶಕ ರಾಮ್ ದೀಪ್ ತಿಳಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಚಿತ್ರದ ವಿಶೇಷತೆಯೆಂದರೆ ದಾವಣಗೆರೆಯ ಸುಮಾರು 25ಕ್ಕೂ ಹೆಚ್ಚು ಹುಡುಗರು ನಟಿಸಿರುವುದು, ಇದೊಂದು ವಿಭಿನ್ನ ಕಥೆಯಾಗಿದೆ. 12 ವರ್ಷದ ಕೆಳಗೆ ದಿನಗೂಲಿ ಕಾರ್ಮಿಕರ ಮಕ್ಕಳು ಯಾರ ಸಹಾಯವಿಲ್ಲದೇ ಫೈಟಿಂಗ್ ಕಲಿತು ಹಳೇಯ ರೈಸ್ ಮಿಲ್‌ನಲ್ಲಿ ಅಭ್ಯಾಸ ಮಾಡುತ್ತಿದ್ದರು. ಇದನ್ನು ಗಮನಿಸಿದ ದಾವಣಗೆರೆಯ ಆರ್. ಟಿ. ಅರುಣ್‌ಕುಮಾರ್ ಈ ಹುಡುಗರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನನಗೆ ತಿಳಿಸಿದರು. ಆ ಎಲ್ಲಾ ಯುವಕರನ್ನು ಹಾಕಿಕೊಂಡು 'ಡೈಮಂಡ್ ಕ್ರಾಸ್' ಚಿತ್ರ ನಿರ್ಮಾಣ ಮಾಡಲಾಗಿದೆ. ಸೈಬರ್ ಹ್ಯಾಂಕಿಗ್ ಕುರಿತ ಚಿತ್ರ ಇದಾಗಿದೆ. ಏಳೆಂಟು ರೈಲುಗಳು ಒಂದೇ ಕ್ರಾಸ್‌ನಲ್ಲಿ ಒಟ್ಟಿಗೆ ಸಾಗಿದಾಗ ಹೇಗೆ ಡೈಮಂಡ್ ರೂಪ ತಾಳುತ್ತದೆಯೋ ಹಾಗೆಯೇ ಅದರ ಆಧಾರದಲ್ಲಿ ಸಾಗುವ ಕಥೆಯೇ 'ಡೈಮಂಡ್ ಕ್ರಾಸ್ ಚಿತ್ರ ಎಂದರು.

ಚಿತ್ರದ ನಾಯಕ ಸ್ವಾರ್ಥಿಯಾಗಿದ್ದಾಗ ಜೀವನದಲ್ಲಿ ಚೆನ್ನಾಗಿರುತ್ತಾನೆ. ಆದರೆ ಎಲ್ಲರಿಗೂ ಒಳ್ಳೆಯದು ಮಾಡಲು ಹೋದಾಗ ಹೇಗೆ ಕಷ್ಟಗಳನ್ನು ಅನುಭವಿಸುತ್ತಾನೆ ಎನ್ನುವುದೇ ಕಥಾ ಹಂದರ. ಮುಖ್ಯವಾಗಿ ಚಿತ್ರದಲ್ಲಿ ಎಲ್ಲಿಯೂ ಡೂಪ್ ಬಳಸಿಲ್ಲ, ಎಲ್ಲರೂ ನೈಜವಾಗಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಕಥೆಯೇ ಹೀರೋ. ಬಹುತೇಕ ದಾವಣಗೆರೆ, ಶಿವಮೊಗ್ಗ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದರು.

ನಾಯಕ ರಜತ್ ಅಣ್ಣಪ್ಪ ಮಾತನಾಡಿ, ರಾಜ್ಯಾದ್ಯಂತ ದಾವಣಗೆರೆ ಹುಡುಗರ ಚಿತ್ರ ಬಿಡುಗಡೆಯಾಗುತ್ತಿರುವುದು ಸಂತಸ ತಂದಿದೆ. ಅವಕಾಶ ಹುಡುಕುತ್ತಿದ್ದ ವೇಳೆ ಆರ್.ಟಿ. ಅರುಣ್‌ಕುಮಾರ್ ಸಹಾಯ ಮಾಡಿದ್ದಾರೆ. ನಾವು 20 ಹುಡುಗರು ಚಿತ್ರದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ಆ್ಯಕ್ಷನ್ ಚಿತ್ರ ಇದಾಗಿದ್ದು, ಉತ್ತಮವಾಗಿ ಮೂಡಿಬಂದಿದೆ. ಚಿತ್ರಕ್ಕೆ ಜನರ ಸಹಕಾರ ಬೇಕಾಗಿದೆ ಎಂದರು.

ನಾಯಕಿ ರೂಪಿಕಾ ಮಾತನಾಡಿ, ಉತ್ತಮ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಛಲ, ತಾಳ್ಮೆ ಇದ್ದರೆ ಏನೂಬೇಕಾದರೂ ಸಾಧನೆ ಮಾಡಬಹುದು ಎನ್ನುವುದಕ್ಕೆ 'ಡೈಮಂಡ್ ಕ್ರಾಸ್' ಉತ್ತಮ ನಿದರ್ಶನ ಎಂದರು.

ಕಲಾ ಪ್ರೋತ್ಸಾಹಕ ಅರುಣ್ ಕುಮಾರ್ ಮಾತನಾಡಿ, ಇದೊಂದು ವಿಭಿನ್ನ ಕಥೆ, ಇಂದು ಕಂಪ್ಯೂಟರ್‌ಗಳೇ ಗನ್ ಇದ್ದಂತೆ, ಪಾಸ್ ವರ್ಡ್‌ಗಳೇ ಬುಲೆಟ್ ಆಗಿರುವ ಪರಿಸ್ಥಿತಿ ಇದೆ. ಈ ಆಧಾರದಲ್ಲಿ ಸೈಬರ್ ಕ್ರೈಂ ಕುರಿತು ಚಿತ್ರ ರೂಪಿಸಲಾಗಿದೆ. ದಾವಣಗೆರೆಯ ತ್ರಿನೇತ್ರ ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ಮನೀಷ್ ಮೆಹ್ತಾ, ಚಿತ್ರಕಥೆ ಸಂಭಾಷಣೆ ಬರೆದ ರಾಮಚಂದ್ರ ಬಾಬು, ಕೆ.ಮನು, ರೋಹಿತ್ ಉಪಸ್ಥಿತರಿದ್ದರು.

# ವಿಶ್ವ ಸ್ಕೌಟ್ ಜಾಂಬೂರಿಗೆ ಜಿಲ್ಲೆಯ ಇಬ್ಬರ ಆಯ್ಕೆ





ದಾವಣಗೆರೆ, ಜು. 25- ದಕ್ಷಿಣ ಕೊರಿಯಾ ದೇಶದ ಗನ್‌ಸಾನ್‌ಸಿಯಲ್ಲಿ ಆಗಸ್ಟ್ 1 ರಿಂದ 12ರವರೆಗೆ ನಡೆಯಲಿರುವ ವಿಶ್ವ ಸ್ಕೌಟ್ ಜಾಂಬೂರಿಯಲ್ಲಿ ಜಿಲ್ಲೆಯಿಂದ ತರಳಬಾಳು ಜಗದ್ಗುರು ಶಾಲೆಯ ಕು. ಎಸ್. ಕೆ. ಶ್ರೀರಕ್ಷಾ ಭಾಗವಹಿಸಲಿದ್ದಾರೆ.

ಇದೇ ಜಾಂಬೂರಿಯಲ್ಲಿ ಅಂತರರಾಷ್ಟ್ರೀಯ ಸೇವಾ ತಂಡದ ಸದಸ್ಯರಾಗಿ ಹರಿಹರದ ಸೇಂಟ್ ಮೇರಿಸ್ ಕಾನ್ವೆಂಟ್ ಶಾಲೆಯ ಬಿ.ಪಿ. ವಿಜಯ ಕುಮಾರ್ ಭಾಗವಹಿಲಿ ದ್ದಾರೆ.

ವಿಶ್ವದಾದ್ಯಂತ 216 ದೇಶಗಳಿಂದ ಸ್ಕೌಟ್, ಗೈಡ್ ಮಕ್ಕಳು ವಿವಿಧ ಸಾಂಸ್ಕೃತಿಕ ಮತ್ತು ಕೌಶಲ್ಯಾಧಾರಿತ ಕಾರ್ಯ ಕ್ರಮಗಳಲ್ಲಿ ಭಾಗವಹಿಸಲಿದ್ದು, ದಾವಣಗೆರೆ ಸ್ಕೌಟ್, ಗೈಡ್ ಮತ್ತು ನಾಯಕರು ಈ ಹಿಂದೆ 1951 ರಿಂದ ವಿಶ್ವ ಜಾಂಬೂರಿಯಲ್ಲಿ ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಸ್ಕೌಟ್, ಗೈಡ್ ಮಕ್ಕಳಿಗೆ ಜಿಲ್ಲಾ ಮುಖ್ಯ ಆಯುಕ್ತ ಮುರುಘ ರಾಜೇಂದ್ರ ಜೆ. ಚಿಗಟೇರಿ, ಸ್ಕೌಟ್ ಆಯುಕ್ತ ಎ.ಪಿ. ಷಡಾಕ್ಷ ರಪ್ಪ, ಶುಭ ಹಾರೈಸಿದ್ದಾರೆ.

# ಕೊಟ್ಟೂರು ಠಾಣೆಗೆ ಪಿಎಸ್‌ಐ ಗೀತಾಂಜಲಿ

ಕೊಟ್ಟೂರು, ಜು. 25 - ತಾಲ್ಲೂಕಿನ ಪೊಲೀಸ್ ಠಾಣೆಗೆ ಪ್ರಪ್ರಥಮವಾಗಿ ಮಹಿಳಾ



ಪಿಎಸ್‌ಐ ಆಗಿ ಗೀತಾಂಜಲಿ ಶಿಂಧೆ ರವರು ಸೋಮವಾರ ಅಧಿಕಾರ ವಹಿಸಿಕೊಂಡರು. ಪಿಎಸ್‌ಐ ವಿಜಯ ಕೃಷ್ಣ ಅವರು ಅಧಿಕಾರ ವನ್ನು ಹಸ್ತಾಂತರಿಸಿದರು.

ಗೀತಾಂಜಲಿ ಶಿಂಧೆ ಈ ಹಿಂದೆ ಬಳ್ಳಾರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿದ್ದರು.

# ಇಂದಿನ ಶ.ಸಾ.ಪ. ಕಾರ್ಯಕ್ರಮ ಮುಂದಕ್ಕೆ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನಿಂದ ಎ.ಆರ್.ಜಿ. ಕಾಲೇಜಿನಲ್ಲಿ ಇಂದು ಹಮ್ಮಿಕೊಂಡಿದ್ದ ಡಾ.ಫ.ಗು.ಹಳಕಟ್ಟಿಯವರ ಜಯಂತಿ ಕಾರ್ಯಕ್ರಮವನ್ನು ಮುಂದೂಡ ಲಾಗಿದೆ ಎಂದು ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ : 152' 9 ಇಂಚು
ಒಳ ಹರಿವು : 31425 ಕ್ಯೂಸೆಕ್ಸ್
ಹೊರ ಹರಿವು : 175 ಕ್ಯೂಸೆಕ್ಸ್
ಹಿಂದಿನ ವರ್ಷ : 184' 9.5 ಇಂಚು

# ಗೃಹಲಕ್ಷ್ಮಿ ಪ್ರತಿಯೊಬ್ಬರಿಗೂ ಅರ್ಜಿ ಸಲ್ಲಿಸಲು ಅವಕಾಶ

**ಎಸ್ಸೆಸ್,ಎಸ್ಸೆಸ್ಸೆಂ ಸೂಚನೆ ಮೇರೆಗೆ ಕಾಂಗ್ರೆಸ್ ನಿಯೋಗ ಭೇಟಿ**



ದಾವಣಗೆರೆ, ಜು.25- ನಗರದಲ್ಲಿ ಗೃಹಲಕ್ಷ್ಮೀ ಯೋಜನೆಗೆ ಅರ್ಜಿ ಸಲ್ಲಿಸುವ ಸ್ಥಳಕ್ಕೆ ಜಿಲ್ಲಾ ಕಾಂಗ್ರೆಸ್ ಪಕ್ಷದ ನಿಯೋಗ ಭೇಟಿ ನೀಡಿ, ಮಹಿಳೆಯರು ಆತಂಕಕ್ಕೆ ಒಳಗಾಗದಂತೆ ಮನವಿ ಮಾಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ, ದಾವಣಗೆರೆ ಒನ್ ಕೇಂದ್ರಕ್ಕೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮತ್ತು ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಇಂದು ಭೇಟಿ ನೀಡಿದ ನಿಯೋಗ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯ ಅರ್ಜಿ ಸಲ್ಲಿಕೆಗೆ ಯಾರೊಬ್ಬರೂ ಹಣ ನೀಡುವ ಅಗತ್ಯವಿಲ್ಲ. ಈ ಪ್ರಕ್ರಿಯೆ ಸಂಪೂರ್ಣ ಉಚಿತವಾಗಿರಲಿದೆ ಎಂದರು.

ಅರ್ಜಿ ಸಲ್ಲಿಕೆಗಾಗಿ ಯಾರಾದರೂ ಹಣ ನೀಡುವಂತೆ ಒತ್ತಾಯಿಸಿದಲ್ಲಿ, ನಮ್ಮ ಗಮನಕ್ಕೆ ತರುವಂತೆ ತಿಳಿಸಿದ ಮಧ್ಯವರ್ತಿಗಳ ಹಾವಳಿಯಿಲ್ಲದೆ ಸರ್ಕಾರದ ಸೌಲಭ್ಯಗಳನ್ನು ನೇರವಾಗಿ ಜನರಿಗೆ ತಲುಪಿಸಬೇಕು. ಸರ್ಕಾರದ ಯೋಜನೆಗಳ ಗರಿಷ್ಠ ಲಾಭ ಫಲಾನುಭವಿಗಳಿಗೆ ಸಿಗಬೇಕು ಎಂಬುದು ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಆಶಯವಾಗಿದೆ ಎಂದರು.

ಸದ್ಯಕ್ಕೆ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್ ಮತ್ತು ಕರ್ನಾಟಕ ಒನ್ ಸಾರ್ವಜನಿಕ ಸೇವಾ ಕೇಂದ್ರಗಳಲ್ಲಿ ನೋಂದಣಿ ಮಾಡಲಾಗುತ್ತಿದೆ. ಯೋಜನೆಯ ನೋಂದಣಿಗಾಗಿ ಪ್ರಜಾಪ್ರತಿನಿಧಿಗಳನ್ನು ಸರ್ಕಾರ ಶೀಘ್ರ ನೇಮಕ ಮಾಡಿಕೊಳ್ಳಲಿದೆ. ಬಳಿಕ ಪ್ರಜಾಪ್ರತಿನಿಧಿಗಳೇ ಮನೆ, ಮನೆಗಳಿಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ಬ್ಯಾಂಕ್ ಹನುಮಂತಪ್ಪ, ಗೋಪಾಲ್, ಆರೋಗ್ಯ ಸ್ವಾಮಿ, ಸತೀಶ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಹೊರಗುತ್ತಿಗೆ ಮೂಲಕ ಪೊಲೀಸ್ ನೇಮಕ

ಮುಂಬೈ, ಜು. 25 - ಪೇದೆಗಳ ಕೊರತೆ ನೀಗಿಸುವ ಸಲುವಾಗಿ ಮಹಾರಾಷ್ಟ್ರ ಪೊಲೀಸರು 3 ಸಾವಿರ ಸಿಬ್ಬಂದಿಯನ್ನು ಹೊರ ಗುತ್ತಿಗೆ ಮೂಲಕ ಪಡೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಮಹಾರಾಷ್ಟ್ರ ಪೊಲೀಸರು 10 ಸಾವಿರ ಪೇದೆಗಳ ಕೊರತೆ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ರಾಜ್ಯ ಭದ್ರತಾ ನಿಗಮದ ಮೂಲಕ 3 ಸಾವಿರ ಸಿಬ್ಬಂದಿ ಪಡೆಯಲು ಅನುಮತಿ ನೀಡಲಾಗಿದೆ. 1 ವರ್ಷಗಳ ತರಬೇತಿಯ ನಂತರ ಈ ಸೇರ್ಪಡೆ ಮಾಡಿಕೊಳ್ಳಲಾಗುವುದು.

# ತಾರಸಿಯಿಂದ ಬೀಳಿಸಿದ ಕಾಡು ಬೆಕ್ಕು, ಶಿಶು ಸಾವು

ಬಡೌನ್, ಜು. 25 - ತಾಯಿಯ ಜೊತೆ ಮಲಗಿದ್ದ ಶಿಶುವನ್ನು ಕಾಡು ಬೆಕ್ಕೊಂದು ಎತ್ತಿಕೊಂಡು ಮನೆಯ ತಾರಸಿಯಿಂದ ಬೀಳಿಸಿ ಸಾವಿಗೆ ಕಾರಣವಾದ ಘಟನೆ ನಡೆದಿದೆ ಎಂದು ಉತ್ತರ ಪ್ರದೇಶ ಪೊಲೀಸರು ತಿಳಿಸಿದ್ದಾರೆ.

ಸೋಮವಾರ ರಾತ್ರಿ ಇಲ್ಲಿನ ಉಸಾವನ್ ಪೊಲೀಸ್ ಠಾಣೆ ಪ್ರದೇಶದಲ್ಲಿ ಈ ಘಟನೆ ನಡೆದಿದೆ.

15 ದಿನದ ಹಸುಳೆಯನ್ನು ಕಾಡು ಬೆಕ್ಕು ಬಾಯಲ್ಲಿ ಕಚ್ಚಿಕೊಂಡು ಹೋಗಿತ್ತು. ಮಗುವಿನ ತಂದೆ ಬೆಕ್ಕನ್ನು ಬೆನ್ನಟ್ಟಿದರು. ಆದರೂ, ಬೆಕ್ಕು ಮನೆಯ ಮೇಲಿನಿಂದ ಶಿಶುವನ್ನು ಬೀಳಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ತಾಯಿ ಆಸ್ಮಾ ಅವರು ಅಲ್ಫಿಫಾ ಹಾಗೂ ರಿಹಾನ್ ಎಂಬ ಹೆಸರಿನ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದರು. ಆನಂತರದಿಂದಲೂ ಬೆಕ್ಕು ಮನೆಯ ಸುತ್ತ ಕಂಡು ಬರುತ್ತಿತ್ತು. ಮನೆಯವರು ಬೆಕ್ಕನ್ನು ಓಡಿಸುತ್ತಿದ್ದರು. ಆದರೂ, ಸೋಮವಾರ ರಾತ್ರಿ ರಿಹಾನ್ ಎಂಬ ಮಗುವನ್ನು ಬೆಕ್ಕು ಎತ್ತಿಕೊಂಡು ಹೋಗಿದೆ ಎಂದು ತಂದೆ ಹಸನ್ ತಿಳಿಸಿದ್ದಾರೆ.

ಆಧುನಿಕ ಕ್ಯಾನ್ಸರ್ ಆರೈಕೆ ಈಗ ನಿಮ್ಮ ಸಮೀಪದಲ್ಲೇ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

- ಕೀಮೋಥೆರಪಿ
- ಟಾರ್ಗೆಟೆಡ್ ಥೆರಪಿ
- ಇಮ್ಯುನೊಥೆರಪಿ
- ಹಾರ್ಮೋನಲ್ ಥೆರಪಿ
- ಮೆಟ್ರೋನಾಮಿಕ್ ಕೀಮೋಥೆರಪಿ (ಕಡಿಮೆ ಡೋಸ್ ಮೌಖಿಕ ಕೀಮೋಥೆರಪಿ)
- ಪಾಲಿಯೇಟಿವ್ ಕೇರ್

"ಆರಂಭಿಕ ಹಂತದಲ್ಲಿ ಪತ್ತೆಮಾಡಿದರೆ ಕ್ಯಾನ್ಸರ್ ಗುಣಪಡಿಸುವ ಸಾಧ್ಯತೆ ಹೆಚ್ಚು"

ಕ್ಯಾನ್ಸರ್ ಚಿಕಿತ್ಸೆ ಮತ್ತು ಕ್ಯಾನ್ಸರ್ ಶಸ್ತ್ರಚಿಕಿತ್ಸಾ ಸೇವೆಗಳು

ಆಯುಷ್ಮಾನ್ ಭಾರತ್ ಯೋಜನೆಯಡಿ ಲಭ್ಯ



ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ 08192-260111

ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ) ತರಳಬಾಳು ಲೇಔಟ್, ದಾವಣಗೆರೆ | 08192-260333/260222/7022260111

The Symbol of Trust

ಆರ್. ಹೆಚ್. ರಾಧಾಕೃಷ್ಣ ಗುಪ್ತ ಜ್ಯೂಯಲರ್ಸ್ ಪ್ರ. ಲಿ.

ವಜ್ರ - ಪ್ಲಾಟಿನಂ - ಬಂಗಾರ - ಬೆಳ್ಳಿ

JOB VACANCY

One of the leading Jewellery brands in Davanagere

Requires the following personnel

TALLY EXPERT (Male/Female)

Qualification: Bcom/Mcom/MBA Finance

Experience: Minimum 1 year in Tally & Excel


Interested candidates can email their profiles to info@rhrjewellers.com or Whatsapp to : 9380350327

R.H.RADHAKRISHNA GUPTA JEWELLERS PVT. LTD.

#17, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ 91640 39991 | 91640 39992 | 91640 19993

8550833300 6366581119 info@rhrjewellers.com www.rhrjewellers.com

Valet Parking Available



ಶ್ರೀ ವಿಶ್ವಬಂಧು ಕ್ರೆಡಿಟ್ ಕೋ - ಆಪರೇಟಿವ್ ಸೊಸೈಟಿ ನಿ.,

2022-23ನೇ ಸಾಲಿನ 25ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಆತ್ಮೀಯ ಸಹಕಾರಿ ಬಂಧುಗಳೇ,

ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ, ಇದರ

ಬೆಳ್ಳಿಹಬ್ಬ ಮಹೋತ್ಸವ ನೆನಪಿನ ಶಿವ ಸದನದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ




ದಿನಾಂಕ : 27.07.2023ನೇ ಗುರುವಾರ, ಮಧ್ಯಾಹ್ನ : 12.00 ಗಂಟೆಗೆ.

ಸ್ಥಳ : ಸಿದ್ದೇಶ್ವರ ಪ್ಯಾಲೇಸ್, ತರಳಬಾಳು ಶಾಲೆ ಮುಂಭಾಗ, ಶಿವಮೊಗ್ಗ ರಸ್ತೆ, ಹರಿಹರ-577601.

ನೂತನ ಕಟ್ಟಡದ ಉದ್ಘಾಟನೆ ಹಾಗು ದಿವ್ಯ ಸಾನ್ನಿಧ್ಯ

ಶ್ರೀ ಡಾ|| ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು

ಪಟ್ಟಾಧ್ಯಕ್ಷರು, ತರಳಬಾಳು ಶಾಖಾಮಠ, ಸಾಣೇಹಳ್ಳಿ.

ಅಧ್ಯಕ್ಷತೆ : ಶ್ರೀ ಬಿ. ರಾಮಚಂದ್ರಪ್ಪ, ಸಹಕಾರ ರತ್ನ ಪುರಸ್ಕೃತರು ಅಧ್ಯಕ್ಷರು, ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ.

ಸ್ಮರಣ ಸಂಚಿಕೆ ಉದ್ಘಾಟನೆ : ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್ವರರವರು, ಸಂಸದರು ಹಾಗೂ ಮಾಜಿ ಸಚಿವರು, ಭಾರತ ಸರ್ಕಾರ.

ಕಾರ್ಯಕ್ರಮ ಉದ್ಘಾಟನೆ : ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು, ಸಚಿವರು, ಕರ್ನಾಟಕ ಸರ್ಕಾರ

ನೂತನ ಶಾಖೆಗಳ ಉದ್ಘಾಟನೆ : ಸನ್ಮಾನ್ಯ ಶ್ರೀ ಎಸ್.ಎ ರವೀಂದ್ರನಾಥ, ಮಾಜಿ ಸಚಿವರು, ದಾವಣಗೆರೆ.

ನೆನಪಿನ ಕಾಣಿಕೆ ಉದ್ಘಾಟನೆ : ಸನ್ಮಾನ್ಯ ಶ್ರೀ ಬಿ.ಪಿ. ಹರೀಶ್, ಶಾಸಕರು, ಹರಿಹರ.

ಮುಖ್ಯ ಅತಿಥಿಗಳು :

ಶ್ರೀ ಬಿ. ಹಾಲೇಶಪ್ಪ, ಅಧ್ಯಕ್ಷರು, ಡಿಸಿ.ಸಿ. ಬ್ಯಾಂಕ್, ದಾವಣಗೆರೆ.
ಶ್ರೀ ಬಿ. ಜಗದೀಶ್, ಮಾಜಿ ಅಧ್ಯಕ್ಷರು, ಕೆ.ಎಂ.ಎಫ್, ಶಿವಮೊಗ್ಗ ಹಾಗೂ ನಿರ್ದೇಶಕರು, ಡಿ.ಸಿ.ಸಿ. ಬ್ಯಾಂಕ್, ದಾವಣಗೆರೆ.
ಶ್ರೀಮತಿ ಅನ್ನಪೂರ್ಣಮ್ಮ, ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ.
ಶ್ರೀಮತಿ ಮಂಜುಳಾ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ.

ಸನ್ಮಾನ :

ಶ್ರೀಮತಿ ಸರೋಜಮ್ಮ ಎನ್. ಪಾಟೀಲ್, ಸಾವಯವ ಕೃಷಿ ತಜ್ಞರು, ನಿಟ್ಟೂರು.
ಕುಮಾರಿ ಭೂಮಿಕಾ, ಶಿಬಾರ ಸರ್ಕಲ್, ಹರಿಹರ. ಕರ್ನಾಟಕದಿಂದ ಭಾರತೀಯ ನೌಕಾಪಡೆಗೆ ಆಯ್ಕೆಯಾದ ಏಕೈಕ ಅಭ್ಯರ್ಥಿ



ಶ್ರೀ ಬಿ. ರಾಮಚಂದ್ರಪ್ಪ, ಬೆಳ್ಳೂಡಿ. ಅಧ್ಯಕ್ಷರು | ಶ್ರೀಮತಿ ಡಿ. ವನಜಾಕ್ಷಮ್ಮ ಕುಂಬಳೂರು, ಉಪಾಧ್ಯಕ್ಷರು. | ಶ್ರೀ ಕೆ.ಕುಮಾರ್, ಹೊಳೆಸಿರಿಗೆರೆ ನಿರ್ದೇಶಕರು | ಶ್ರೀ ಹೆಚ್. ನಾಗರಾಜ್ ಅಮರಾವತಿ, ನಿರ್ದೇಶಕರು | ಶ್ರೀ ಹೆಚ್. ಶಾಂತವೀರಪ್ಪ, ಯಲವಟ್ಟಿ, ನಿರ್ದೇಶಕರು | ಶ್ರೀ ಕೆ. ದೇವೇಂದ್ರಪ್ಪ, ಹೊಳೆಸಿರಿಗೆರೆ, ನಿರ್ದೇಶಕರು | ಶ್ರೀ ಕೆ.ಜಿ. ಮೂರ್ತಿ, ಕುಂಬಳೂರು ನಿರ್ದೇಶಕರು



ಶ್ರೀ ಕೆ.ಎಸ್. ದೇವರಾಜ್, ಕುಂಬಳೂರು, ನಿರ್ದೇಶಕರು | ಶ್ರೀಮತಿ ಪಾರ್ವತಮ್ಮ ಶೇಖರಪ್ಪ, ಹರಿಹರ, ನಿರ್ದೇಶಕರು | ಶ್ರೀ ಜಿ. ಮಲ್ಲಪ್ಪ, ಬೆಳ್ಳೂಡಿ ನಿರ್ದೇಶಕರು | ಶ್ರೀ ಕಡೆಮನಿ ಪುಟ್ಟಪ್ಪ, ಕುಂಬಳೂರು, ನಿರ್ದೇಶಕರು | ಶ್ರೀ ಎನ್. ನಾಗರಾಜ್, ಹೊಳೆಸಿರಿಗೆರೆ ನಿರ್ದೇಶಕರು | ಶ್ರೀ ಎನ್. ಕೆ. ಪ್ರಕಾಶ್, ಬೆಳ್ಳೂಡಿ, ನಿರ್ದೇಶಕರು | ಶ್ರೀ ಕೆ.ಟಿ. ಶಂಭುಲಿಂಗಪ್ಪ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ತಾಲ್ಲೂಕಿನ ಎಲ್ಲಾ ಸಹಕಾರ ಸಂಸ್ಥೆಗಳ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಸಂಘದ ಪರವಾಗಿ ಆತ್ಮೀಯವಾಗಿ ಆಹ್ವಾನಿಸುತ್ತೇವೆ. ತಾವುಗಳು ಭಾಗವಹಿಸಬೇಕಾಗಿ ಕೋರಿದೆ.

ಸರ್ವರಿಗೂ ಸುಸ್ವಾಗತ

ವಿ.ಸೂ.: 2022-23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 27.07.2023ನೇ ಗುರುವಾರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.